ಮಾತನಾಡೋಣವೆಂದು ಯೋಚನೆ ಮಾಡಿದ್ದೆ. ಆದರೆ ಸಮಯದ ಮಿತಿಯಲ್ಲಿ ಕಡಿವಾಣವನ್ನು ಹಾಕಿಕೊಂಡು ನಾನು ಆದಷ್ಟು ಬೇಗ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಈ ಅಧಿವೇಶನದ ಬಗ್ಗೆ ಕೂಡ ಹೇಳುತ್ತಿದ್ದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಿಳಿಸಿರುವಂತೆ ನಾವೆಲ್ಲರೂ ಕೂಡ ಹೆಮ್ಮೆ ಪಡತಕ್ಕಂಥ ರೀತಿಯಲ್ಲಿ ಒಂದು ವಿಶೇಷ ಅಧಿವೇಶನ ಕರೆದಿರುವಂಥದ್ದು ಇದಾಗಿದೆ. ಈ ದೇಶದ ಶಾಸಕಾಂಗದ ಇತಿಹಾಸದಲ್ಲಿ ವಿಶೇಷವಾದಂಥ ಚರ್ಚೆಯನ್ನು ಮಾಡುವುದಕ್ಕಾಗಿ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಎನ್ನತಕ್ಕಂಥ ಒಂದು ಹೆಗ್ಗಳಿಕೆ ಕೂಡ ನಿಮ್ಮ ಪಾಲಿಗೆ ಇದೆ. ಇಲ್ಲ ಎಂದು ಹೇಳತಕ್ಕಂಥದ್ದಲ್ಲ. ಆದರೆ ಈ ಅಧಿವೇಶನದಲ್ಲಿ ಯಾವ ವಿಷಯಗಳು ಚರ್ಚೆಯಾಗಬೇಕು ಎಂದು ಹೇಳಿ ಪ್ರಾರಂಭ ಮಾಡಿದ್ದರು ತುಂಬಾ ಒಳ್ಳೆಯದು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯ ಮತ್ತು ಇದಕ್ಕೆ ಪೂರಕವಾಗಿರತಕ್ಕಂತ ವಿಷಯಗಳಾದ ಬರ ಮತ್ತು ಅತಿವೃಷ್ಟಿ ವಿಷಯಗಳೂ ಕುಡ ಇದಕ್ಕೆ ಸೇರಸಿಕೊಂಡಂತೆ ಇರುವುದಾಗಿದೆ.

ಆ) ವಿಷಯ : ರಾಜ್ಯದಲ್ಲಿ ಉಂಟಾದ ಭೀಕರ ಬರ ಹಾಗೂ ಅತೀವೃಷ್ಟಿಯ ಬಗ್ಗೆ ಚರ್ಚೆ

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮುಂದು): ಮೊದಲನೇ ಭಾಗದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಾಲ್ಕು ದಿನಗಳ ಕಾಲ ಬಹಳ ಸುದೀರ್ಘವಾಗಿ ಚರ್ಚೆಯಾಗಿ, ಪೂರ್ಣವಾಗಿದೆ. ಈಗ ಇದು ಎರಡನೇ ಭಾಗ. ಈ ಅಧಿವೇಶನದಲ್ಲಿ ಎರಡನೇ ಭಾಗ ಬರ ಮತ್ತು ಅತೀವೃಷ್ಟಿ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ನಾಲ್ಕು ದಿನಗಳು ನಡೆದಂತಹ ಚರ್ಚೆಯ ಬಗ್ಗೆ ನಾನು ಯಾವುದೇ ಸ್ಪಷ್ಟೀಕರಣ ಕೇಳುವುದಿಲ್ಲ. ಮಾನ್ಯ ಬಸವರಾಜ್ ಬೊಮ್ಮಾಯಿಯವರು ಕೂಡ ಮಾನ್ಯ ಮುಖ್ಯಮಂತ್ರಿಗಳ ಕೂಡ ತೃಪ್ತಿಯಾಗಲಿಲ್ಲ. ಅದಕ್ಕೆ ಕಾರಣ ಕೂಡ ಇದೆ. ಒಂದು ವರ್ಷದ ಹಿಂದೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಚುನಾವಣಾ ಪ್ರಣಾಳಿಕೆ ಏನಿತ್ತು, ಬಹುಶ: ಆಗ ಕೊಟ್ಟಂತಹ ಆಶ್ವಾಸನೆಗಳನ್ನು ಮಾಧ್ಯಮದ ಮಿತ್ರರು ಈಗಾಗಲೇ ಪ್ರಶ್ನೆ ಮಾಡಿದರು. ನೀವು ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕಾರ್ಯಗತ ಮಾಡುತ್ತೇವೆಂದು ಇಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೀರಲ್ಲ, ಇದಕ್ಕೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ಬೇಕು, ಇಷ್ಟು ಡಿಢಠಣಡಿಛಿಜ ಟಠಿಳಟುದಜ ಮಾಡುವುದಕ್ಕೆ ನಿಮಗೆ ಸಾಧ್ಯವಿದೆಯೇ ಎಂದು

ಕೇಳಿದಾಗ ಅಂದು ಪಕ್ಷದ ನಾಯಕರಾಗಿದ್ದಂತಹ ಮಾನ್ಯ ಯಡಿಯೂರಪ್ಪನವರು ನಾನು ಮಾಡಿ ತೋರಿಸುತ್ತೇನೆಂದು ಹೇಳಿದರು. ನೀವು ಬಂದಮೇಲೆ ಬಜೆಟ್ ಒಂದು ಲಕ್ಷ ಕೋಟಿ ರೂಪಾಯಿ ಅಲ್ಲ, 65 ಸಾವಿರ ಕೋಟಿ ರೂಪಾಯಿಗೆ ಇಳಿಯಿತು. ಮತ್ತೆ ಅದು ಖೋತಾ ಆಯಿತು, 65 ಸಾವಿರ ಕೋಟಿ ರೂಪಾಯಿ ಕೂಡ ಆಗಲಿಲ್ಲ. ಏಕೆಂದರೆ resources mobilization ಆಗಲಿಲ್ಲವೆಂದು ಹೇಳಿದೆ. ಈಗಲೂ ಕೂಡ ನೀವು ಈ ನಾಲ್ಕು ದಿನಗಳಲ್ಲಿ ಪ್ರಸ್ತಾಪ ಮಾಡಿರುವಂತಹ ಪ್ರಾಸ್ತಾವಿಕ ನುಡಿಗಳು ನೋಡಿದರೆ ಮತ್ತೆ ನೀವು ಭವಿಷ್ಯದ ಹೆಜ್ಜೆಗಳು 37 ಅಂಶಗಳ ಕಾರ್ಯಕ್ರಮವನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಮಾನ್ಯ ಸದಸ್ಯರು, ನೀವು ಇಷ್ಟು ಕೊಟ್ಟಿದ್ದೀರಲ್ಲ, resources mobilization ಎಲ್ಲಿ ಮಾಡುತ್ತೀರಿ? ಇದಕ್ಕೆ ಬೇಕಾದಂತಹ ಸಂಪನ್ಮೂಲಗಳ ಕೊರತೆ ಇಲ್ಲವೇ ಎನ್ನುವುದನ್ನು ಅಂದು ಪ್ರಶ್ನೆ ಮಾಡಿದರು. ಬಹುಶ: ಅದು ಇಲ್ಲ, ಏಕೆಂದರೆ ಮಾನ್ಯ ಜಯಚಂದ್ರರವರು ಮಾತನಾಡಿದಂತಹ ಸಮಯದಲ್ಲಿ ಬರ ಪರಿಹಾರಕ್ಕೆ ಸಂಬಂಧಪಟ್ಟಂತೆ ಬಹಳ ಮಾರ್ಮಿಕವಾಗಿ ಮಾತನಾಡಿದರು. ಇಲ್ಲಿ ನಮ್ಮ ಕಂದಾಯ ಮಂತ್ರಿಗಳೂ ಕೂಡ ಇದ್ದಾರೆ. ನೀವು ಇದಕ್ಕೆ ಸಿದ್ಧತೆ ಮಾಡಿದ್ದೇವೆ, ಸಾಕಷ್ಟು ಹಣ ಇದೆ ಎಂದು ಹೇಳಿದ್ದಿರಲ್ಲ, ಆದರೆ ಮೌಖಿಕವಾಗಿ ನೀವು ಜಿಲ್ಲಾಧಿಕಾರಿಗಳಿಗೆ ತಿಳಿಸಿರುವ ಪ್ರಕಾರ ನಮಗೆ ಹಣದ ಕೊರತೆ ಇದೆ ಎನ್ನುವುದನ್ನು ತೋರಿಸುತ್ತದೆ. ಅದಕ್ಕೋಸ್ಕರ ಹಿನ್ನೆಲೆಯನ್ನು ಹೇಳಿದೆ. ನೀವು ಹೋಗತಕ್ಕಂಥ ವೇಗ ಇದೆಯಲ್ಲ, ಅದನ್ನು ನೀವು ಸ್ವಲ್ಪ ಯೋಚನೆ ಮಾಡಬೇಕು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರವೇ ಹಣಕಾಸಿನ ಇಲಾಖೆ ಇದೆ. ಸಂಪನ್ಮೂಲಗಳ ಕೊರತೆ ಇದೆ, ಸಂಪನ್ಮೂಲಗಳನ್ನು ಕ್ರೂಢೀಕರಿಸಿದಾಗ ಮಾತ್ರ ನೀವು ಕೊಟ್ಟಂತಹ ಆಶ್ವಾಸನೆಗಳು, ನಿಮ್ಮ ಪ್ರಾಸ್ತಾವಿಕ ನುಡಿಗಳು, ಭವಿಷ್ಯದ ಹೆಜ್ಜೆಗಳು, ಬಜೆಟ್‌ನಲ್ಲಿ ನಿಮ್ಮ ಭರವಸೆಗಳೂ ಕೂಡ ಈಡೇರುವುದಕ್ಕೆ ಸಾಧ್ಯ. ಇಲ್ಲದಿದ್ದರೂ ಇವೆಲ್ಲವೂ ಬಹಳ ಕಷ್ಟಕರವಾಗಿವೆ ಎನ್ನುವ ರೀತಿಯಲ್ಲಿ ಇದೆ. ಆದಾಗ್ಯೂ ನೀವು ಬಹಳ ಉತ್ಸಾಹದಿಂದ ಹೇಳುತ್ತಿರುವುದು ಏನಾಗಿದೆ ಎಂದರೆ ಆ ಒಂದು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗುತ್ತಿಲ್ಲ ಎಂದು ನಿಮ್ಮದ್ದು derail ಆಗುತ್ತಿದೆ, ಹಳಿ ತಪ್ಪುತ್ತಿದೆ. ಏಕೆಂದರೆ over speed ಆದರೆ derail ಆಗುವುದು ಸಾಧ್ಯ. ಆದ್ದರಿಂದ ಮಾತಿನ ಭರವಸೆಗಳ ಉತ್ಸಾಹದಿಂದ ಇದು ಆಗುತ್ತಿಲ್ಲ. ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಾ, ಇದಕ್ಕೆ ಸ್ಪಷ್ಟೀಕರಣ ಕೊಡಿ ಎಂದು ಕೇಳುತ್ತಿಲ್ಲ. ಇವತ್ತು ಗ್ರಾಮೀಣ ಭಾರತದ ಹಿನ್ನೆಲೆಯಲ್ಲಿ ಇದು

ತುಂಬಾ ಚೆನ್ನಾಗಿ ಚರ್ಚೆಯಾಗಿದೆ. ನಿಜ, ಇವತ್ತು ನಮ್ಮಲ್ಲಿ ಎರಡು ಭಾರತಗಳು ಇವೆ. 21ನೇ ಶತಮಾನಕ್ಕೆ ನಾವು ಬಂದಾಗಲೂ ಕೂಡ ಈ ಸ್ಪರ್ಧಾತ್ಮಕವಾದಂತಹ, ವೈಜ್ಞಾನಿಕವಾದಂತಹ ಯುಗದಲ್ಲಿ, ದಿನೇದಿನೇ ವೈಜ್ಞಾನಿಕವಾದಂತಹ ಸಂಶೋಧನೆಗಳಿಂದ ಮನುಷ್ಯನ ಮುಂದೆ ಒಂದು ಪ್ರಶ್ನೆ ಬಂದಿದೆ. ನಮಗೆ ಇಂತಹ ಅದ್ಭುತವಾದ ಬುದ್ಧಿಶಕ್ತಿ ಇದೆ ಎನ್ನುವಂತಹ ಯುಗದಲ್ಲೂ ಕೂಡ ತಾರತಮ್ಯ ಇರುವುದನ್ನು ಕಾಣುತ್ತಿದ್ದೇವೆ. ನಗರ ಪಟ್ಟಣಗಳಿಂದ ಕೂಡಿರುವಂತಹ ಭಾರತ ಮತ್ತು ಗ್ರಾಮೀಣ ಭಾರತ. ಹಾಗಾಗಿ ನಾವು ಬಹುತೇಕ ಸದಸ್ಯರು ಗ್ರಾಮೀಣ ಪ್ರದೇಶದಿಂದ ಆಯ್ಕೆಯಾಗಿ ಬಂದಂತಹ ಪ್ರತಿನಿಧಿಗಳು, ಆದಾಗ್ಯೂ ಗ್ರಾಮೀಣ ಭಾರತದ ಹಿನ್ನೆಲೆಯಲ್ಲಿ ಇವತ್ತು ಬಹಳ ಮುಖ್ಯವಾದಂತಹ ವಿಶೇಷ ಚರ್ಚೆ ಕೂಢ ಆಗಿದೆ. ಇವತ್ತು ಆಯವ್ಯಯದಲ್ಲಿ ಕೂಡ ನಮಗೆ ಇರುವಂತಹ ಬೇಡಿಕೆಗಳ ಬಗ್ಗೆ ಚೆನ್ನಾಗಿ ಚರ್ಚೆಯಾಗಬೇಕಾಗಿತ್ತು, ವಿಶೇಷ ಯೋಜನೆಗಳ ಬಗ್ಗೆ ಚರ್ಚೆಯಾಗಬೇಕಾಗಿತ್ತು, ಆದರೆ ಅರ್ಥಪೂರ್ಣವಾದಂತಹ ಚರ್ಚೆಯಾಗಲಿಲ್ಲ. ಇವತ್ತು ಈ ವಿಶೇಷವಾದಂತಹ ಅಧಿವೇಶನದಲ್ಲಿ ತಾವು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲ. ನಾನು ತಮಗೆ ಹೇಳುತ್ತಿದ್ದೆ. ಇದಕ್ಕಿಂತಲೂ ಕೂಡ ಇದೇ ರೀತಿಯಾಗಿ ಕಿತ್ತು ತಿನ್ನುವಂತಹ ಅನೇಕ ಇಲಾಖೆಗಳ ಬಗ್ಗೆ, ಜನರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಉದಾಹರಣೆಗೆ ನಾನು ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವಂತಹ ದಲಿತರು ಮತ್ತು ಆದಿವಾಸಿಗಳು. ಇದರ ಬಗ್ಗೆ ಮೊನ್ನೆ ತಾನೆ ನೋಡಿದಿರಿ. ಬರದ ಬಗ್ಗೆ ಚರ್ಚೆ ಮಾಡುತ್ತೇವೆ. ಈ ದೇಶದ ಆದಿವಾಸಿಗಳ ಸ್ಥಿತಿಗತಿಗಳು ಹೇಗಿದೆ? ನಾನು ಮೂರ್ನಾಲ್ಕು ದಿನಗಳ ಹಿಂದೆ ಒಂದು ಪತ್ರಿಕೆಯಲ್ಲಿ ಓದಿದೆ. ಹಾದಿಯಲ್ಲಿರುವಂತಹ ಆದಿವಾಸಿಗಳ ಜನಜೀವನದ ವ್ಯವಸ್ಥೆ ಹೇಗಿದೆ ಎಂದು ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇವತ್ತೂ ಕೂಡ ಅವರಿಗೆ ನಾಗರೀಕ ಸಮಾಜದಲ್ಲಿ ಯಾವುದೇ ರೀತಿಯಾದಂತಹ ಕನಿಷ್ಟ ಸೌಲಭ್ಯಗಳು ಕೂಡ ಇಲ್ಲ. ಅವರ ಮಕ್ಕಳಿಗೆ ಸರಿಯಾದಂತಹ ಪೌಷ್ಟಿಕ ಆಹಾರಗಳು ಇಲ್ಲ, ಅವರ ಕೈಗಳಿಗೆ ಕೆಲಸವಿಲ್ಲ, ಆಶ್ರಮ ಶಾಲೆಗಳಿಂದ ಅವರಿಗೆ ಯಾವುದೇ ರೀತಿಯಾದಂತಹ ಅನುಕೂಲತೆಗಳು ಆಗುತ್ತಿಲ್ಲ. ಅವರಿಗೆ ಸಿಗುತ್ತಿರುವಂತಹ 30 ರೂಪಾಯಿ ದಿನಗೂಲಿಯಲ್ಲಿ ಅವರ ಜೀವನ ಹೇಗೆ ನಡೆಯುತ್ತದೆ? ಒಂದು ಕಡೆ ಪ್ರಕೃತಿ ವಿಕೋಪದಿಂದ

ಬರುವಂತಹ ಅತೀವೃಷ್ಠಿ ಮತ್ತು ಬರದ ಬಗ್ಗೆ ಚರ್ಚೆ ಮಾಡುತ್ತೇವೆ. ಆದರೆ ತಲಾತಲಾಂತರದಿಂದ ಬರದಲ್ಲೇ ನರಳುವಂತಹ ಜನರಿದ್ದಾರಲ್ಲ, ಅವರಿಗೆ ಮಾನವೀಯತೆ ದೃಷ್ಟಿಯಿಂದ, ನಾವು ಬೇಡಿಕೆ ಬಗ್ಗೆ ಮಾತನಾಡುವುದರ ಜೊತೆಗೆ ಈ ವಿಚಾರಕ್ಕೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ವಿಶೇಷ ಅಧಿವೇಶನ ಎಂದರೆ ಆ ರೀತಿಯ ವಿಚಾರಗಳನ್ನು ಚರ್ಚೆ ಮಾಡಬೇಕು. ಇವತ್ತು ದಲಿತರ ಮೇಲೆ ಈ ಕ್ಷಣದಲ್ಲಿ ಕೂಡ for stupid reason, ಒಂದು ಕ್ಷುಲಕವಾದಂತಹ ಕಾರಣಕ್ಕೋಸ್ಕರ ಎಂತಹ ದೌರ್ಜನ್ಯ, ದಬ್ಬಾಳಿಕೆಗಳು ಇವತ್ತು ನಡೆಯುತ್ತಿದೆ. ಇವತ್ತು ಕೂಡ ಗ್ರಾಮೀಣ ಪ್ರದೇಶದಲ್ಲಿ ಅವರ ಸ್ಥಿತಿಗತಿಗಳು ಹೇಗಿದೆ ಎಂದು ಅರ್ಥ ಮಾಡಿಕೊಂಡಿದ್ದೇವೆಯೇ? ಇವತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ನಾವೆಲ್ಲರೂ ಕೂಡ ಜನ ಪ್ರತಿನಿಧಿಗಳಾಗಿರುವಂಥವರು. ಇವತ್ತು ಹಳ್ಳಿಗಳಲ್ಲಿ ಸಾಮಾಜಿಕ ಸಾಮರಸ್ಯ ಇದೆಯೇ ಎಂದು ಯೋಚನೆ ಮಾಡಬೇಕಾಗಿದೆ. ಗ್ರಾಮೀಣಾಭಿವೃದ್ಧಿಯ ಕನಸನ್ನು ನನಸು ಮಾಡುವುದಕ್ಕೆ ಇವತ್ತು ಸಾಧ್ಯವೇ? ಅಲ್ಲಿ ಹೇಗಿದೆ? ಇವತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ, ಅಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದೇವೆ. ಎಲ್ಲಿಂದ ಗ್ರಾಮೀಣಾಭಿವೃದ್ಧಿ? ಒಂದು ಕೊಳವೆ ಬಾವಿಯಿಂದ ಇಡೀ ಗ್ರಾಮಕ್ಕೆ ನೀರು ತೆಗೆದುಕೊಂಡು ಹೋಗುವುದಕ್ಕಾಗುತ್ತದೆಯೇ? ಒಂದೊಂದು ಜಾತಿಗೆ ಒಂದೊಂದು ಕೊಳವೆ ಬಾವಿಗಳನ್ನು ನೀವು ಕೊಡಬೇಕಾಗಿತ್ತು. ಯಾರಾದರೂ ಒಬ್ಬ ದಲಿತ ವಾಸ ಮಾಡುವ ಕಡೆ ಒಂದು ಬೋರ್‌ವೆಲ್ ಕೆಟ್ಟರೆ ಇನ್ನೊಬ್ಬರ ಹತ್ತಿರ ಒಂದು ಕೊಡ ನೀರು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನಿಮಗೆ ಎಲ್ಲಿಂದ ಗ್ರಾಮೀಣಾಭಿವೃದ್ಧಿಯ ಕನಸು[2]. ಮಾನ್ಯ ಮುಖ್ಯಮಂತ್ರಿಗಳು ಚೈನಾ ದೇಶವನ್ನು ವಿಸಿಟ್ ಮಾಡಿ ಬಂದರಲ್ಲ. ಅಲ್ಲಿ ಏನು ನೋಡಿದಿರಿ ಎಂದು ಕೇಳೋಣ ಎಂದಿದ್ದೇನೆ. ಅಲ್ಲಿ ಆಡಳಿತ ವ್ಯವಸ್ಥೆ ಬೇರೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅದರ ಬಗ್ಗೆ ಮಾತನಾಡಿ ಅವರ ಗಮನವನ್ನು ಸೆಳೆಯೋಣವೆಂದು ಇದ್ದೇನೆ. ಒಂದು ಸಮುದಾಯ ಭವನ, ಇನ್ನೂ ಕೂಡ ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಚರ್ಚೆಯಾಗುತ್ತಿದೆ. ನಾವು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇವೆ, ಇನ್ನೂ two glass system, ನಮ್ಮ ಗ್ರಾಮೀಣಾಭಿವೃದ್ಧಿಯಲ್ಲಿ ಎಲ್ಲಿದ್ದೇವೆ ಎಂದು ಹೇಳಿದರೆ ಇನ್ನು ಎರಡು ಲೋಟದ ಪದ್ಧತಿಯಲ್ಲಿ ಇನ್ನೂ

ಜೀವಂತವಾಗಿದೆ. ನಾವೆಲ್ಲರೂ ಕೂಡ ನಮಗೆ ಗೊತ್ತಿಲ್ಲವೇನೋ, ಯಾವ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇವೆ? ಏನು ಪ್ರಗತಿಯನ್ನು ಕಂಡಿದ್ದೇವೆ? ಇದರಲ್ಲಿ ಗ್ರಾಮೀಣಾಭಿವೃದ್ಧಿಯ ವಿಚಾರದಲ್ಲಿ ಚರ್ಚೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಹೇಳುತ್ತಿರುವುದು. ಯುವಕರಲ್ಲಿ, ನನಗೆ ಆಶ್ಚರ್ಯವಾಗುತ್ತದೆ, ನಾನು ಅತ್ಯಂತ ಸಣ್ಣ ವಯಸ್ಸಿನಲ್ಲಿ ರಾಜಕೀಯಕ್ಕೆ ಬಂದು 30 ವರ್ಷದಿಂದ ನಾನು ಸದಸ್ಯನಾಗಿ ಲೋಕಸಭೆ ಪ್ರವೇಶ ಮಾಡಿದವನು. ನಾನು ಈ ದೇಶದ ಸ್ಥಿತಿಗತಿಗಳನ್ನು ಸಾಮಾಜಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಿರತಕ್ಕಂಥವನು. ನಾನು ಪಾರ್ಲಿಮೆಂಟ್‌ನಲ್ಲಿ ಕೂಡ ಮಾತನಾಡುತ್ತಾ ಈ ಮಾತನ್ನು ಹೇಳುತ್ತಿದ್ದೆನು. India is such a resourceful country. ಇದು ಬಹಳ ಸಂಪದ್ಭರಿತವಾದಂತಹ ದೇಶ. Human resources, natural resources, ಇವೆರಡನ್ನು ಬಳಸದೆ ಇರುವಂತಹ manpower ಜಗತ್ತಿನಲ್ಲಿ ಎಲ್ಲೂ ಕೂಡ ಇಲ್ಲ. ಚೈನಾ ದೇಶಕ್ಕೂ ಕೂಡ ಸಾಧ್ಯವಿಲ್ಲ. ಆದರೆ ಇದು ಮುಂದುವರೆದಂತಹ ರಾಷ್ಟ್ರವಾಗಿದೆ ಏನು? ಇಲ್ಲ, ಏಕೆ? ಏಕೆ ಆರ್ಥಿಕವಾಗಿ ಎಲ್ಲರೂ ಸಬಲರಾಗಲಿಲ್ಲ. ಸಾಮಾಜಿಕವಾಗಿ ಏಕೆ ಸಮಾನತೆ ಬರಲಿಲ್ಲ. ಏಕೆ ರಾಜಕೀಯವಾಗಿ ಎಲ್ಲರಿಗೂ ಅವಕಾಶಗಳು ಸಿಗಲಿಲ್ಲ. ಬಹುಶ: ಇದಕ್ಕೆ ಕಾರಣ ಇದೆ. ಇಷ್ಟು ಸಂಪದ್ಭರಿತವಾದಂತಹ ದೇಶದಲ್ಲಿ ಇನ್ನೂ ನಾವು BPL card ಹೇಗೆ ಕೊಡಬೇಕು, below the poverty line ಹೇಗಿದೆ ಎಂದು ಗೊತ್ತಿಲ್ಲ. ಬರ ಬಂದಿರುವಂತಹ ಸಂದರ್ಭದಲ್ಲಿ ಅವರು ಗುಳೆ ಹೋಗದಿರುವಂತಹ ರೀತಿಯಲ್ಲಿ ಬದುಕನ್ನು ನಡೆಸುವಂತಹ ವಿಚಾರದಲ್ಲಿ ಎಲ್ಲೋ ಒಂದು ಮುಖ್ಯವಾದಂತಹ ಕೊರತೆ, ನ್ಯೂನ್ಯತೆ ನಮ್ಮ ಸಮಾಜದಲ್ಲಿ ಎದ್ದು ಕಾಣುತ್ತಿದೆ. ತಾವು ಗ್ರಾಮೀಣಾಭಿವೃದ್ಧಿ ಬಗ್ಗೆ ಯೋಚನೆ ಮಾಡುವಂತಹ ಸಂದರ್ಭದಲ್ಲಿ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಯುವಕರು, ಭಾರತ ದೇಶದಲ್ಲಿ ಒಂದು ಗ್ರಾಮದಲ್ಲಿ ಕೂಡ ಒಂದು ಯುವಕ ಸಂಘ ಇರುವುದನ್ನು ಎಲ್ಲಾದರೂ ಕಾಣುತ್ತಿದ್ದೇವೇಯೇ? ಇಲ್ಲ. ಆದರೆ ಯಾವುದೋ ಒಂದು ಕೋಮಿಗೆ ಸೇರಿದವರಿಗೆ ಬಸವೇಶ್ವರ ಯುವಕರ ಸಂಘ ಆಗಬೇಕು, ಕುವೆಂಪು ಯುವಕರ ಸಂಘವೇ ಆಗಬೇಕು, ಇನ್ನೆಲ್ಲೊ ನಾವಿದ್ದೇವೆಂದರೆ ಅಂಬೇಡ್ಕರ್ ಸಂಘವೇ ಆಗಬೇಕು, ಇನ್ನೆಲ್ಲೋ ಇದ್ದೇವೆಂದರೆ ಜನಜೀವನ ರಾಂ ಸಂಘವೇ ಆಗಬೇಕು, ಇನ್ನೆಲ್ಲೊ ಇದ್ದೇವೆಂದರೆ ಮದಕರಿ ಯುವಕ ಸಂಘವಾಗಬೇಕು, ಇನ್ನೆಲ್ಲೊ ಇದ್ದಾರೆಂದರೆ ಭಗೀರಥ ಯುವಕರ ಸಂಘವೇ ಆಗಬೇಕು. ನನಗೆ

ಮನಸ್ಸಿಗೆ ಬಹಳ ನೋವಾಗುತ್ತಿರುವಂತಾದ್ದು, ಏನೆಂದರೆ ನಾವು ಗ್ರಾಮೀಣ ಭಾರತದ ಬಗ್ಗೆ ಬಹಳ ಚಿಂತನೆ ಮಾಡುತ್ತೇವೆ. ಮೂಲತ: ನಾವು ಎಲ್ಲಿ ಎಡವಿದ್ದೇವೆ? ಅಲ್ಲಿ ಜನಜೀವನದ ವ್ಯವಸ್ಥೆ ಹೇಗಿದೆ? ಅದನ್ನು ಯಾವರೀತಿ ಸರಿಪಡಿಸಬೇಕು ಎಂದು ಯೋಚನೆ ಮಾಡಬೆಕು ಎನ್ನುವುದು ಇನ್ನೂ ಕೂಡ ಇಲ್ಲ. ಹಾಗಾಗಿ ಈ ತರಹದ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ವಿಶೇಷವಾದಂತಹ ಅಧಿವೇಶನಗಳು ನಡೆಯಬೇಕು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಮಾಡಿದಂತಹ ರೀತಿಯಲ್ಲಿ ಈ ರೀತಯ ಒಂದು ಸಾಮಾಜಿಕವಾದಂತಹ ಚಿಂತನೆಗಳು, ಶತಶತಮಾನಗಳಿಂದ ಶೋಷಣೆಗೊಳಗಾಗಿರುವಂತಹ ಆದಿವಾಸಿಗಳು, ದಲಿತರು, ಹಿಂದುಳಿದವರ ಬಗ್ಗೆ ಕೂಡ ನಾವು ವಿಶೇಷವಾದಂತಹ ಅಧಿವೇಶನದಲ್ಲಿ ಚರ್ಚೆಯನ್ನು ಮಾಡಬೇಕು. ನೀವು ಕೇವಲ ಬಜೆಟ್‌ನಲ್ಲಿ allocation ಕೊಟ್ಟು ಆಯಿತು ಎಂದು ಕೈತೋರಿಸಿ ಬಿಡುವುದಲ್ಲ. ಹಾಗಾಗಿ ಇಂತಹ ಅಧಿವೇಶನಗಳು ಇನ್ನು ಹೆಚ್ಚೆಚ್ಚು ರೀತಿಯಲ್ಲಿ ನಡೆಯಬೇಕು ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ. ತಮ್ಮ ಸರ್ಕಾರ ವಿಶೇಷ ಅಧಿವೇಶನದ ಬಗ್ಗೆ ಬಹಳ ಒಳ್ಳೆಯ ಯೋಚನೆ ಮಾಡಿದ್ದೀರಿ. ಇನ್ನು ಕೃಷಿ ನೀತಿ, ಗ್ರಾಮೀಣಾಭಿವೃದ್ಧಿ ಮತ್ತು ಬರ, ಅತೀವೃಷ್ಟಿ ಇವೆಲ್ಲ ಒಂದಕ್ಕೊಂದು ಪೂರಕವಾಗಿರುತ್ತದೆ. ಏಕೆಂದರೆ ಇಲ್ಲಿ ಮಾತನಾಡುತ್ತ ಎಲ್ಲರಿಗೂ ಗೊತ್ತಿರುವ ಹಾಗೆ ಪ್ರಸ್ತಾಪ ಮಾಡಿದರು. ಪಂಚವಾರ್ಷಿಕ ಯೋಜನೆಗಳು, ನಾವು ಎಷ್ಟೋ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ವಿಶೇಷ ಯೋಜನೆಗಳ ಬಗ್ಗೆ ಮಾತನಾಡುವಾಗ ಹೇಳಿದರು. ಅದು IRDP, National Rural Employment Scheme ಗಳು ಇರಬಹುದು, ಇವೆಲ್ಲವುಗಳ ಮುಖಾಂತರ ನಾವು ಎಷ್ಟು ಸಾವಿರ, ಲಕ್ಷಾಂತರ, ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಖರ್ಚು ಮಾಡಿದಂತಹ ಹಣದಲ್ಲಿ ಕೃಷಿ ನೀತಿ ಒಂದು ಸಾಧನೆಯನ್ನು ಮಾಡಿದರೆ ಕೃಷಿಕರ ಜೀವನ ಉತ್ತಮವಾಗಿದ್ದರೆ, ಗ್ರಾಮೀಣಾಭಿವೃದ್ಧಿ ಬೆಳವಣಿಗೆಯಾದರೆ, ಗ್ರಾಮೀಣಾಭಿವೃದ್ಧಿ ಸುಧಾರಣೆಯಾಗಿದೆ ಎಂದು ಹೇಳಿದರೆ ಬರದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಏಕೆ ಆಗುತ್ತಿರಲಿಲ್ಲ. ಆದರೆ ಆಗಿಲ್ಲ. ನಾವು ಇಷ್ಟೆಲ್ಲಾ ಪಂಚವಾರ್ಷಿಕ ಯೋಜನೆಗಳನ್ನು ಮಾಡಿದರೂ ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಷ್ಟೇ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳನ್ನೂ ಹಾಕಿದರೂ, ಎಷ್ಟೇ ನಾವು ಸಂಪನ್ಮೂಲಗಳನ್ನು ಕ್ರೋಢೀಕರಿಸಿದರೂ ಕೂಡ ಅದರಲ್ಲಿ ಗ್ರಾಮೀಣಾಭಿವೃದ್ಧಿ ಸುಧಾರಣೆಯಾಗಿದ್ದರೆ,

ನಮ್ಮ ಕೃಷಿ ನೀತಿಯಿಂದ, ನಮ್ಮ ಕೃಷಿಯ ಕಾರ್ಯಕ್ರಮಗಳಿಂದ ನಾವೇನಾದರೂ ಸಾಧನೆಯನ್ನು ಮಾಡಿದ್ದರೆ, ಅಭಿವೃದ್ಧಿಯನ್ನು ಕಂಡಿದ್ದರೆ ಈ ರೀತಿಯ ಬರ ಮತ್ತು ಅತೀವೃಷ್ಟಿಯನ್ನು ಎದುರಿಸುವಂತಹ ಸಮಸ್ಯೆಯೇ ಇರಲಿಲ್ಲ. ತಾವೇ ಪ್ರಸ್ತಾಪ ಮಾಡಿದಂತೆ ತಮ್ಮಗೆಲ್ಲರಿಗೂ ಗೊತ್ತಿರುವ ಹಾಗೆ ನಮಗೆ ಕಾರಣ ಗೊತ್ತಿದೆ. ನಮಗೆಲ್ಲರಿಗೂ ಕಾರಣ ಏನೆಂಬುದು ಗೊತ್ತಿದೆ. ಇವತ್ತು 100 ಕ್ಕೆ 85 ರೂಪಾಯಿಗಳು ಅಂದರೆ, 15 ರೂ.ಗಳು ಮಾತ್ರ ಅಭಿವೃದ್ಧಿಗೆ ತಲುಪುತ್ತಿರುವಂಥಾದ್ದು ಎಂದು ಮಾನ್ಯ ರಾಜೀವ್‌ಗಾಂಧಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆ 85 ರೂಪಾಯಿಗಳು ದುರುಪಯೋಗವಾಗುತ್ತಿದೆ. ಇದು ಯಾವ ಕನಸಿನ ಕಾರಣ. ನೂರು ರೂಪಾಯಿಗಳಲ್ಲಿ 15 ರೂಪಾಯಿಗಳು ಹಳ್ಳಿಗೆ ತಲುಪಿದರೆ ಯಾವ ಗ್ರಾಮೀಣಾಭಿವೃದ್ಧಿ ಆಗುತ್ತದೆ? ಯಾವ ಗ್ರಾಮಗಳು ಅಭಿವೃದ್ಧಿ ಆಗುತ್ತದೆ? ಯಾವ ಕೃಷಿ ನೀತಿಯಲ್ಲಿ ರೈತನಿಗೆ ನಾವು ಸಹಾಯ ಮಾಡುವುದಕ್ಕೆ ಆಗುತ್ತದೆ? ನಮ್ಮ ಕಾರ್ಯಕ್ರಮಗಳನ್ನು ನೋಡಿದರೆ ನಾವು ಅವರಿಗೆ ಕೊಡುವಂಥ ಹಣಕಾಸನ್ನು ನೋಡಿದರೆ, ನನಗೆ ತಿಳಿದಮಟ್ಟಿಗೆ ಅಂತರಾಷ್ಟ್ರೀಯ ಮಟ್ಟದಲ್ಲೂ ಕೃಷಿಯ ಬಗ್ಗೆ ಚರ್ಚೆಯಾದಂಥ ಸಮಯದಲ್ಲಿ ನಾವು ಭಾರತದಿಂದ ಭಾಗವಹಿಸಿದಂಥ ಸಂದರ್ಭದಲ್ಲಿ ಅವರಿಗೆ ಆಶ್ಚರ್ಯವಾಗುತ್ತದೆ. ನಾವು ರೈತರಿಗೆ ಇಷ್ಟೊಂದು benefits ಕೊಡುತ್ತಿದ್ದೇವಾ? ಇಷ್ಟೊಂದು ಸಬ್ಸಿಡಿ ಇದೆಯಾ? ರೈತನಿಗೆ ಇಷ್ಟು ಉತ್ತೇಜನಕಾರಿ ಪ್ರೋತ್ಸಾಹದಾಯಕವಾದಂಥ ಕಾರ್ಯಕ್ರಮಗಳು ಭಾರತ ದೇಶದಲ್ಲಿ ಇದೆಯಾ ಎಂದು ಅಲ್ಲಿ ಅವರು ಆಶ್ಚರ್ಯ ಪಡುತ್ತಾರೆ. ಆದರೆ ಅದರ ಟಿಜಣ ಡಿಜಿಣಟಣ ಫಲಿತಾಂಶವನ್ನು ನೋಡಿದಾಗ ನಮಗೆ ಇಲ್ಲಿ ಅರ್ಥವಾಗುತ್ತಿದೆ. ಇದು ಯಾವ ರೀತಿಯಾಗುತ್ತಿದೆಯೆಂಬುದು ನಮಗೆ ಗೊತ್ತಿದೆ. ಹಾಗಾಗಿ ಇದು ನಮ್ಮ ನಿರೀಕ್ಷಗೆ ತಕ್ಕಂತೆ ಆಗುತ್ತಿಲ್ಲವೆಂಬ ಕೊರಗು ಇದೆ. ಇವತ್ತು ದುರುಪಯೋಗ ಎಷ್ಟರ ಮಟ್ಟಿಗೆ ಆಗುತ್ತಿದೆಯೆಂಬುದು ನಮಗೆಲ್ಲರಿಗೂ ಗೊತ್ತಿದೆ. ನಾವು ನಿರೀಕ್ಷಿತ ಮಟ್ಟದಲ್ಲಿ ಇದನ್ನು ಸಾಧಿಸುವುದಕ್ಕೆ ಆಗಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಾನು ಕೊನೆಯ ದಿವಸದಂದು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಚೈನಾ ದೇಶಕ್ಕೆ ಭೇಟಿ ಕೊಟ್ಟಿರುವಂಥಾದ್ದು. ನಿಜ, ಅವರಿಗೆ ಕೇಂದ್ರ ಸರ್ಕಾರ ನಮ್ಮ Federal Systemನಲ್ಲಿ ಪ್ರತಿಯೊಂದು ರಾಜ್ಯದ ಮುಖ್ಯಮಂತ್ರಿಗಳು ಚೈನಾ ದೇಶಕ್ಕೆ ಭೇಟಿ ಕೊಡಬೇಕು ಎನ್ನುವಂಥದ್ದು. ನಮ್ಮ ಮತ್ತು ಚೈನಾ ದೇಶದ ಹೋಲಿಕೆಗಳು

ಇರುವಂಥದ್ದು. ಅಲ್ಲಿಗೆ ಅವರು ಭೇಟಿ ಕೊಡಬೇಕು ಎಂದು. ಇಲ್ಲವೆಂದರೆ ಬಿ.ಜೆ.ಪಿ.ಯ ಮುಖಂಡರು ಸಾಮಾನ್ಯವಾಗಿ ರಷ್ಯಾ ಮತ್ತು ಚೈನಾ ದೇಶಕ್ಕೆ ಹೋಗುವಂಥಾದ್ದು ಅಲ್ಲ. ಇದನ್ನು ತಾತ್ವಿಕ ಮತ್ತು ಸೈದ್ಧಾಂತಿಕವಾದಂಥ ಹಿನ್ನೆಲೆಯಲ್ಲಿ ನೋಡಿದಾಗ ಇದು ಬಹಳ ಕಡಿಮೆ. ಅದು ರಾಷ್ಟ್ರ ಮಟ್ಟದ ಬಿ.ಜೆ.ಪಿ.ಯ ನಾಯಕರಿರಬಹುದು, ರಾಜ್ಯ ಮಟ್ಟದ ನಾಯಕರಿರಬಹುದು, ಸಾಮಾನ್ಯವಾಗಿ ನಿಮ್ಮ ಸ್ವಂತಿಕೆಯಲ್ಲಿ ಯೋಚನೆ ಮಾಡಿ ರಷ್ಯಾ ಮತ್ತು ಚೈನಾ ದೇಶಕ್ಕೆ ತಾತ್ವಿಕವಾಗಿ ನಿಮಗೆ ಆಡಳಿತ ವ್ಯವಸ್ಥೆಯ ಬಗ್ಗೆ ಬಹಳ ವಿರೋಧ ಇರುವಂಥದ್ದು. ಆದರೂ ಕೂಡ ನೀವು ಅಲ್ಲಿಗೆ ಹೋಗಿ ಬಂದ ಮೇಲೆ ಅಲ್ಲಿನ ಪ್ರಗತಿಯ ಬಗ್ಗೆ, ಅಲ್ಲಿ ಆಗಿರುವಂಥ ಬೆಳವಣಿಗೆಯ ಬಗ್ಗೆ ಜಗತ್ತೇ ಅಚ್ಚರಿ ಪಡುವಂಥ ರೀತಿಯಲ್ಲಿ ಸಾಧನೆ ಮಾಡಿದಾಗಲೂ ಕೂಡ ತಾವು ಮಾತನಾಡುವುದಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರು ಕೇಂದ್ರ ಸರ್ಕಾರದ ಅವಕಾಶವನ್ನು ಬಳಸಿಕೊಂಡು ಹೋಗಿದ್ದಾರೆ. ನಾನು ಅದನ್ನು ಸುದ್ದಿ ಮಾಧ್ಯಮದಲ್ಲಿ ನೋಡಿದ್ದೇನೆ. ಆದರೆ ಅವರು ಮಾತನಾಡುವಾಗ ಹೇಳಿರುವಂಥಾದ್ದು, ಬರೀ ಬಂಡವಾಳ ಹೂಡಿಕೆದಾರರ ಜೊತೆಗೆ ಪ್ರಸ್ತಾಪ ಮಾಡಿದ್ದೇನೆ, ನಮ್ಮಲ್ಲಿಗೆ ಬಂಡವಾಳವನ್ನು ಯಾವ ರೀತಿಯಲ್ಲಿ ತರಬೇಕು, ನಮಗೆ ಬಂಡವಾಳದ ಕೊರತೆ ಇದೆ ಎನ್ನುವಂಥ ಮಾತುಗಳನ್ನು ಆಡಿದರು. ಆದರೆ ಅದರ ಜೊತೆ ಜೊತೆಯಲ್ಲಿ ಅವರು ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಂಥವರು, ಅದು ತಮಗೆಲ್ಲರಿಗೂ ಗೊತ್ತಿರಬಹುದು. ಅಂದಿನ ಸರ್ಕಾರ ನಡೆಸಿದಂಥ ಕಾಲದಲ್ಲಿ 20 ಅಂಶಗಳ ಕಾರ್ಯಕ್ರಮದ ದುರುಪಯೋಗವಾಗಿದೆ ಎಂದು ಹೋರಾಟ ಮಾಡಿ ಶಿಕಾರಿಪುರದಿಂದ ಶಾಸಕರಾಗಿರುವಂಥವರು. ಅವರು ಶಾಸಕರಾಗಿದ್ದಾರೆ, ವಿರೋಧಪಕ್ಷದ ನಾಯಕರಾಗಿದ್ದಾರೆ, ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವರಾಗಿ ಮತ್ತೆ ದಕ್ಷಿಣ ಭಾರತದ ಹೆಬ್ಬಾಗಿಲನ್ನು ಮಾಡಿ ಇವತ್ತು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ಆಗಿದ್ದಾರೆ. ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರನ್ನಾಗಿ ಕೂಡ ಮಾಡಿದ್ದರು. ಅವರು ರೈತರ ಹಿನ್ನೆಲೆಯಲ್ಲಿ ಹೋರಾಟವನ್ನು ಮಾಡಿಕೊಂಡು ಬಂದಿರುವವರು. ನಾನು ಮಾಧ್ಯಮದಲ್ಲಿ ಮಾತನಾಡಿರುವುದನ್ನೂ ಸಹ ನೋಡಿದೆ. ಅಲ್ಲಿನ ಆಡಳಿತ ವ್ಯವಸ್ಥೆ ಬಗ್ಗೆ ಕೂಡ ಚರ್ಚೆ ಮಾಡಿದ್ದಾರೆ. Agriculture experts ಯಾರಿದ್ದಾರೆ ಅವರ ಜೊತೆಯಲ್ಲೂ ಸಹ ಚರ್ಚೆ ಮಾಡಿದ್ದಾರೆ. ನಮಗೂ ಅವರಿಗೂ similarities

ಇದೆ. ನಮಗಿಂತ ಜನಸಂಖ್ಯೆಯಲ್ಲಿ ಅವರು ಸ್ವಲ್ಪ ಹೆಚ್ಚು ಇರಬಹುದು. ಆದರೆ, ಅಲ್ಲಿರತಕ್ಕಂಥದ್ದು ನಮಗಿಂತಲೂ cultivation land ತುಂಬ ಕಡಿಮೆ ಇರುವಂಥದ್ದು. ಅವರು ಉತ್ಪಾದನೆಯಲ್ಲಿ all time record production ಆಗುತ್ತದೆ. all time record procurement ಮಾಡುತ್ತಾರೆ. ಅವರು ದಾಖಲೆಯಾದಂಥ ಉತ್ಪಾದನೆ ಮತ್ತೆ ಅವರಲ್ಲಿ ದಾಸ್ತಾನನ್ನು ಇಟ್ಟುಕೊಂಡಿರುವಂಥ ದೇಶವಾಗಿದೆ. ರೈತರು ಅಲ್ಲಿ ದೊಡ್ಡ ಪ್ರಗತಿಯನ್ನು ಸಾಧಿಸಿರುವಂಥವರು. Cultivation ಅಲ್ಲಿ ನಮಗಿಂತ ತುಂಬಾ ಕಡಿಮೆ ಇರುವಂಥವರು. ನಾನು ಆಹಾರ ಸಚಿವನಾಗಿ comparative studies ಅನ್ನು ಕೂಡ ಮಾಡಿಸಿದ್ದೇನೆ. ಹಾಗಾಗಿ ಅದರ ಬಗ್ಗೆ ಗಮನ ಸೆಳೆದಿರುವಂಥಾದ್ದನ್ನು ನೋಡಿದ್ದಾರೆ. ಅಲ್ಲಿ ಯಾವ ರೀತಿಯಾಗಿ ಚರ್ಚೆಯನ್ನು ಮಾಡಿ ಅವರ ಜೊತೆಯಲ್ಲಿ ವಿಷಯಗಳನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ರೈತರ ಜೊತೆಗೂ interaction ಮಾಡಿರುವಂಥದ್ದನ್ನು ನೋಡಿದೆ, ಅವರು ರೈತರ ಜೊತೆಗೂ ಕೂಡ ಹೋಗಿ ಮಾತನಾಡಿದ್ದಾರೆ. ಅವರು ಯಾವ ರೀತಿ ಶ್ರಮ ಪಡುತ್ತಾರೆ, ಅವರ ಕೃಷಿಯಲ್ಲಿ ಯಾವ ರೀತಿಯಾಗಿ ಬೆಳವಣಿಗೆಯಾಗಿದೆ, ಅವರು ಯಾವ ರೀತಿಯಾಗಿ ಬೆಳೆಯನ್ನು ಹೆಚ್ಚು ಹೆಚ್ಚು ಬೆಳೆಯುವುದಕ್ಕೆ ಕಾರಣವಾಗಿದೆ ಎಂಬುದನ್ನು ನೋಡಿದ್ದಾರೆ. ನಮ್ಮಲ್ಲಿ cropping pattern ಅಥವಾ climatic zones ಇವೆಲ್ಲ ನಮ್ಮಲ್ಲಿ ಇಲ್ಲ. ಆದರೂ ಕೂಡ ಅದನ್ನೆಲ್ಲ ನೋಡಿ ಅಧ್ಯಯನ ಮಾಡಿ ತಿಳಿದುಕೊಂಡಿದ್ದಾರೆ. ನಮಗೆ ಚೈನಾ ಎಂದ ತಕ್ಷಣ ಬಾಯಿಯಲ್ಲಿ ನೀರೂರುತ್ತದೆ. ನಾವೂ ಏಕೆ ಹಾಗೆ ಆಗಬಾರದೆಂದು ಕೂಡ ಯೋಚನೆ ಮಾಡುತ್ತಿರುತ್ತೇವೆ. ನಾನು ಬಂಡವಾಳದ ಬಗ್ಗೆ ಮಾತನಾಡುವುದಕ್ಕೆ ಕಷ್ಟ ಇದೆ, ಏಕೆಂದರೆ ನನ್ನ ಕ್ಷೇತ್ರದಲ್ಲಿ ಒಬ್ಬ ಕೈಗಾರಿಕೋದ್ಯಮಿ ಚೈನಾಕ್ಕೆ ಹೋಗಿದ್ದರು. ಅವರು ಅಲ್ಲಿಗೆ ಹೋಗಿ ಬಂದ ತಕ್ಷಣ ಬಾಯಿ ಮೇಲೆ ಬೆರಳನ್ನಿಟ್ಟುಕೊಂಡರು. ಅಲ್ಲಿ ಯಾರಾದರೂ ಒಬ್ಬರು ಬಂಡವಾಳವನ್ನು ಹಾಕಲು ಹೋಗುತ್ತಾರೆಂದರೆ ಅವರು ಯಾವ ರೀತಿ ರತ್ನಗಂಬಳಿಯನ್ನು ಹಾಸುತ್ತಾರೆಂದರೆ ಅಲ್ಲಿ ಅವರಿಗೆ ಎಷ್ಟು ಉತ್ತೇಜನ, ಪ್ರೋತ್ಸಾಹ ಅಲ್ಲಿ ಸಿಗುತ್ತದೆ ಎಂಬ ಬಗ್ಗೆ ಆ ಕೈಗಾರಿಕೋದ್ಯಮಿ ಬಹಳ ಚೆನ್ನಾಗಿ ಹೇಳುತ್ತಿದ್ದರು. ನಮ್ಮಲ್ಲಿ ಅದು ಎಲ್ಲಿದೆ? Red carpet ಹಾಸಿದರೆ, ಇಲ್ಲಿ redtapism ಇರತಕ್ಕಂಥದ್ದು. ಇಲ್ಲಿ ಬಹಳ ಕಷ್ಟ. ಇಲ್ಲಿ ಯಾರಾದರೂ ಬಂಡವಾಳ ಹೂಡಲು ಬರುತ್ತಾರೆಂದರೆ ಅವರಿಗೆ ಆಗುವಂಥ ಹಿಂಸೆ

ಏನೆಂದರೆ ಅವರು ಇಲ್ಲಿ ಬಿಟ್ಟು ಹೊರಟು ಹೋದರೆ ಸಾಕು ಎನ್ನುವಂಥ ರೀತಿಯಲ್ಲಿ ನಾವು ಮಾಡುತ್ತಿದ್ದೇವೆ. ಅದು ಇತಿಹಾಸಗಳು ಇವೆ. ಇಲ್ಲಿಗೆ ಯಾವ ರೀತಿಯಾಗಿ ಬಂಡವಾಳ ಹೂಡಿಕೆದಾರರು ಬರುತ್ತಾರೋ? ಬಹಳ ಸಂತೋಷ, ನಾನು ಅದರ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಚೈನಾ ಮತ್ತು ಭಾರತ ದೇಶದ ಬಗ್ಗೆ ತಿಳಿಸಬೇಕು. ನನ್ನ ಮನಸ್ಸಿನಲ್ಲಿರುವಂಥ ವಿಷಯವನ್ನು ಈ ಸದನದ ಗಮನ ಸೆಳೆಯಬೇಕೆಂದು ಇದೆ. ಈ ಎರಡೂ ರಾಷ್ಟ್ರಗಳ similarities ಇದೆ ಎನ್ನುವಂಥದ್ದು ಇತಿಹಾಸವನ್ನು ಕೆದಕಿದಾಗ ಅಲ್ಲೂ ಕೂಡ ಇದೆ. ನಮ್ಮ ದೇಶ 1947ರಲ್ಲಿ ಸ್ವಾತಂತ್ರ್ಯವಾಯಿತು. ಸ್ವಾತಂತ್ರ್ಯದ ಮಂಚೂಣಿಯಲ್ಲಿ ಮಹಾತ್ಮಾ ಗಾಂಧಿಯವರು ಇದ್ದರು. ಅದೇ ರೀತಿ ಚೈನಾ ದೇಶದಲ್ಲಿ ವಿಮೋಚನೆ ಆಗಬೇಕಾದರೆ, ನಮಗೆ ಸ್ವಾತಂತ್ರ ಸಿಕ್ಕಿ ಎರಡು ವರ್ಷಗಳಾದ ಮೇಲೆ 1949ನೇ ಇಸವಿಯಲ್ಲಿ ಅಲ್ಲಿ ಸ್ವಾತಂತ್ರ್ಯ ಸಿಕ್ಕಿದ್ದು. ಅಲ್ಲಿ ಮಾವೋತ್ಸತುಂಗ್‌ರ long march, ಅವರೂ ಕೂಡ ಹೋರಾಟ ಮಾಡಿದವರು. ಇಲ್ಲಿ ಗಾಂಧೀಜಿಯವರು ಅಲ್ಲಿ ಮಾವೋತ್ಸತುಂಗ್. ಇಬ್ಬರೂ ಕೂಡ contemporaries. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಅವರಿಬ್ಬರೂ ಸಮಕಾಲೀನರಾಗಿರುವಂಥವರು. ಇಲ್ಲಿ ಗಾಂಧೀಜಿಯವರು ಬ್ರಿಟೀಷ್ imperialism ಬಗ್ಗೆ, ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ಮಾಡಿ 1947ರಲ್ಲಿ Quit India Movement ಮುಖಾಂತರ ಒಂದು shape ತೆಗೆದುಕೊಂಡಿರುವಂಥದ್ದು. Sepoy Mutiny 1857ರಲ್ಲಾದರೂ ಕೂಡ ಗಾಂಧೀಜಿಯವರ ಮುಖಂಡತ್ವದಲ್ಲಿ ಹೋರಾಟ ಮಾಡಿ ಅಹಿಂಸಾತ್ಮಕ ಚಳುವಳಿಯ ಮೂಲಕ ನಮಗೆ ಸ್ವಾತಂತ್ರ ಸಿಕ್ಕಿದ್ದು. ಅದೇ ರೀತಿ 1935ನೇ ಇಸವಿಯಲ್ಲಿ ಲಾಂಗ್‌ಮೋರ್‌ನಲ್ಲಿ landless peasants ಮತ್ತು ದುಡಿಯತಕ್ಕಂಥ ಕಾರ್ಮಿಕರ ಪರವಾಗಿ ಮಾವೋ 14 ವರ್ಷಗಳ ಕಾಲ ಹೋರಾಟ ಮಾಡುತ್ತಾರೆ. ಅಲ್ಲೂ ಕೂಡ Japanese imperialism ಇರುತ್ತದೆ. ಆಂತರಿಕವಾದಂಥ feudal lordsಗಳು ಕೂಡ ಅಲ್ಲಿರುತ್ತಾರೆ. ಅವರ ವಿರುದ್ಧ ಸುಮಾರು 14 ವರ್ಷಗಳ ಕಾಲ ಸತತವಾಗಿ ಹೋರಾಟ ಮಾವೋರವರು ಮಾಡಿರುವಂಥದ್ದು. ಇಬ್ಬರೂ contemporaries. ನಮಗೆ 1947ರಲ್ಲಿ ಗಾಂಧೀಜಿಯವರ ಮುಖಾಂತರ ವಿಮೋಚನೆಯಾಗುತ್ತದೆ. ನಾವು

1949ರಲ್ಲಿ ಚೈನಾ ದೇಶದ Japanese imperialism ನಿಂದ ವಿಮೋಚನೆಯಾಗುವಂಥದ್ದನ್ನು ಕಾಣುತ್ತಿದ್ದೇವೆ. ಇವರಿಬ್ಬರೂ ಸಮಕಾಲೀನರಾಗಿದ್ದಂಥವರು. ಇಲ್ಲಿ ನಾವು ಗಾಂಧೀಜಿಯವರು ಮತ್ತು ಮಾವೋರವರ ಬಗ್ಗೆ ಯೋಚನೆ ಮಾಡಿದಾಗ ಮಾವೋರವರು ಒಂದು ಕಡೆ ಯೋಚನೆ ಮಾಡುತ್ತಾರೆ, ನಾವು ಇಷ್ಟು long march ಅನ್ನು ಮಾಡಿ 14 ವರ್ಷಗಳ ಕಾಲ ಹೋರಾಟ ಮಾಡಿ ಇವತ್ತು ದುಡಿಯತಕ್ಕಂಥ ವರ್ಗದವರ ಕೈಗೆ ಅಧಿಕಾರವನ್ನು ಈಗ ನಾನು ಕೊಟ್ಟಿದ್ದೇನೆ. ಈಗ ಈ ಚೈನಾ ದೇಶವನ್ನು ಹೇಗೆ ಕಟ್ಟಬೇಕೆನ್ನುವಂಥದ್ದನ್ನು ಅವರಿಗೆ ಬಿಟ್ಟಿದ್ದೇನೆ. ಅವರಿಗೆ ಅರ್ಥ ಮಾಡಿಸಿದ್ದೇನೆಂದು ಯೋಚನೆ ಮಾಡುತ್ತಾರೆ. ಆದರೆ ಅವರು ರಾತ್ರಿ ಮಲಗಿದಾಗ ಮಾವೋರವರಿಗೆ ನಿದ್ರೆ ಬರುವುದಿಲ್ಲ, ಅವರು ಮತ್ತೆ ಯೋಚನೆ ಮಾಡುತ್ತಾರೆ. ನಾನು 14 ವರ್ಷಗಳ ಕಾಲ ಶ್ರಮ ಪಟ್ಟು ಈ ರೀತಿಯಾಗಿ ಸಂಘಟನೆಯನ್ನು ಮಾಡಿ ಭೂ ರಹಿತರ ಮತ್ತು ಕಾರ್ಮಿಕರ ಪರ ಸಂಘಟನೆ ಮಾಡಿ ಆ ನೋವನ್ನು ಅನುಭವಿಸಿ ಮತ್ತೆ ನನ್ನ ಕನಸಿನ ಚೈನಾ ಹೇಗಿದೆ, ಮುಂದೆ ಬರುವವರಿಗೆ ನಾನು ಯಾರಿಗೆ ಅಧಿಕಾರವನ್ನು ಕೊಡುತ್ತೇನೋ ಅವರಿಗೆ ಆ ರೀತಿಯ ಕನಸುಗಳು ಇದೆಯಾ? ನನಸು ಮಾಡುವಂಥ ದಿಕ್ಕಿನಲ್ಲಿ ಅವರ ಪ್ರಯತ್ನಗಳು ಆಗುತ್ತದೆಯೇ? ಆ ರೀತಿಯ ಕಾರ್ಯಕ್ರಮಗಳು ಆಲೋಚನೆಗಳು ಆಗುತ್ತದೆಯೇ? ಎಂಬ ಬಗ್ಗೆ ಮಾವೋರವರು ರಾತ್ರಿಯೆಲ್ಲಾ ಯೋಚನೆ ಮಾಡುತ್ತಾರೆ. ಅದು ಸಾಧ್ಯವಿಲ್ಲವೆಂದು ಗೊತ್ತಾಗುತ್ತದೆ. ಈಗ ಏನು second thought ಎಂದು ಹೇಳುತ್ತೇವೆ. ನಾವು ಚರಿತ್ರೆಯನ್ನು ನೋಡಿದಾಗ ಎರಡು ಯೋಚನೆಗಳನ್ನು ಕೊಡುತ್ತಾರೆ. ಇಲ್ಲ, ಇದು ಸಾಧ್ಯವಿಲ್ಲ. ಆ ನೋವು ನನಗೆ ಅರ್ಥವಾಗಿದೆ. ನಾನು ಯಾವ ರೀತಿಯಾಗಿ long march ಮಾಡಿದೆ ಎಂಬುದನ್ನು ಯೋಚನೆ ಮಾಡುತ್ತಾರೆ. ನಾನು ಚೈನಾ ದೇಶದ ಬುನಾದಿಯಾಗಬೇಕೆಂದು ಯೋಚನೆ ಮಾಡುತ್ತಾರೆ. ಹಾಗಾಗಿ ಮಾವೋ built China ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಮಾವೋ ಅದು ಅಲುಗಾಡದಂತೆ foundation ಹಾಕಿರುವುದರಿಂದ ಇಂದು ಚೈನಾ ದೇಶ 1949ರಿಂದ ಇವತ್ತಿನವರೆಗೂ, ಇಡೀ ಜಗತ್ತೇ ಆಶ್ಚರ್ಯ ಪಡುವಂಥ ರೀತಿಯಲ್ಲಿ ಬೆಳವಣಿಗೆ ಯಾಗಿದೆ. ನಮ್ಮಲ್ಲಿ ಆಗಿರುವಂಥದ್ದು ಏನು? 1947ರಲ್ಲಿ ನಮಗೆ ಸ್ವತಂತ್ರ್ಯ ಸಿಕ್ಕಾಗ ಗಾಂಧೀಜಿಯವರು ದೇಶವನ್ನು ಕಟ್ಟಬೇಕು ಎನ್ನುವಂಥದ್ದು

ಇತ್ತು. ಅವರ ಗ್ರಾಮೀಣ ಸ್ವರಾಜ್ಯದ ಕಲ್ಪನೆ ಜಗತ್ತಿನಲ್ಲಿ ಯಾರೂ ಯೋಚನೆ ಮಾಡಲಿಲ್ಲ. ಅವರ ಅಂತ್ಯೋದಯ ಮತ್ತು ಸರ್ವೋದಯದ ಆಲೋಚನೆಗಳು, ಗುಡಿ ಕೈಗಾರಿಕೆಗಳು, ಇಲ್ಲಿ ಅಂತ್ಯೋದಯ ಎಂದರೆ ಸಮಾಜದ ಕೆಳ ಸ್ಥರದಲ್ಲಿ ಭಂಗಿ ಕಾಲೋನಿಗೆ ಹೋಗಿ ಬೆಳಗ್ಗೆ ಚಹಾವನ್ನು ಕುಡಿದು ಆನಂತರ ಸರ್ವೋದಯದ ಬಗ್ಗೆ ಯೋಚನೆ ಮಾಡತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳು, ಚಿಂತನೆಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಂಥ ಗಾಂಧೀಜಿಯವರು ಹೆಚ್ಚು ದಿವಸ ಬದುಕುವುದಕ್ಕೆ ಆಗಲಿಲ್ಲ. ಸ್ವಾತಂತ್ರ ಬಂದ ಆರು ತಿಂಗಳಲ್ಲೇ shot deathಗೆ ಬಲಿಯಾಗುವಂಥ ಸಂದರ್ಭ, ಒಂದು ದುರಂತ ಈ ದೇಶಕ್ಕೆ ಆಗಿಹೋಯಿತು. ಅಲ್ಲಿ ಮಾವೋ ಬದುಕಿ ಚೈನಾ ದೇಶವನ್ನು ಕಟ್ಟಿದರು. ಇಲ್ಲಿ ನಮ್ಮ ಗಾಂಧೀಜಿಯವರ ಕನಸುಗಳ ಬಗ್ಗೆ ಆಗಲಿಲ್ಲ. ಇವತ್ತು ಅದಕ್ಕೆ ಸರಿಯಾದಂಥ foundation ಸಿಕ್ಕಿದ್ದರೆ ನಾವು ಭಾರತವನ್ನು ಆ ರೀತಿ ಕಟ್ಟಬಹುದಾಗಿತ್ತು. ನಾವು ಇದನ್ನು ನೋಡಬೇಕಾಗಿದೆ. ಅಲ್ಲಿ ಮಾವೋ ಮತ್ತು ಗಾಂಧೀಜಿಯವರಿಗೆ ಇರುವಂಥ ವ್ಯತ್ಯಾಸಗಳನ್ನು ನೋಡಿದಂಥ ಸಂದರ್ಭದಲ್ಲಿ ನಮ್ಮ ದುರಂತ ಇಲ್ಲಿ ಗಾಂಧೀಜಿಯನ್ನು ನಾವು ಕಳೆದುಕೊಳ್ಳುತ್ತೇವೆ. ಇವತ್ತಿಗೂ ಕೂಡ ಗಾಂಧೀಜಿಯವರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಂಥ ರೀತಿಯಲ್ಲಿ ನಾವು ಅಧಿಕಾರವನ್ನು ಎಷ್ಟೇ ವಿಕೇಂದ್ರೀಕರಣ ಮಾಡಿ ಗಾಂಧೀಜಿಯವರ ಕನಸಿನಲ್ಲಿದ್ದಂಥ ರೀತಿಯಲ್ಲಿ ನಾವು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಇವೆಲ್ಲವೂ ಕೂಡ Local Governments ಎಂದು ಹೇಳುತ್ತೇವೆ. ನಾವು ಇಲ್ಲಿ ಸ್ಥಳೀಯ ಸರ್ಕಾರಗಳು ಅದರ ಮುಖಾಂತರ ಆಡಳಿತ ಜೀವನ ಉತ್ತಮ ಆಗಬೇಕೆನ್ನುವ ರೀತಿಯಲ್ಲಿ ಏನು ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದಕ್ಕೆ ಇನ್ನೂ ಸರಿಯಾದಂಥ ಬುನಾದಿ ಸಿಗದೇ ಇವತ್ತು ನಾವು ಅದರ ಬಗ್ಗೆ ಇನ್ನೂ ತಡವರಿಸುವಂಥಾದನ್ನು ಕೂಡ ತಾವು ನೋಡುತ್ತಿದ್ದೇವೆ. ಇವತ್ತು ಚೈನಾ ದೇಶಕ್ಕೆ ಸಿಕ್ಕಿರುವಂಥ ಬುನಾದಿ ಮೇಲೆ ಇವತ್ತು ಇಡೀ ಜಗತ್ತಿನಲ್ಲಿ ಯಾರೂ ಅಮೇರಿಕಾಗೆ ಅಥವಾ ಫ್ರಾನ್ಸ್‌ಗೆ ಹೋಗಬೇಕೆಂದು ಇಲ್ಲ. ಇವತ್ತು ಯಾರೂ America ಅಥವಾ France ಗಳಿಗೆ ಹೋಗಬೇಕಾಗಿಲ್ಲ. ಎಲ್ಲಿ ಹೋದರೂ ಕೂಡ ಬೀಜಿಂಗ್, ಶಾಂಘೈ ಸಿಟಿಗಳಿಗೆ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳುತ್ತಾರೆ. Globalization ಹಿನ್ನೆಲೆಯಲ್ಲಿ Parliamentನಲ್ಲಿ

ಅದರ ಬಗ್ಗೆ ಚರ್ಚೆಯಾದಂಥ ಸಂದರ್ಭದಲ್ಲಿ, ನಾವು W.T.O. agreementಗೆ ಹೋದಂಥ ಸಂದರ್ಭದಲ್ಲಿ ಚೈನಾ ದೇಶ ಅದಕ್ಕೆ ಬರಲಿಲ್ಲ. ವಿಶ್ವ ವಾಣಿಜ್ಯ ಒಪ್ಪಂದದಿಂದ ನಾವು ಏನಾಗುತ್ತೇವೋ ಎಂದು ನಾವೆಲ್ಲ ನಡುಗಿಹೋಗಿದ್ದೇವೆ, ತತ್ತರಿಸಿ ಹೋಗಿರುವುದನ್ನು ನಾವು ಕಾಣುತ್ತಿದೇವೆ. ಅದಕ್ಕೆ ಕಾರಣ ಕೂಡ ಇದೆ. ಚೈನಾ ಮತ್ತು ಭಾರತ ದೇಶವನ್ನು ನಾನು ಹೋಲಿಸಿ ನೋಡುತ್ತಿದ್ದೆ. ನಾನು ಚೈನಾ ದೇಶಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಆದರೆ ನಾನು ಕೇಂದ್ರದಲ್ಲಿ Consumer Affairs Minister ಆಗಿದ್ದಾಗ, Public Distribution System Minister ಆಗಿದ್ದಾಗ ಅಮೇರಿಕಕ್ಕೆ ಹೋದಂಥ ಸಂದರ್ಭದಲ್ಲಿ Chainese Departmental Storesಗೆ ಭೇಟಿ ಕೊಟ್ಟಿದ್ದೆ. ನಾನು ಅಲ್ಲಿ ನೋಡಿದ ಪ್ರಕಾರ ನನಗೆ ಆಶ್ಚರ್ಯವಾದದ್ದು ಏನೆಂದರೆ, ಅಲ್ಲಿ ಒಂದು ಡಾಲರ್‌ಗೆ ದಿನ ನಿತ್ಯ ಬಳಕೆಯ ವಸ್ತುಗಳು, cosmetics ಏನು ಬೇಕೋ ಅವು ಸಿಗುತ್ತವೆ. ಚೀನಾ ದೇಶದಲ್ಲಿ ಉತ್ಪಾದನೆಯಾದಂಥ ವಸ್ತುಗಳಿಗೆ ಅಮೇರಿಕಾ ದೇಶದ ಮಧ್ಯಮ ವರ್ಗದ ಜನ ಮುಗಿಬೀಳುತ್ತಾರೆ. ಇದು ಹೇಗೆ ಸಾಧ್ಯವಾಯಿತು? ವಿಶ್ವ ವಾಣಿಜ್ಯ ಒಪ್ಪಂದವೆಂದರೆ a free trade, ಮುಕ್ತವಾದಂಥ ವಾಣಿಜ್ಯ. ಅದರಲ್ಲಿ cost of production and quality ಇವರೆಡೂ ಮುಖ್ಯ. ಉತ್ಪಾದನಾ ವೆಚ್ಚ ಕಡಿಮೆ ಇರಬೇಕು ಮಾತ್ತು ಗುಣಮಟ್ಟ ಚೆನ್ನಾಗಿರಬೇಕು. ಚೈನಾ ದೇಶದ ಉತ್ಪನ್ನಗಳನ್ನು ಒಂದು ಡಾಲರ್‌ಗೆ ಕೊಡಬೇಕಾದರೆ ಅದರ ಉತ್ಪಾದನಾ ವೆಚ್ಚ ಮತ್ತು ಗುಣಮಟ್ಟವನ್ನು ಹೇಗೆ ಸರಿದೂಗಿಸಿದ್ದಾರೆ ಎಂದು ನನಗೆ ಆಶ್ಚರ್ಯವಾಯಿತು. ಅವರು ಅಮೇರಿಕಾ ದೇಶದಲ್ಲಿ ಕೂಡ ವ್ಯಾಪಾರದಲ್ಲಿ ಪೈಪೋಟಿಯನ್ನು ಮಾಡುತ್ತಿದ್ದಾರೆ. ಈಗ ಅವರು W.T.O. ವನ್ನು ಸವಾಲಾಗಿ ಸ್ವೀಕರಿಸಿ W.T.O. agreementಗೆ ಬಂದಿದ್ದಾರೆ. ನಮ್ಮ ದೇಶದಲ್ಲಿ ಇಷ್ಟೊಂದು ಜನಸಂಖ್ಯೆಯಿದ್ದು, ಮಾನವ ಸಂಪನ್ಮೂಲ ಇದ್ದು, ಇದು ಏಕೆ ಸಾಧ್ಯವಾಗಲಿಲ್ಲವೆಂದರೆ ನನಗನ್ನಿಸುತ್ತದೆ ಮತ್ತು ಚೈನಾ ದೇಶಕ್ಕೆ ಹೋಗಿ ಬಂದಿರುವವರಿಗೆ ಗೊತ್ತಾಗುತ್ತದೆ, ಅಲ್ಲಿರತಕ್ಕಂಥ 120–130 ಕೋಟಿ ಜನರಲ್ಲಿ ದುಡಿಯತಕ್ಕಂಥ ಇಲ್ಲ ಕೈಗಳಿಗೂ ಕೆಲಸವನ್ನು ಕೊಟ್ಟಿದ್ದಾರೆ. ಅಲ್ಲಿ ನಿರುದ್ಯೋಗದ ಸಮಸ್ಯೆ ಇಲ್ಲ, ಹಸಿವೆಯೂ ಇಲ್ಲ, ಹಸಿವೆಯಿಂದ ಸಾವೂ ಸಹ ಇಲ್ಲ. ಅಂದರೆ ಅಲ್ಲಿರತಕ್ಕಂಥ ಎಲ್ಲರನ್ನೂ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳತಕ್ಕಂಥ ಅವಕಾಶಗಳು ಇವೆ. ಮುಖ್ಯಮಂತ್ರಿಗಳು ಚೈನಾ ದೇಶದಲ್ಲಿ ಅದನ್ನೇನಾದರೂ ಸೂಕ್ಷ್ಮವಾಗಿ

ನೋಡಿದರೇ ಎಂದು ಕೇಳೋಣವೆಂದಿದ್ದೆ. ಆದರೆ ನಮ್ಮ ದೇಶದಲ್ಲಿ ಆ ರೀತಿ ಆಗಿಲ್ಲ. ಏಕೆ ಆಗಿಲ್ಲವೆಂದರೆ ಮತ್ತೆ ನಾವು ಯೋಚನೆ ಮಾಡಬೇಕಾಗಿದೆ. ಈ ದೇಶದಲ್ಲಿರತಕ್ಕಂಥ ಶೇ.30 ರಷ್ಟಿರುವ ಶೋಷಿತ ವರ್ಗಗಳವರು, ದಲಿತರು ಅಥವಾ ಅಸ್ಪೃಶ್ಯರು ಇನ್ನೂ ಕೂಲಿ ಮಾಡಿ ಬದುಕಬೇಕು, hand to mouth, ಇವತ್ತು ಅವರು ತಮ್ಮ ಶ್ರಮದಿಂದ ದುಡಿದು ಬದುಕಬೇಕು, ಯಾರೂ ಅವರನ್ನು ಹತ್ತಿರಕ್ಕೆ ಸೇರಿಸುವುದಿಲ್ಲ. ಅದಕ್ಕೇ ನಮಗೆ ಭಯ ಇರತಕ್ಕಂಥಾದ್ದು. ಈ ದೇಶದಲ್ಲಿರುವ ಶೋಷಿತರು ಅಸಹಾಯಕರಾಗಿದ್ದಾರೆ, ಆರ್ಥಿಕವಾಗಿ ಅಶಕ್ತರಾಗಿರುವ ವರ್ಗದವರಿಗೆ, ದುಡಿಮೆ ಮಾಡಿ ತಿನ್ನತಕ್ಕಂಥವರಿಗೆ ಈ ದೇಶದ ಉತ್ಪಾದನೆಯಲ್ಲಿ ಅವಕಾಶವನ್ನೇ ಕೊಟ್ಟಿಲ್ಲ. ಹೀಗಿರುವಾಗ ಇನ್ನ್ಯಾವಾಗ ನೀವು ವಿಶ್ವ ವಾಣಿಜ್ಯ ಒಪ್ಪಂದವನ್ನು ಸವಾಲಾಗಿ ಸ್ವೀಕರಿಸತಕ್ಕಂಥಾದ್ದು? ಇದು ಚೈನಾ ಮತ್ತು ನಮಗಿರತಕ್ಕಂಥ ವ್ಯತ್ಯಾಸ. ಇಲ್ಲಿ ಬರವಿದ್ದಾಗ ಮುಖ್ಯಮಂತ್ರಿಗಳು ಚೈನಾ ದೇಶಕ್ಕೆ ಹೋಗಿದ್ದರು. ಅಲ್ಲಿಗೆ ಹೋದಾಗ ಅವರು ನೋಡಬಹುದಾಗಿತ್ತು, ಇಲ್ಲಿ ಬರ ಬಂದರೆ, natural calamitites ಆದರೆ ಯಾವ ರೀತಿ ಎದುರಿಸುತ್ತೀರಿ, ಬರ ಇದ್ದರೆ ಯಾವ ರೀತಿ ಎದುರಿಸುತ್ತೀರಿ, ಅತಿವೃಷ್ಟಿಯಾದರೆ, ಪ್ರವಾಹ ಬಂದರೆ, ಮಳೆ ಹೆಚ್ಚಾದರೆ ಏನು ಮಾಡುತ್ತೀರಿ ಎನ್ನುವುದನ್ನು ಅವರು ತಿಳಿದುಕೊಂಡು ಬರಬಹುದಾಗಿತ್ತು. ಅವರು ಇಲ್ಲಿಗೆ ವಾಪಸ್ಸು ಬಂದ ಮೇಲೆ ಇಲ್ಲಿ ಆ ದೃಷ್ಟಿಯಲ್ಲಿ ಬೆಳಕನ್ನು ಚೆಲ್ಲುತ್ತಾರೆ ಎಂದು ಭಾವಿಸಿದ್ದೆ. ಆದರೆ ಅವರು ಬರೀ ಬಂಡವಾಳ ಹೂಡಿಕೆಯ ಮೇಲೆಯೇ ಗಮನ ಹರಿಸುತ್ತಿದ್ದಾರೆ. ಈ ಬಗ್ಗೆ ಅವರ ಗಮನವನ್ನು ಸೆಳೆಯೋಣವೆಂದು ಭಾವಿಸಿದ್ದೆ. ಅಲ್ಲಿಯ ಆಡಳಿತ ವ್ಯವಸ್ಥೆಯ ಬಗ್ಗೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ಚೈನಾ ದೇಶದಲ್ಲಿ ತುಂಬ ಮೆಕ್ಕೆಜೋಳವನ್ನು ಬೆಳೆಯುತ್ತಾರೆ. ಅಲ್ಲಿನ demandಗಿಂತ ಹೆಚ್ಚಿನ production ಆದರೆ ಬಹಳ ಕಷ್ಟವಾಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂಬ ಬಗ್ಗೆ ರೈತ ಕಂಗಾಲಾದಾಗ ಒಂದೇ ಒಂದು ಮಾತನ್ನು ಮಾವೋ ಹೇಳಿದರು. ಚೈನಾ ದೇಶದ ಜನರು ಬೆಳಗ್ಗೆ ಎದ್ದ ತಕ್ಷಣ ಮೆಕ್ಕೆ ಜೋಳದ ಗಂಜಿಯನ್ನು ಕುಡಿಯಬೇಕು ಎಂದು ಹೇಳಿದರು. ಇದರಿಂದ ದೇಶದಲ್ಲಿ ಬೆಳೆದಿರುವಂಥ ಮೆಕ್ಕೆ ಜೋಳ ಉಪಯೋಗಕ್ಕೂ ಬರುತ್ತದೆ ಮತ್ತು ಅವರು ಈ ಕಾರಣದಿಂದ ಇವತ್ತೂ ಆರೋಗ್ಯವಾಗಿದ್ದಾರೆ. ಅವರಲ್ಲಿ ಎಂಥ ಆಲೋಚನೆಗಳಿವೆ ಎನ್ನುವುದನ್ನು ನಾನು ಕೇಳಿದೆ. ಮಕ್ಕಳಿಗೆ ಅಲ್ಲಿ ಯಾವ ರೀತಿ ಆಹಾರ ಕೊಡುತ್ತಿದ್ದಾರೆ

ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳೂ ಅಲ್ಲಿ ನೋಡಿದ್ದಾರೆ. ಖಜಟುಜಜಿ ತಿಂಡಿಇಾ ಬಗ್ಗೆ ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ, ನಾವು ಏನು ಮಾಡಬೇಕು ಎನ್ನತಕ್ಕಂಥಾದ್ದನ್ನಷ್ಟೇ ಪ್ರಸ್ತಾಪ ಮಾಡುತ್ತೇನೆ. ಇವತ್ತಿಗೂ ಕೂಡ ಚೈನಾ ದೇಶದಲ್ಲಿ ಶಾಲೆಗೆ ಹೋಗತಕ್ಕಂಥ ಸಣ್ಣಸಣ್ಣ ಮಕ್ಕಳಿಗೆ ಕಡ್ಡಾಯವಾಗಿ ಅರ್ಧ ಲೀಟರ್ fruit juice ಕೊಡುತ್ತಾರೆ. ಇಲ್ಲಿ ಬರಪೀಡಿತ ಪ್ರದೇಶಗಳಲ್ಲಿರುವ ಮಕ್ಕಳು ತತ್ತರಿಸಿ ಹೋಗಿದ್ದಾರೆ. ಅವರಿಗೆ ನಾವು ಅಂಗನವಾಡಿಗಳಲ್ಲಿ, ಮಧ್ಯಾಹ್ನದ ಉಪಹಾರದ ವೇಳೆಯಲ್ಲಿ ಇಂಥಾದ್ದನ್ನೇದಾರೂ ಕೊಡುವ ಒಂದು ಆಲೋಚನೆಯನ್ನೇನಾದರೂ ಮಾಡಿದ್ದೇವೆಯೇ? ಹಾಲು ಜೊತೆಗೆ ಮೊಟ್ಟೆ ಕೊಡಬೇಕು ಎಂದರೆ ಆಗಲೇ ನೀವು ಶುರು ಮಾಡಿಬಿಡುತ್ತೀರಿ. ನೀವಂತೂ ಪಕ್ಕಾ orthodox ಗುಂಪಿಗೆ ಸೇರಿರತಕ್ಕಂಥವರು. ಮೊಟ್ಟೆ ಕೊಡಬೇಕು ಎಂದು ಹೇಳಿದರೆ, ಮೊದಲಲು ಅದನ್ನು ಬೇಡ ಎಂದು ಬಿಟ್ಟುಬಿಡುತ್ತೀರಿ. ಅದು ಪೌಷ್ಠಿಕಾಂಶ ಇರುವಂಥ ಆಹಾರ ಎನ್ನುವುದು ನಿಮ್ಮ ಕಲ್ಪನೆಗೂ ಬರುವಂಥಾದ್ದಲ್ಲ. ಅಲ್ಲಿಗೆ ನೀವು ಹೋಗಿ ಇದನ್ನೆಲ್ಲ ನೋಡಿದಿರಾ, ಇಂಥ ವಿಷಯಗಳು ನಿಮ್ಮ ತಲೆಗೆ ಹೋಯಿತೇ, ನಿಮ್ಮ ಆಡಳಿತದಲ್ಲಿ ಅಂಥಾದ್ದನ್ನೇನಾದರೂ ತರುವ ಯೋಚನೆ ಮಾಡಿದ್ದೀರಾ ಯಡಿಯೂರಪ್ಪನವರೇ ಎಂದು ನಾನು ಕೇಳೋಣವೆಂದಿದ್ದೆ. ಆದರೆ ಅವರು ಬರೀ ಬಂಡವಾಳ ಹೂಡಿಕೆಗಳ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದಾರೆ. Relief works ವಿಷಯ ಬಂದಾಗ ನಾನೊಂದು ಸ್ವಲ್ಪ ಮಾತನಾಡುತ್ತೇನೆ. ಈಗ ತಮಗೆ ಗೊತ್ತಿರುವ ಹಾಗೆ ಬರ ಅಥವಾ ಅತಿವೃಷ್ಟಿ ಇರುತ್ತದೆ. They are natural calamities. ಪ್ರಕೃತಿ ವಿಕೋಪಕ್ಕೆ ಹೋದಾಗ ಇಂಥ ದುರಂತಗಳಾಗುತ್ತವೆ. ಈ ಸಾರಿ ಈ ರಾಷ್ಟ್ರದ ಅರ್ಧ ಭಾಗದಲ್ಲಿ ಅಂದರೆ ಹೆಚ್ಚಿನ ರಾಜ್ಯಗಳಲ್ಲಿ ಇವತ್ತು ಬರ ಉಂಟಾಗಿದೆ. ಕೆಲವು ಕಡೆ ಪ್ರವಾಹ ಬಂದಿರತಕ್ಕಂಥಾದ್ದನ್ನೂ ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರ ಯಾವ ರೀತಿ ಸಜ್ಜಾಗುತ್ತದೆ ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಅವರು ಅದಕ್ಕಾಗಿ economy measures ತಂದಿದ್ದಾರೆ. ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ರಾಜ್ಯಗಳಿಗೆ ನಾವು ಯಾವ ರೀತಿ ಸಹಾಯ ಮಾಡಬೇಕು, ನೀವು ಯಾವ ರೀತಿ ಮನವಿ ಕೊಡುತ್ತೀರಿ, ಯಾವ ರೀತಿ study ಮಾಡತಕ್ಕಂಥ ಟೀಂಗಳನ್ನು ಕಳುಹಿಸಬೇಕು, ಅದರ ಆಧಾರದ ಮೇಲೆ ನಾವು ಯಾವ ರೀತಿ ರಾಜ್ಯಗಳ ನೆರವಿಗೆ ನಿಲ್ಲಬೇಕು ಎನ್ನುವ ವಿಷಯಗಳಲ್ಲಿ

ಸಜ್ಜಾಗುತ್ತಿದ್ದಾರೆ. ನೀವು ಯಾವ ರೀತಿ ಸಂಪನ್ಮೂಲಗಳನ್ನು ಕ್ರೂಢೀಕರಿಸಬೇಕು, ಇದರ ಬಗ್ಗೆ ಕೇಂದ್ರ ಸರ್ಕಾರ ವಿಶೇಷವಾಗಿ ಹಾಕಿರತಕ್ಕಂಥ ಯೋಜನೆಗಳೇನು ಇವುಗಳನ್ನೆಲ್ಲ ಕೇಂದ್ರ ಸರ್ಕಾರ ಬಹಳ ಕಟ್ಟುನಿಟ್ಟಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಬರಪೀಡಿತ ರಾಜ್ಯಗಳಲ್ಲಿ ನಮ್ಮ ರಾಜ್ಯವೂ ಕೂಡ ಒಂದಾಗಿದೆ. ಕೇಂದ್ರ ಸರ್ಕಾರ ಅಭಯ ಕೊಟ್ಟಿದೆ, 13 ತಿಂಗಳು ನೀವ್ಯಾರು ಯೋಚನೆ ಮಾಡುವ ಹಾಗಿಲ್ಲ. ನಾನೂ ಕೇಂದ್ರದಲ್ಲಿ Food Minister ಆಗಿದ್ದೆ, ನನಗೆ ತಿಳಿದಿರುವಂತೆ ಕೇಂದ್ರದಲ್ಲಿ buffer stock ಇದೆ. ಆಹಾರ ಭದ್ರತೆಗಾಗಿ ಅದನ್ನು ಇಟ್ಟುಕೊಂಡಿರುತ್ತಾರೆ. 13 ತಿಂಗಳಲ್ಲ, 15 ತಿಂಗಳುಗಳವರೆಗೆ ಯಾವುದೇ ರೀತಿಯಾದಂಥ ಬರವನ್ನು ಅಥವಾ ಅತಿವೃಷ್ಟಿಯಿಂದ ಆಗತಕ್ಕಂಥ ತೊಂದರೆಗಳನ್ನು ಎದುರಿಸತಕ್ಕಂಥ ಸಿದ್ಧತೆ ಇದೆ. ನಮಗೆ ಆ ರೀತಿಯಾದಂಥ ಅವಕಾಶವೂ ಇದೆ. ಕೇಂದ್ರ ಸರ್ಕಾರದವರು ನಿಮಗೆ ಧೈರ್ಯವನ್ನೂ ತುಂಬಿದ್ದಾರೆ, ನಾವಿದ್ದೇವೆ, you just go ahead ಎಂದು ಹೇಳಿದ್ದಾರೆ. ಬರವನ್ನು ಎದುರಿಸತಕ್ಕಂಥ ರೀತಿಯಲ್ಲಿ ನೀವು ಮುಂದುವರೆಯಿರಿ, ಯಾವ ರೀತಿಯಲ್ಲಿ ಕಾರ್ಮಿಕರ ಕೈಗಳಿಗೆ ಕೆಲಸವನ್ನು ಕೊಡಬೇಕು, ಯಾರೂ ಕೂಡ ಗುಳೇ ಹೋಗಬಾರದು ಎಂದು ಹೇಳಿದ್ದಾರೆ. ನಮ್ಮ Revenue Minister ಮತ್ತು ಮುಖ್ಯಮಂತ್ರಿಗಳು ಕೇಂದ್ರದಲ್ಲಿರತಕ್ಕಂಥವರ ಜೊತೆ ಚರ್ಚೆ ಮಾಡಿರಬಹುದು. ಕೇಂದ್ರ ಸರ್ಕಾರ ಯಾವುದೇ ತಾರತಮ್ಯವಿಲ್ಲದೇ, ಯಾವುದೇ ಮಲತಾಯಿ ಧೋರಣೆಯಿಲ್ಲದೇ ನಮಗೆ ಸಹಕಾರವನ್ನು ಕೊಡುತ್ತಾರೆ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರದ ನೆರವನ್ನು ಹೆಚ್ಚಿನ ರೀತಿಯಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ಪ್ರಸ್ತಾಪ ಮಾಡುತ್ತೇನೆ. ನೀವು ಕೈಕಟ್ಟಿ ಕುಳಿತ್ತಿದ್ದೀರಿ ಎಂದೇನೂ ಅಲ್ಲ. ಸರ್ಕಾರದವರಾದ ನೀವು ಮಾಡುತ್ತಿದ್ದೀರಿ. ನನಗೆ ಬಹಳ ಸಂತೋಷವಾಯಿತು. ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರು ಬರಪೀಡಿತ ಪ್ರದೇಶಗಳಲ್ಲಿ video conferenceಗಳನ್ನು ಮಾಡಿ ಅಲ್ಲಿರುವವರ ಜೊತೆ ಮಾತುಕತೆಯನ್ನು ನಡೆಸಿದ್ದೀರಿ. ಅಲ್ಲಿ ಯಾವ ರೀತಿಯಾಗಿ ಕೆಲಸಕಾರ್ಯಗಳಾಗಬೇಕು, ಕಾಮಗಾರಿಗಳು ಯಾವ ರೀತಿ ಆಗಬೇಕು, ಅಲ್ಲಿರುವವರಿಗೆ ಯಾವುದೇ ರೀತಿ ತೊಂದರೆಯಾಗಬಾರದು ಎನ್ನತಕ್ಕಂಥಾದ್ದನ್ನೂ ತಾವು ಮಾಡಿದ್ದೀರಿ. ಕೆಲವು ಜಿಲ್ಲೆಗಳಲ್ಲಿ ಮುಂಗಾರು

ಬಹಳ ಆಶಾದಾಯಕವಾಗಿತ್ತು. ಕೆಲವು ಕಡೆಗಳಲ್ಲಿ ಕೈಕೊಟ್ಟಿದೆ. ಕೆಲವು ಜಿಲ್ಲೆಗಳಲ್ಲಿ ಬೇಗ ಪ್ರಾರಂಭವಾಯಿತು, ಕೆಲವು ಜಿಲ್ಲೆಗಳಲ್ಲಿ ಆಗಲಿಲ್ಲ, ಆನಂತರ ಕೋಲಾರ, ಚಾಮರಾಜನಗರಗಳಂಥ ಕೆಲವು ಜಿಲ್ಲೆಗಳಲ್ಲಿ ಮಳೆ ಬಂತು. ಹೈದರಾಬಾದ್ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮಳೆಯೇ ಆಗಿರಲಿಲ್ಲ. ಇತ್ತೀಚೆಗೆ ಅಂದರೆ ನಿನ್ನೆ, ಮೊನ್ನೆಯಿಂದ ಮಳೆಯಾಗಿದೆ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಎನ್ನುವ ಹಾಗೆ ಸರ್ಕಾರದವರು ಬರ ಬಂದು, ಅದರಿಂದ ರೈತ ಪರಿತಪಿಸುವಾಗ ನಾವು ಅದಕ್ಕೆ ಹೆಚ್ಚು ಹೆಚ್ಚು ಗಮನವನ್ನು ಕೊಡುತ್ತೇವೆ. ನಾವು ಇದಕ್ಕೆ ಸರಿಯಾದ ಸಿದ್ಧತೆಗಳನ್ನು ಮಾಡಿಲ್ಲ ಎಂದು ಜಯಚಂದ್ರರವರು ಮಾತನಾಡುವಾಗ ಹೇಳುತ್ತಿದ್ದರು. ಶಾಶ್ವತವಾದ ಬರವಿತಕ್ಕಂಥ ಗ್ರಾಮಗಳು, ತಾಲ್ಲೂಕುಗಳಲ್ಲಿ ನಾವು ಯಾವ ರೀತಿ ಕಣ್ಣಲ್ಲಿ ಕಣ್ಣಿಟ್ಟು ಅದರ ಕಡೆ ಗಮನ ಕೊಡಬೇಕು, ಸಿದ್ಧತೆಗಳನ್ನು ಮಾಡಬೇಕು, ಯಾವ ರೀತಿ ಕಾಮಗಾರಿಗಳಿರಬೇಕು ಎನ್ನುವ ಬಗ್ಗೆ ತುಂಬ ಚೆನ್ನಾಗಿ ಮಾತನಾಡುತ್ತಿದ್ದರು. ತಾವು ಕೃಷಿ ಸಚಿವರಲ್ಲ, ಆದರೆ ತಾವೂ ಕೂಡ ಅದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. Natural Calamities ಬಂದಾಗ ಏನು ಮಾಡಬೇಕು ಎಂದು ಅವರು ಹೇಳುತ್ತಿದ್ದರು. Chief Secretaryಯವರ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ಬರಪೀಡಿತ ಗ್ರಾಮಗಳಲ್ಲಿ, ತಾಲ್ಲೂಕುಗಳಲ್ಲಿ ಯಾವ ರೀತಿಯಾದಂಥ ಪರಿಹಾರ ಕಾರ್ಯಗಳು ಅಥವಾ ಕಾಮಗಾರಿಗಳು ಆಗಬೇಕು ಎನ್ನುವುದಕ್ಕೆ ಒಂದು ಉಪಸಮಿತಿ ಇದೆ. ಮಾನ್ಯ ಕಂದಾಯ ಸಚಿವರೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ, ಜಿಲ್ಲಾ ಮಂತ್ರಿಗಳಿದ್ದಾರೆ, ತಾಲ್ಲೂಕು ಮಟ್ಟದಲ್ಲಿ ನಾವೆಲ್ಲರೂ ಕೂಡ ಸದಸ್ಯರಾಗಿದ್ದೇವೆ. ಆದರೆ ನಮ್ಮ ನಿರೀಕ್ಷೆಗೆ ತಕ್ಕಂತೆ ಸರಿಯಾದ ರೀತಿಯಾಗಿ ಆಗಿಲ್ಲ. ಅದರ ಕಡೆ ನಾವು ಹೆಚ್ಚು ಗಮನವನ್ನು ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಹೋದ ವರ್ಷ ರೈತರ ಮೇಲೆ ಗುಂಡು ಹಾರಿಸಿದ ಘಟನೆ ನಡೆದಿದ್ದು, ಅದಕ್ಕೆ ಸಂಬಂಧಿಸಿದಂತೆ ಇನ್ನೂ ಕೂಡ ಜಸ್ಟೀಸ್ ಸೋಮಶೇಖರ್‌ರವರ ಆಯೋಗದ ವರದಿ ಬರಬೇಕಾಗಿದೆ. ಇಂಥ ಸಂದರ್ಭದಲ್ಲಿ ಕೃಷಿ ಸಚಿವರು ಬಹಳ alert ಆಗಿರಬೇಕು. ಮೊನ್ನೆ ದಾವಣಗೆರೆ ಮತ್ತು ಹಾವೇರಿಗಳಲ್ಲಿ ಮತ್ತೆ ಗಲಾಟೆ ಶುರುವಾಗಿತ್ತು. firing ಮತ್ತಿತರ ಗಲಾಟೆಗಳು ಆಗುವುದು ನಿಂತಿದೆ. ಅಲ್ಲಿ ಸರಿಯಾದ ರೀತಿಯಲ್ಲಿ ಗೊಬ್ಬರ ಮತ್ತು ಬೀಜಗಳನ್ನು ಕೊಡದೇ ಗಲಾಟೆ ಪ್ರಾರಂಭವಾಗಿತ್ತು. ಸದ್ಯ ಅದು ಅಲ್ಲಿಗೇ ನಿಂತಿದೆ. ನಾನು ಏಕೆ ಇದನ್ನು

ಹೇಳುತ್ತಿದ್ದೇನೆ ಎಂದರೆ ನೀವು ಅದಕ್ಕೆ ಇನ್ನೂ ದೂರಾಲೋಚನೆಯನ್ನು ಮಾಡಲೇ ಇಲ್ಲ. ಹೋದ ಸಾರಿ ನಿಮಗೆ ಅಷ್ಟು ಕಹಿ ಅನುಭವವಾಗಿದೆ, ಗಲಾಟೆಗಳಾಗಿವೆ. ಇವತ್ತು ನಮಗೆ satelliteಗಳಿಂದ ಏನು ಬೇಕೋ ಆ ಎಲ್ಲ ಮಾಹಿತಿ ಸಿಗುತ್ತದೆ. Weather predictionನಿಂದ ಹಿಡಿದು ಪ್ರತಿಯೊಂದು ಮಾಹಿತಿಯೂ ಸಿಗುತ್ತದೆ, ನಾವು ಎಷ್ಟು ಎಚ್ಚರಿಕೆಯಿಂದ ಇರಬೇಕು, ಏನು ಮಾಡಬೇಕು ಎಂದು ಅದರಿಂದ ತಿಳಿಯುತ್ತದೆ. ನಾವು ಏಕೆ ಆ ಕಡೆಗೆ ಗಮನ ಕೊಡುತ್ತಿಲ್ಲ ಎನ್ನುವುದು ನನಗೆ ಆಶ್ಚರ್ಯ ತರುತ್ತಿದೆ. ಬರಪೀಡಿತ ಪ್ರದೇಶಗಳಲ್ಲಿ ಬರ ಬಂದಾಗ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ. ಇದಕ್ಕೆ ನಾವು ಹದ್ದಿನ ಕಣ್ಣಿಟ್ಟು ಕೆಲಸವನ್ನು ಮಾಡಬೇಕಾಗಿದೆ. ನಾವು ಎಷ್ಟೇ ಸಂಪನ್ಮೂಲಗಳು, scarcity funds ಏನೇ ಕೊಟ್ಟರೂ ಅದು ದುರುಪಯೋಗವಾಗತಕ್ಕಂಥಾದ್ದು ತುಂಬಾ ಜಾಸ್ತಿಯಾಗಿರುವುದಿಂದ ಇದನ್ನು ತಡೆಗಟ್ಟಬೇಕು. ಹಿಂದೆ ನಾನು M.P.ಯಾಗಿದ್ದಾಗ ಇದೇ ರೀತಿ ಬರ ಬಂದಿದ್ದಾಗ food for work ಎನ್ನುವ ಕಾರ್ಯಕ್ರಮವಿತ್ತು. ಆಗ ನಾನು ಒಂದು ಮಾತನ್ನು ಹೇಳಿದೆ. ಜನಪ್ರತಿನಿಧಿಗಳಾದ ನಾವು ನಮ್ಮ ಆತ್ಮಸಾಕ್ಷಿಯಾಗಿ ಇದರ ಬಗ್ಗೆ ಮಾತನಾಡೋಣ. ಈ ಒಂದು ಕೆಲಸದಲ್ಲಿ ನಾವೆಲ್ಲರೂ ಭಾಗಿಗಳಾಗೋಣ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತ್ ಸದಸ್ಯರು, ಶಾಸಕರು, Parliamentನಿಂದ ಹಿಡಿದು ಎಲ್ಲರೂ ಶಪಥ ಮಾಡೋಣ. ಈ ಬರ ಪರಿಹಾರಕ್ಕೆ ಬರುವ ಕಾಮಗಾರಿಗಳ ಹಣದಲ್ಲಿ ಯಾವುದೇ ರೀತಿಯಲ್ಲಿ ಮೂರು ಕಾಸು ಸಹ ದುರುಪಯೋಗವಾಗಬಾರದು, ಅದರಲ್ಲಿ ನನಗೆ ಯಾವುದೇ ರೀತಿಯ ಆಪಾದನೆ ಬರಬಾರದೆನ್ನುವ ಪ್ರಾಮಾಣಿಕವಾಗಿ ಪ್ರಮಾಣ ಮಾಡೋಣ. ಯಾವ ಅಧಿಕಾರಿಗಳನ್ನೂ ನಾವು ಹಿಡಿತದಲ್ಲಿಟ್ಟುಕೊಂಡು ಈ ಕೆಲಸ ಮಾಡಲಿಕ್ಕಾಗುವುದಿಲ್ಲವೆನ್ನುವ ಮಾತನ್ನು ಕೂಡ ಹೇಳುತ್ತೇನೆ. ಆ ತರಹದ ಆಲೋಚನೆಯನ್ನು, ಪ್ರತಿಜ್ಞೆಯನ್ನು ಮಾಡುವ ರೀತಿಯಲ್ಲಿ ಜನಪ್ರತಿನಿಧಿಗಳಾದ ನಾವು ಮಾಡಬೇಕು. ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿದೆ. ಮಳೆ ಬಂದಾಗ ಏನಾಗುತ್ತದೆನ್ನುವುದು ತಮಗೆಲ್ಲಾ ಗೊತ್ತಿದೆ. ಮುಖ್ಯವಾಗಿ, ಪ್ರವಾಹ ಬಂದಾಗ communication ಇರುವುದಿಲ್ಲ. ಏಕೆಂದರೆ, ಪ್ರದೇಶವೆಲ್ಲಾ ಜಲಾವೃತ್ತವಾಗಿರುತ್ತದೆ. ಬೆಳೆದ

ಬೆಳೆಗಳು ನಮ್ಮ ಕೈಗೆ ಸಿಗುವುದಿಲ್ಲ. ಆ ಸಮಯದಲ್ಲಿ ರೋಗ ರುಜಿಗಳು ಜಾಸ್ತಿಯಾಗುತ್ತವೆ. Relief works ತೆಗೆದುಕೊಳ್ಳಬೇಕಾಗಿರುವುದೆಲ್ಲ ನಮಗೆಲ್ಲ ಗೊತ್ತಿರುವುದು ಇದೆ. ಇದು ನಡೆಯುತ್ತಿರುವುದು regular phenomena. ಇದು ನಮ್ಮ ದೇಶದಲ್ಲಿ ಮಾತ್ರವಲ್ಲ, ಬೇರೆ ದೇಶಗಳಲ್ಲಿಯೂ ನಡೆಯುತ್ತಿದೆ. ನಾವು ಎಷ್ಟು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಗಮನ ಕೊಟ್ಟು ಕೆಲಸ ಮಾಡುತ್ತೇವೆ, ಕಾಮಗಾರಿಗಳನ್ನು ಮಾಡುತ್ತೇವೆ, ಅವರ ರಕ್ಷಣೆಗೆ ಹೋಗುತ್ತೇವೆ, ಅವರಿಗೆ ಯಾವ ರೀತಿಯ ಸಹಾಯ ಮಾಡುತ್ತೇವೆ ಎನ್ನುವುದು ಮುಖ್ಯ. ಕಂದಾಯ ಸಚಿವರೆ, ಇಲ್ಲಿ ವಾಸ ಮಾಡುವವರು ಬಹಳ ಬಡವರಿರುತ್ತಾರೆ. ಮಲೆನಾಡು ಇರಲಿ, coastal area ಇರಲಿ ಅಲ್ಲಿರತಕ್ಕಂಥ ಬಡವ ಅಂದು ದುಡಿದು ಅಂದೇ ತಿನ್ನುವ ಪರಿಸ್ಥಿತಿಯಲ್ಲಿರುತ್ತಾನೆ. ಅವನು ಈ ಪ್ರವಾಹದಿಂದಾಗಿ ಹೊರಗಡೆಗೆ ಕೆಲಸಕ್ಕೆ ಹೋಗುವುದಕ್ಕೇ ಆಗುವುದಿಲ್ಲ. ಏಕೆಂದರೆ, ಅವನನ್ನು ಯಾರೂ ಕೆಲಸಕ್ಕೆ ಕರೆಯುವ ಪರಿಸ್ಥಿತಿಯಲ್ಲಿರುವುದಿಲ್ಲ, ಏಕೆಂದರೆ, ಅವರೂ ಕೂಡ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಬೆಳೆದಂಥ ಬೆಳೆ ಕೂಡ ಪ್ರವಾಹದಿಂದಾಗಿ ಅವರ ಕೈಗೆ ಸಿಗುವುದಿಲ್ಲ. ಅವರೂ ಕೂಡ ಅತಂತ್ರ ಸ್ಥಿತಿಯಲ್ಲಿರುತ್ತಾರೆ. ಅವರು ಎಲ್ಲಿಗೆ ಹೋಗಬೇಕು? ನಾವು ಅವರಿಗೆ ಕಟ್ಟಿಸಿಕೊಟ್ಟ ಮನೆಗಳು, ಗುಡಿಸಲು ಮಳೆ ಇಲ್ಲದೆಯೇ ಬೀಳತಕ್ಕಂಥ ಸ್ಥಿತಿಯಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಇನ್ನು, ಮಳೆ ಬಿದ್ದಾಗ ಅವರು ಎಲ್ಲಿಗೆ ಹೋಗಬೇಕು? ಅವರಿಗಾಗಿ ಅಲ್ಲಿ ನಾವು ಗಂಜಿ ಕೇಂದ್ರ ತೆರೆಯುತ್ತೇವೆ. ಅವರು ದುಡಿಯುವುದಕ್ಕೆ ಬಹಳ ಕಷ್ಟವಿದೆ. ಅದರ ಕಡೆಗೆ ಅಧಿಕಾರಿಗಳು ಹೆಚ್ಚು ಗಮನಹರಿಸಬೇಕೆಂದು ತಾವು ಹೇಳಬೇಕು. ಈ ದೇಶದ ಸಾಮಾಜಿಕ ವ್ಯವಸ್ಥೆ ನೋಡಿ ನನಗೆ ಕೆಲವು ಸಾರಿ ಮನಸ್ಸಿಗೆ ನೋವಾಗುತ್ತದೆ. ಎಲ್ಲಾ ಜಾತಿಯವರೂ ಒಂದೇ ಕಡೆ ಗಂಜಿ ಕೇಂದ್ರಕ್ಕೆ ಹೋಗುವುದಕ್ಕೆ ತಯಾರಿರುವುದಿಲ್ಲ. ನಾನು ಇದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಒಂದು ಜಾತಿಯವನು ಆ ಗಂಜಿ ಕೇಂದ್ರ ಬೇಡವೆಂದು ಹೇಳುತ್ತಾನೆ. ಆ ರೀತಿಯಾಗಿ ಜಾತಿ ಎನ್ನುವುದು ಮನುಷ್ಯನ bloodಗೆ inject ಆಗಿಬಿಟ್ಟಿದೆ. ಜಾತಿಯತೆಯಲ್ಲಿ ನಾವೆಲ್ಲಿದ್ದೇವೆ ಎನ್ನುವಂಥದ್ದು ಇದರಿಂದ ಗೊತ್ತಾಗುತ್ತದೆ. ಕೆಲವು ಸಾರಿ how it will kill us? ಎಂದು ನಮಗರ್ಥವಾಗುತ್ತದೆ. ಜಾತಿ ಎನ್ನುವುದು ಯಾವ ರೀತಿ ಕೊಲ್ಲುತ್ತದೆನ್ನುವುದು ಆ ಹಿನ್ನೆಲೆಯಲ್ಲಿ ಬಂದವರನ್ನು ಕೇಳಿದಾಗ

ಮನಸ್ಸಿಗೆ ಆಗುವ ನೋವಿದೆಯಲ್ಲ, ಅದು ಬಹಳ ಜನರಿಗೆ ಅರ್ಥವಾಗುವುದಿಲ್ಲವೆಂದು ತೋರುತ್ತದೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಗಂಜಿ ಕೇಂದ್ರಗಳನ್ನು ತೆರೆದಾಗ, ಅಸಹಾಯಕರು ಅತಂತ್ರ ಸ್ಥಿತಿಯಲ್ಲಿರುವವರ ಮಕ್ಕಳು ನರಳುತ್ತಿರುತ್ತಾರೆ, ವಾಸಕ್ಕೆ ಮನೆಯಿರುವುದಿಲ್ಲ, ದುಡಿಯುವುದಕ್ಕೆ ಕೆಲಸವಿರುವುದಿಲ್ಲ. ಅದನ್ನು ತಾವು ಯೋಚನೆ ಮಾಡಿ ಕೆಲಸ ಮಾಡಬೇಕು. ಅತಿವೃಷ್ಟಿಯಿಂದ ಯಾವ ರೀತಿಯಲ್ಲಿ ಜನಜೀವನ ಅಸ್ತವ್ಯಸ್ತವಾಗಿರುತ್ತದೆ, ಜನರು ಯಾವ ಯಾವ ರೀತಿಯಲ್ಲಿ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿರುತ್ತಾರೆ ಎನ್ನುವುದನ್ನು ತಾವು ಗಮನಹರಿಸಿ, ಅವರ ಆಹಾರದ ಕೊರತೆಯನ್ನು ನೀಗಿಸುವ ಕೆಲಸವನ್ನು ಎಲ್ಲಾ ರೀತಿಯಲ್ಲಿ ಮಾಡಬೇಕು. ಬರದ ಬಗ್ಗೆ ಹೇಳುವುದಾದರೆ, ಕೆಲವು ಕಡೆ ಶಾಶ್ವತವಾಗಿ ಬರವಿರುವುದನ್ನು ನಾವು ಕಂಡಿದ್ದೇವೆ. ಬರ ಬಂದ ಸಂದರ್ಭದಲ್ಲಿ 15, 20, 30 ಎಕರೆ ಜಮೀನಿರಲಿ ಅವರಿಗೆ ಬಿತ್ತನೆ ಮಾಡಿದ ಪ್ರಮಾಣದಲ್ಲಿ ರೈತರಿಗೆ ಕೈಗೆ ಬೆಳೆ ಸಿಗುವುದಿಲ್ಲ. ಬೆಳೆದ ಬೆಳೆ ನಷ್ಟವಾಗಿರುತ್ತದೆ. ರೈತರು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಆಹಾರದ ಸಮಸ್ಯೆಯಾಗುತ್ತದೆ, ಕುಡಿಯುವ ನೀರಿನ ಸಮಸ್ಯೆಯಾಗುತ್ತದೆ, ಮೇವಿನ ಸಮಸ್ಯೆಯಾಗುತ್ತದೆ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಆದ್ಯತೆ ಮೇಲೆ ಇದಕ್ಕೆ Scarcity Fund ನಿಂದೇನು ಕೊಡಬೇಕು ಅಥವಾ ವಿಶೇಷವಾಗಿ ತಂದಂಥ ಹಣವನ್ನು ಯಾವ ರೀತಿ ಕೊಡಬೇಕು, ಬೇರೆ ಬೇರೆ Democratic Institution ನಲ್ಲಿರುವಂಥ, ಬೇರೆ ಬೇರೆ ಸಂಸ್ಥೆಗಳು, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತ್‌ಗಳಲ್ಲಿರುವ ಹಣವನ್ನು ಯಾವ ರೀತಿ ಕ್ರೋಢೀಕರಿಸಿ ತೆಗೆದುಕೊಂಡು ಹೋಗಿ ಕೊಡಬೇಕು. ಇದೆಲ್ಲವನ್ನೂ ಅಲ್ಲಿ ಮಾಡುವಂಥದ್ದು ಬಹಳ ಮುಖ್ಯವಾಗಿದೆ. ಏಕೆಂದರೆ, ಹಸಿವು ಬಹಳ ಕಷ್ಟ, ಅದನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ತಾವೂ ಕೂಡ ಯೋಚನೆ ಮಾಡಿ, ಅದಕ್ಕೆ ಬೇಕಾದ ಪರಿಹಾರ ಕಾರ್ಯಕ್ರಮಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮಲ್ಲಿ lack of sincerity and honesty ಪ್ರಶ್ನೆ ಏಳುತ್ತದೆ. ಅದು ಇರತಕ್ಕಂಥದ್ದೇ. ನಮ್ಮಲ್ಲಿ ನಿಷ್ಠೆ, ಪ್ರಾಮಾಣಿಕತೆ ಕೊರತೆ ಇವೆಲ್ಲವೂ ಕೂಡ ಇದರಲ್ಲಿ ನಮಗೆ ಕಾಡುತ್ತಿದೆ. ಬರದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಎರಡು ಪ್ರಮುಖವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಮೊದಲನೆಯದು ಉದ್ಯೋಗ ಭರವಸೆ ಯೋಜನೆ ಮತ್ತು ಇನ್ನೊಂದು Food Security ಯೋಜನೆ.

ಇವೆರಡೂ ಬಹಳ ಮುಖ್ಯವಾಗಿರುವಂಥದ್ದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಏನಿದೆ ನೀವು ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದರೆ ಯಾರೂ ಕೂಡ ಗುಳೆ ಹೋಗಲಿಕ್ಕೆ ಅವಕಾಶವೇ ಇಲ್ಲ. ಈಗ ನೀವು Action Plan ತಯಾರಿಸಿ 2000 ಕೋ.ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಬಹಳ speed up ಮಾಡಬೇಕು. ಇದರಿಂದ ಎಲ್ಲರ ಕೈಗಳಿಗೂ ಕೆಲಸ ಸಿಗುತ್ತದೆ. ಇದಕ್ಕೆ ಕೇಂದ್ರದ ನೆರವು ಇದೆ. ಬರದ ಸಂದರ್ಭದಲ್ಲಿ ಇದು ಬಹಳ ಬೇಕಾಗಿರುವ ಯೋಜನೆಯಾಗಿದೆ. ಬರಪೀಡಿತ ಪ್ರದೇಶಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಈಗಾಗಲೇ ಗುರುತಿನ ಚೀಟಿ ಕೊಟ್ಟಿದ್ದೇವೆ. ಇದರಲ್ಲಿ ದಿನಕ್ಕೆ 80–100 ರೂ.ವರೆಗಿನ ಕೆಲಸವನ್ನು ಅವನಿಗೆ ಕೊಡಬೇಕೆಂದಿದೆ. ಈಗಾಗಲೇ ಕೇಂದ್ರ ಸರ್ಕಾರ ಅದನ್ನು 80 ರಿಂದ 100 ರೂ. ಕೊಡಬೇಕೆಂದು ಕೂಡ ಯೋಚನೆ ಮಾಡಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತರುವ ರೀತಿಯಲ್ಲಿ ನಾವು ಮಾಡಲೇಬೇಕು. ಯಾವುದೇ ಕಾರಣಕ್ಕೂ ಕೂಡ ಇದರಿಂದ ಹಿಂದೆ ಸರಿಯಬಾರದು. ನಾನು ಮತ್ತು ಸಿದ್ದರಾಮಯ್ಯನವರು ನಂಜನಗೂಡು ತಾಲ್ಲೂಕಿನಲ್ಲಿ ಇದ್ಧರ ಪ್ರಯೋಗ ಮಾಡಿದೆವು. ಆದರೆ, ಅದು ನಮಗೆ ತೃಪ್ತಿ ತರಲಿಲ್ಲ. ಅದು ಸಧ್ಯಕ್ಕೆ ಇನ್ನೂ ಕೂಡ ಯಾವ ರೀತಿಯಲ್ಲಿ ಅಲ್ಲಿ ದುಡಿಯುವವರಿಗೆ, ಅಲ್ಲಿಯ ರೈತರಿಗೆ ಕೆಲಸ ಸಿಗಬೇಕಾಗಿತ್ತೋ, ಬಹುಶ: ಆ ಮಟ್ಟದಲ್ಲಿ ಸಿಕ್ಕಿಲ್ಲ. ಇದನ್ನು ಬಹಳಷ್ಟು ಉಪಯೋಗ ಮಾಡಿಕೊಳ್ಳಬೇಕು. ಈ ಸಾರಿ ಸ್ವಾತಂತ್ರ್ಯ ದಿನಾಚರಣೆಯಂದು ಮಾನ್ಯ ಪ್ರಧಾನ ಮಂತ್ರಿಯವರು ಘೋಷಣೆ ಮಾಡಿ ಆಹಾರ ಭದ್ರತೆ ಎನ್ನುವ ತುಂಬಾ ಒಳ್ಳೆಯ 'ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಈ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ಕೂಡ 3 ರೂಪಾಯಿ ದರದಲ್ಲಿ 25 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆ ಎನ್ನುವ ಯೋಜನೆಯನ್ನು ಮಾಡಿದ್ದಾರೆ. ಅದರಿಂದ ಇವತ್ತು 75 ರೂಪಾಯಿಗಳಿಗೆ 25 ಕೆ.ಜಿ. ಅಕ್ಕಿ ಸಿಗುತ್ತದೆ. ಇದು ದುರುಪಯೋಗವಾಗಬಾರದು. ಇದು ರಾಜಕೀಯ ಸ್ಟಂಟ್ ಅಥವಾ ಲಾಭ ನಷ್ಟದಲ್ಲಿ ಓಟು ತೆಗೆದುಕೊಳ್ಳುವಂಥದ್ದಾಗಬಾರದು. ನೀವು ನೆಮ್ಮದಿ ಕೇಂದ್ರದಿಂದೇನು ಕೊಟ್ಟಿದ್ದೀರಲ್ಲ, ಅದನ್ನು ಬರಗಾಲ ಮುಗಿಯುವವರೆಗೆ ಮುಟ್ಟುವುದಕ್ಕೆ ಹೋಗಬೇಡಿ. 30% ಕಡಿಮೆ ಮಾಡುತ್ತೇವೆಂದು ಹೇಳಿದ್ದಿರಿ,

ಅದನ್ನು ಯಾವುದೇ ಕಾರಣಕ್ಕೂ ಮಾಡುವುದಕ್ಕೆ ಹೋಗಬೇಡಿ. ಈಗೇನು ನೀವು BPL card ಗಳನ್ನು ಕೊಟ್ಟಿದ್ದೀರಿ, ಅಷ್ಟೂ ಜನರಿಗೆ ಇವತ್ತು ಆಹಾರ ವಿತರಣೆಯಾಗಬೇಕು. ನನಗೆ ಕಷ್ಟ ಗೊತ್ತಿದೆ. ಏಕೆಂದರೆ, ನೀವಿಲ್ಲಿ ಕೊಟ್ಟಿರುವ ಎಲ್ಲಾ BPL card ದಾರರಿಗೆ ಕೇಂದ್ರ ಸರ್ಕಾರದಿಂದ ಪಡಿತರ ಸಿಗುತ್ತಿಲ್ಲ. ಇಲ್ಲಿ ನೀವೇನು BPL ಕುಟುಂಬಗಳನ್ನು identify ಮಾಡಿದ್ದೀರಿ, ಅಷ್ಟೂ ಜನರಿಗೂ subsidized rate ನಲ್ಲಿ ಕೇಂದ್ರ ಸರ್ಕಾರ ಪಡಿತರ ಕೊಡುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದವರು ಅವರದೇ ಆದ ರೀತಿಯಲ್ಲಿ ಸರ್ವೆ ಮಾಡುತ್ತಾರೆ. Planning Commission ನಿಂದ Experts Committee ಯಾಗಿ ನಾನು Minister ಆಗಿದ್ದಾಗ ಇದನ್ನು ಪ್ರೊ. ಲಕ್ಡವಾಲ ಕಮಿಟಿ ಎಂದು ಮಾಡಿ, ಪ್ರತಿ ರಾಜ್ಯಕ್ಕೂ ಕೂಡ ನಮ್ಮದೇ ಆದ criteria ಇಟ್ಟುಕೊಂಡು ಪ್ರತಿ ರಾಜ್ಯದಲ್ಲಿ BPL ಕುಟುಂಬಗಳನ್ನು identify ಮಾಡುತ್ತೇವೆ. ಆದರೆ, ಇಲ್ಲಿ ಅದರ ಮೂರರಷ್ಟು identify ಮಾಡಿರುತ್ತಾರೆ. ಹೀಗಾಗಿ, ನೀವು ಅಷ್ಟೂ open marketನಿಂದ ಕೊಂಡು ಪಡಿತರ ಚೀಟಿದಾರರಿಗೆ ಕೊಡಬೇಕಾಗಿರುವುದರಿಂದ ಎಚ್ಚರಿಕೆಯಿಂದ ಮಾಡಬೇಕಾಗಿದೆ. ಇದರಿಂದ ನಿಮಗೆ ಸ್ವಲ್ಪ ಹೊರೆಯಾಗುತ್ತದೆ. ಆದರೂ ಸಹ ಅದಕ್ಕೆ ಹೆಚ್ಚಿನ ರೀತಿಯ ಹಣಕಾಸು ಬಿಡುಗಡೆ ಮಾಡಬೇಕು. ಕೇಂದ್ರ ಸರ್ಕಾರ ಆಹಾರ ಭದ್ರತೆ ಎನ್ನುವ ಯೋಜನೆ ಜಾರಿಗೆ ತಂದಿದೆ ಅದರಿಂದ ಮಾತ್ರ ಇದು ಆಗುವುದಿಲ್ಲ, ನೀವೂ ಸಹ ಅದಕ್ಕೆ ಕೈಜೋಡಿಸಿ ಮಾಡಿದರೆ ಮಾತ್ರ ಆ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು, ನನ್ನ ಕ್ಷೇತ್ರ 14 ಗ್ರಾಮಪಂಚಾಯಿತಿಗಳಲ್ಲಿ ಕಾರ್ಯದರ್ಶಿಗಳೇ ಇಲ್ಲ. ಈ ರೀತಿ ಎಲ್ಲಾ ತಾಲ್ಲೂಕು ಜಿಲ್ಲೆಗಳಲ್ಲಿ ಕಾರ್ಯದರ್ಶಿಗಳು ಇಲ್ಲದಿರಬಹುದು. ಇದನ್ನು ಸರ್ಕಾರ ಸರಿಪಡಿಸಬೇಕು. ಪಂಚಾಯಿತಿಗಳಲ್ಲಿ ಈ ರೀತಿಯಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಕಾರ್ಯದರ್ಶಿಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಆ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ನೇಮಕಾತಿಯನ್ನು ಆದಷ್ಟು ಬೇಗ ಮಾಡಬೇಕು. ಇದರ ಜೊತೆಗೆ, ನಾವೆಲ್ಲರೂ ಸಹ ಮಾನವೀಯತೆಯ ದೃಷ್ಟಿಯಿಂದ ಯೋಚಿಸಬೇಕಾಗುತ್ತದೆ. ಒಂದು ಕಡೆ ಜನರು ತತ್ತರಿಸಿ ಹೋಗಿರುತ್ತಾರೆ, ಅವರ ಕೈಗೆ ಕೆಲಸ ಬೇಕು, ಅವರಿಗೆ ಹಸಿವು ಇರುತ್ತದೆ, ಅವರಿಗೆ ಕುಡಿಯುವ ನೀರಿನ ಕೊರತೆ ಇರುತ್ತದೆ, ಅಲ್ಲಿರುವ

ಜಾನುವಾರುಗಳಿಗೆ ಮೇವು ಒದಗಿಸಬೇಕು. ಇದರ ಜೊತೆಗೆ, ಮಕ್ಕಳ ವಿಚಾರದಲ್ಲಿ ತಾವೂ ಇನ್ನೂ ಹೆಚ್ಚಿಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಅಂಗನವಾಡಿಯಲ್ಲಿ ಸಣ್ಣ ಸಣ್ಣ ಮಕ್ಕಳಿದ್ದು ಯಾವುದೇ ರೀತಿಯ ತೊಂದರೆಯಾಗಬಾರದು. ಅದರಲ್ಲಿಯೂ ಬರಪೀಡಿತ ಪ್ರದೇಶಗಳಲ್ಲಿ ಆ ಮಕ್ಕಳು ಏನನ್ನೂ ಕೇಳುವುದಕ್ಕಾಗುವುದಿಲ್ಲ. ಬರಪೀಡಿತ ಪ್ರದೇಶಗಳಲ್ಲಿ ಬಡತನವಿದ್ದು ಮನೆಗಳಲ್ಲಿ ತಿನ್ನುವುದಕ್ಕೆ ಏನೂ ಸಿಗುವುದಿಲ್ಲವೆಂದು 3, 6 ವರ್ಷ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುತ್ತಾರೆ. ತಾವು ಎಲ್ಲಾ ಕೋನದಿಂದಲೂ ಯೋಚಿಸಬೇಕು. ಬಹಳ strict ಆಗಿ ಅವರೆಲ್ಲರಿಗೂ ಹೇಳಬೇಕು. ಬರಪೀಡಿತ ಪ್ರದೇಶಗಳಲ್ಲಿರುವ ಅಂಗನವಾಡಿಗಳಲ್ಲಿ ಆ ಮಕ್ಕಳನ್ನು ಹಿಂದಿಗಿಂತಲೂ ಹೆಚ್ಚು ಚೆನ್ನಾಗಿ ನೋಡಿಕೊಳ್ಳಬೇಕು. ಅವರಿಗೆ ಯಾವುದೇ ತೊಂದರೆಯಾಗಬಾರದು. ಅಲ್ಲಿರುವ ಶಾಲೆಗಳಲ್ಲಿ ಜಾರಿಯಲ್ಲಿ midday meals ಏನಿದೆ ಅದನ್ನು ಇನ್ನೂ ವ್ಯವಸ್ಥಿತ ರೀತಿಯಲ್ಲಿ ಮಾಡಿ, ಆ ಮಕ್ಕಳಿಗೆ ಆಹಾರದ ವಿತರಣೆಯಲ್ಲಿ ಯಾವುದೇ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಆ ಮಕ್ಕಳು ಮತ್ತು ಅಂಗನವಾಡಿಗೆ ಹೋಗುವ ಮಕ್ಕಳ ಬಗ್ಗೆ ನೀವು ಹೆಚ್ಚಿನ ಆಸಕ್ತಿ ವಹಿಸಬೇಕು. ಜೊತೆಗೆ, ವೃದ್ಧಾಪ್ಯ ವೇತನ ಕೊಡುತ್ತೀರಿ, ಸಂಧ್ಯಾ ಸುರಕ್ಷಾ ಕೊಡುತ್ತೀರಿ. ಇದ್ಯಾವುದೂ ಕೂಡ ನಿಲ್ಲಬಾರದು. ಇದು ಬಹಳ ಪ್ರಾಮಾಣಿಕವಾಗಿ ಸಂಬಂಧಪಟ್ಟವರಿಗೆ ತಲುಪುವ ರೀತಿಯಲ್ಲಿ ಮಾಡಬೇಕು. ಅಂಗವಿಕಲರು, ವಯಸ್ಸಾದವರಿಗೆ ಪೆನ್‌ಷನ್ ತಲುಪುವುದು ಇವೆಲ್ಲ ಈ ಸಮಯದಲ್ಲಂತೂ ಯಾವುದೇ ಕಾರಣಕ್ಕೂ ನಿಲ್ಲಬಾರದು. ಈ ಸಮಯದಲ್ಲಿ ಅಂಗನವಾಡಿಗಳಿಗೆ ಹೆಚ್ಚು ಹೆಚ್ಚು ಒಳ್ಳೆಯ ಆಹಾರ ಸಿಗಬೇಕು, midday meals ಸಿಗಬೇಕು. ಇದೂ ಕೂಡ ಬಹಳ ಮುಖ್ಯವಾಗಿರುವಂಥದ್ದು. ಇದನ್ನು ನಾವು ಮರೆಯುತ್ತೇವೆ. Relief works ಅಂತೂ ನಿಜವಾದ ರೀತಿಯಲ್ಲಿ ಬರದಿಂದ ತತ್ತರಿಸಿರುವ ಆ ಗ್ರಾಮಗಳಿಗೆ ತಲುಪಿದರೆ ಮಾತ್ರ ಸಾರ್ಥಕವಾಗುತ್ತದೆ. ಕೇಂದ್ರ ಸರ್ಕಾರದಿಂದ ಸಹ ಸಹಾಯ ಕೊಡುವುದರಲ್ಲಿ ತೊಂದರೆಯಿಲ್ಲ. ಈ ರಾಜ್ಯದಿಂದ ಸಂಸತ್ ಆಯ್ಕೆಗಾಗಿ ಲೋಕಸಭಾ ಸದಸ್ಯರಾಗಿರುವವರು, ಮೂರು ಜನ ಸಚಿವರಿದ್ದು ಅವರಿಗೆ ಅನುಭವವಿದೆ. ಶ್ರೀ ಎಸ್.ಎಂ. ಕೃಷ್ಣರವರು ಇಲ್ಲಿ ಮುಖ್ಯಮಂತ್ರಿಯಾಗಿದ್ದರವರು ಕೇಂದ್ರದಲ್ಲಿ ಸಚಿವರಾಗಿದ್ದಾರೆ. ಶ್ರೀ ವೀರಪ್ಪ ಮೊಯಿಲಿಯವರು ಸಹ ಇಲ್ಲಿ ಮುಖ್ಯಮಂತ್ರಿಯಾಗಿದ್ದವರು. ಈಗ

ಕೇಂದ್ರದಲ್ಲಿ ಕಾನೂನು ಸಚಿವರಾಗಿದ್ದರೆ. ಶ್ರೀ ಧರ್ಮಸಿಂಗ್‌ರವರು ಇಲ್ಲಿ ಮುಖ್ಯಮಂತ್ರಿಯಾಗಿದ್ದವರು ಅಲ್ಲಿ ಸಂಸತ್ ಸದಸ್ಯರಿದ್ದಾರೆ. ಶ್ರೀ ಮಲ್ಲಿಕಾರ್ಜುನ ಖರ್ಗೆ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದಾರೆ. ಮುಖ್ಯಮಂತ್ರಿ ಹುದ್ದೆ ಬಿಟ್ಟರೆ ಉಳಿದ ಎಲ್ಲದರಲ್ಲೂ ಅನುಭವವಿದ್ದ ಇವತ್ತು ಕೇಂದ್ರ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದಾರೆ. ರಾಜ್ಯದಲ್ಲಿ ಬರಪರಿಸ್ಥಿತಿ ಇರುವುದರಿಂದ ನಾವು ಕೇಂದ್ರದ ಸಹಾಯವನ್ನು ತೆಗೆದುಕೊಳ್ಳಬೇಕಾಗಿದೆ. ಯಾವುದೇ ಕಾರಣದಿಂದ ತೊಂದರೆಯಾಗದ ರೀತಿಯಲ್ಲಿ ನಾವು ಅವರ ನೆರವನ್ನು ತೆಗೆದುಕೊಳ್ಳಲಿಕ್ಕೆ, ಸಹಾಯವನ್ನು ಪಡೆದುಕೊಳ್ಳಲಿಕ್ಕೆ ಸಹಾಯವಾಗುತ್ತದೆ. ಅದಕ್ಕೆ ನಮ್ಮ ಸಂಸತ್ ಸದಸ್ಯರ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೇಂದ್ರದಲ್ಲಿ ಮಂತ್ರಿಗಳಾಗಿರುವವರು ನಮಗೆ ಬಹಳಷ್ಟು ಸಹಾಯ ಮಾಡುವವರು ಕೇಂದ್ರದಲ್ಲಿದ್ದಾರೆ. ಅವರ ನೆರವು, ಸಹಾಯ ಪಡೆದುಕೊಂಡು ಯುದ್ಧೋಪಾದಿಯಲ್ಲಿ ಹದ್ದಿನ ಕಣ್ಣಾಗಿ ಇದರ ಕಡೆಗೆ ಗಮನ ಕೊಟ್ಟು ಕಣ್ಣಲ್ಲಿ ಕಣ್ಣಿಟ್ಟು ನಾವೆಲ್ಲರೂ ಕೂಡ ಪರಸ್ಪರ ವಿಶ್ವಾಸದಿಂದ ಬರ ಪರಿಹಾರದ ವಿರುದ್ಧ ಹೋರಾಟ ಮಾಡುವ ರೀತಿಯಲ್ಲಿ ಒಂದಾಗಿ ಹೋಗೋಣ. ನಾನು parliament ನಲ್ಲಿದ್ದವನು. ರಾಜಕೀಯದಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ಆಗುತ್ತವೆ. Be as a Roman, when you are in Rome. ಇಲ್ಲಿ ತುಂಬಾ ಚೆನ್ನಾಗಿ ಚರ್ಚೆಗಳಾಗುತ್ತಿವೆ. ನಾನೂ ಕೂಡ ಇಲ್ಲಿಯ ಸಮಸ್ಯೆಗಳ, ರಾಜ್ಯದ ಸ್ಥಿತಿಗತಿಯ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅರ್ಥ ಮಾಡಿಕೊಳ್ಳುವುದಕ್ಕೆ ಇಲ್ಲಿ ತುಂಬಾ ಅವಕಾಶವಿದೆ. ಆ ದಿಕ್ಕಿನಲ್ಲಿ ನಾನೂ ಕೂಡ ಕಿಂಚಿತ್ತಾದರೂ ಇಂಥ ಪರಿಸ್ಥಿತಿ ಬಂದ ಸಂದರ್ಭದಲ್ಲಿ ಮಾತನಾಡಬೇಕೆಂದು ತಮ್ಮನ್ನು ಕೇಳಿದ್ದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಶ್ರೀ ಹೆಚ್.ಡಿ. ರೇವಣ್ಣ : ನಮ್ಮ ಪಕ್ಷದ ಮಹಿಳಾ ಸದಸ್ಯರು ಮಾತನಾಡಬೇಕೆಂದಿದ್ದಾರೆ.

ಅಧ್ಯಕ್ಷರು: No, BACಯಲ್ಲಿ ಚರ್ಚೆ ನಡೆದು ಏನು understandingಗೆ ಬರಲಾಗಿದೆ, ಆ ರೀತಿ ತಾವು ನಡೆದುಕೊಳ್ಳಬೇಕು. ರೇವಣ್ಣನವರೆ, ಸಮಸ್ಯೆ ಬರುವುದೇ ನಿಮ್ಮ ಕಡೆಯಿಂದ. Understandingಗೆ ಬಂದಿದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು. ನೀವೂ ಮತ್ತೆ ಒತ್ತಡಕ್ಕೆ ಮಣಿದುಬಿಡುತ್ತೀರಿ. No, ಇದು ಸರಿಯಲ್ಲ. ನೀವು ಒಬ್ಬರು ಮಾತನಾಡಿ ಅಥವಾ ನೀವು

ಮಾತನಾಡುವುದಿಲ್ಲವೆಂದರೆ ನಿಮ್ಮ ಪರವಾಗಿ ಯಾರಾದರೊಬ್ಬರು ಮಾತನಾಡಲಿ. ಅದು ಬಿಟ್ಟು ನೀವೂ ಮಾತನಾಡಬೇಕು, ನಿಮ್ಮ ಜೊತೆ ಮತ್ತೆ 4 ಜನ ಮಾತನಾಡಬೇಕೆಂದರೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಬೆಳಗ್ಗೆ ನಾವು ಆಡಿದ ಮಾತಿನಿಂದ ತಮಗೇನಾದರೂ ನೋವಾಗಿದ್ದರೆ, ನಿಮ್ಮ ಕುರ್ಚಿ ವಿರುದ್ಧ ನಾವು ಯಾವತ್ತೂ ಮಾತನಾಡುವುದಿಲ್ಲ. ನಾವು ಬಹಳ ವರ್ಷಗಳಿಂದ ಈ ಸದನದಲ್ಲಿದ್ದೇವೆ. ಆದರೆ, ನಿಯಮಾವಳಿಗಳು, ನಮಗೆ ಬಂದಿರುವ ಸಂಪ್ರದಾಯಗಳು ಇವೆಲ್ಲವೂ ಕೂಡ ಪಾಲನೆಯಾಗಬೇಕೆಂಬುದು ಬಹಳ ಮುಖ್ಯ. ಒಳ್ಳೆಯ ಉದ್ದೇಶದಿಂದ ತಾವು ಆ ಮಾತುಗಳನ್ನಾಡಿದ್ದೀರಿ. ನೀವು ತಮ್ಮ ತೀರ್ಮಾನ ಕೊಟ್ಟಿದ್ದರೂ ಕೂಡ ನಮ್ಮ ಮನವಿಯನ್ನು ಪುರಸ್ಕಾರ ಮಾಡಿ ಬಹಳ ಮುಖ್ಯವಾದ, ಪ್ರಮುಖವಾದ ವಿಚಾರ ಇದೆಯೆಂದು ಬರ ಪರಿಸ್ಥಿತಿ ಬಗ್ಗೆ ಚರ್ಚಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ನಮ್ಮ ಪಕ್ಷದಿಂದ ಇನ್ನೂ ಬಹಳ ಸದಸ್ಯರು ಮಾತನಾಡಬೇಕಾಗಿತ್ತು. ಆದರೆ, ಕಾಲದ ಅಭಾವದಿಂದ ನಾನು BAC ಯಲ್ಲಿ ಒಪ್ಪಿಕೊಂಡು ಬಂದಿರುವುದರಿಂದ ಮಾನ್ಯ ಸದಸ್ಯರಿಗೆಲ್ಲ ಮನವಿ ಮಾಡಿಕೊಂಡಿದ್ದೇನೆ. ಮೊದಲಿಗೆ, ಶ್ರೀನಿವಾಸಪ್ರಸಾದ್‌ರವರು ಮಾತನಾಡುತ್ತಾರೆ ಆಮೇಲೆ ನಾನು ಸ್ವಲ್ಪ ಹೊತ್ತು ಮಾತನಾಡುತ್ತೇನೆ, I am not feeling well today.

ಅಧ್ಯಕ್ಷರು : ಸದಸ್ಯರು ಯಾರೂ ಪರಸ್ಪರ ಮಾತನಾಡಬಾರದು. ಸದನದ ಗೌರವ ಕಾಪಾಡಬೇಕು. ಇದು ಒಳ್ಳೆಯದಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ತಮ್ಮಲ್ಲಿ ನನ್ನ ಮನವಿ ಏನೆಂದರೆ, ಸರ್ಕಾರದ ಕಡೆಯಿಂದ ಉತ್ತರ ಕೊಟ್ಟ ಮೇಲೆ ಕೆಲವು ಮಾನ್ಯ ಸದಸ್ಯರು clarification ಕೇಳಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ನೋಡೋಣ. ನಾವು ಒಂದು time limit ಹಾಕಿಕೊಂಡಿದ್ದೇವೆ. ಅನಂತರ ಟೈಮ್ ಉಳಿದರೆ ನೋಡೋಣ.

ಶ್ರೀ ಸಿದ್ದರಾಮಯ್ಯ : ಮಧ್ಯಾಹ್ನ 2.30 ಗಂಟೆಯೊಳಗೆ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು: ಹಾಗಾದರೆ ರೇವಣ್ಣನವರು ಯಾವಾಗ ಮಾತನಾಡುವುದು?

ಶ್ರೀ ಸಿದ್ದರಾಮಯ್ಯ: ರೇವಣ್ಣ ಇದರ ಬಗ್ಗೆ ಮಾತನಾಡುವುದಿಲ್ಲ. He is very particular about scandal.

ಅಧ್ಯಕ್ಷರು : ಇನ್ನೂ reply ಆಗಬೇಕಾಗಿದೆ.

ಶ್ರೀ ಸಿದ್ದರಾಮಯ್ಯ : Lunch break ಇಲ್ಲದೆ ಮಧ್ಯಾಹ್ನ ಮೂರು ಗಂಟೆಗೆ ಚರ್ಚೆ ಮುಗಿಸಿ Revenue ಮಂತ್ರಿಯವರು ಉತ್ತರ ಕೊಡಲಿ.

ಅಧ್ಯಕ್ಷರು : ನೀವು ಮಧ್ಯಾಹ್ನ 2.15 ರವರೆಗೆ ಮಾತನಾಡಿ. ಆಮೇಲೆ ರೇವಣ್ಣವರು 10 ನಿಮಿಷ ಮಾತನಾಡಲಿ. ನಂತರ reply ಆಗುತ್ತದೆ. ನಾನು ನಿಜವಾಗಿ Leader of opposition ರವರಿಗೆ restrictions ಹಾಕುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಹಾಕಬಾರದು.

ಅಧ್ಯಕ್ಷರು: ಅನಿವಾರ್ಯ ಕಾರಣಗಳಿಂದ ಇವತ್ತು time limitation ಹಾಕುತ್ತಿದ್ದೇವೆ. Leader of oppositionಗೆ ಸಂಪ್ರದಾಯ ಪ್ರಕಾರ ಹಾಕುವುದಿಲ್ಲ. ಅವರಿಗೆ freedom ಇದೆ. Restrictions ಹಾಕುವ ಪ್ರಶ್ನೆಯೇ ಇಲ್ಲ. ಆದರೆ, ಇವತ್ತಿನ ದಿವಸದ time limitation ಪ್ರಕಾರ ಹೋಗಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: ನಾನು 20 ನಿಮಿಷಗಳಲ್ಲಿ ಮಾತನಾಡಿ ಮುಗಿಸಲು ಪ್ರಯತ್ನಿಸುತ್ತೇನೆ. ನಾನು, ನಮ್ಮೆಲ್ಲ ಸ್ನೇಹಿತರು ರಾಜ್ಯದಲ್ಲಿ ಭೀಕರ ಬರ ಇದೆ, ಬಹಳ ಪ್ರಾಮುಖ್ಯವಾದ ವಿಚಾರ, ರಾಜ್ಯದ ಹಳ್ಳಿಗಾಡಿನ ರೈತರ ಹಿತದೃಷ್ಟಿಯಿಂದ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿ 9ನೇ ತಾರೀಖು ನಿಲುವಳಿ ಸೂಚನೆ ಮಂಡಿಸಿದ್ದೆ. ಆದರೆ, ಸರ್ಕಾರ ಮುಂದುವರೆದ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಕೃಷಿಗೆ ಒಂದು ಕಾಯಕಲ್ಪ ಕೊಡಬೇಕೆಂದು ಹೇಳಿದ್ದರಿಂದ ನಾವು ಅದಕ್ಕೆ ಆದ್ಯತೆ ಕೊಟ್ಟು ನಿಮ್ಮ ಸೂಚನೆ ಮೇರೆಗೆ ನಾನು ಅಷ್ಟೇ mention ಮಾಡಿದೆ. ನೀವು ಇದನ್ನು Rule 69ಗೆ convert ಮಾಡಿದಿರಿ. ನಿನ್ನೆ ನಾನು Assemblyಯಲ್ಲಿ ಇರಲಿಲ್ಲ. ನಮ್ಮ ಉಪನಾಯಕರು ಮತ್ತು ಅನೇಕ ಜನ ಸದಸ್ಯರು ಬರಗಾಲದ ಬಗ್ಗೆ ಮಾತನಾಡಿದ್ದಾರೆ. ಆಡಳಿತ ಮತ್ತು ವಿರೋಧ ಪಕ್ಷದ ಬಹಳ ಸದಸ್ಯರು ಮಾತನಾಡಿ ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಕಳೆದ 9 ವರ್ಷಗಳಿಂದ ಅಂದರೆ 2000ನೇ ಇಸವಿಯಿಂದ ಇಲ್ಲಿಯವರೆಗೆ 7 ವರ್ಷಗಳು ಬರಗಾಲ ಬಂದಿದೆ. Every 2 or 3 years ಕರ್ನಾಟಕದಲ್ಲಿ ಬರಗಾಲ ಬರುತ್ತಲೇ ಇದೆ. ಇದು ನಮಗೆಲ್ಲ ಗೊತ್ತಿದೆ. ನಾವು ಇದರ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇವೆ. Every 2 years 3 years ಬರಗಾಲ ಬರುತ್ತಿದೆ

ಎಂದು ಗೊತ್ತಿದ್ದರೂ ಕೂಡ, ಯಾವುದೇ ಸರ್ಕಾರವಿರಲಿ ಶಾಶ್ವತವಾಗಿ ಪರಿಹಾರ ಮಾಡುವುದಕ್ಕೆ ಒಂದು action plan ಅನ್ನು, ಸ್ಪಷ್ಟವಾದ ಕಾರ್ಯಕ್ರಮವನ್ನು ಇವತ್ತಿನವರೆಗೆ ಮಾಡಿಕೊಂಡಿಲ್ಲವೆಂಬುದು ವಾಸ್ತವಿಕ ವಿಚಾರ. ಈ ವರ್ಷವೂ ಬರಗಾಲವಿದೆ. ಕಳೆದ ವರ್ಷ 84 ತಾಲ್ಲೂಕುಗಳಲ್ಲಿ ಬರಗಾಲವಿತ್ತು. ಹಾಗಾಗಿ, ಕಳೆದ ವರ್ಷ ನಮ್ಮ ಆಹಾರೋತ್ಪಾದನೆ ಸುಮಾರು 20 ಲಕ್ಷ ಟನ್ ಕಡಿಮೆಯಾಯಿತು. ಬಹುಶ: ಈ ವರ್ಷವೂ ಕೂಡ 20 ರಿಂದ 25% ಆಹಾರೋತ್ಪಾದನೆ ಕಡಿಮೆಯಾಗುತ್ತದೆಂದು ಕೃಷಿ ಇಲಾಖೆಯವರು ಹೇಳಿದ್ದಾರೆ ಮತ್ತು ನಾವೆಲ್ಲರೂ ಸಹ ಲೆಕ್ಕಚಾರ ಮಾಡಿದ್ದೇವೆ. ಅಷ್ಟು ಆಗುವ ಸಾಧ್ಯತೆ ಜಾಸ್ತಿ ಇದೆ. ಇಡೀ ದೇಶದಲ್ಲಿ ರಾಜಸ್ಥಾನ ಬಿಟ್ಟರೆ ಕರ್ನಾಟಕವೇ ಬರಗಾಲಕ್ಕೆ ತುತ್ತಾಗುವ ರಾಜ್ಯಗಳಲ್ಲಿ No.1 ಸ್ಥಾನದಲ್ಲಿದೆ. ಏಕೆಂದರೆ, ಕರ್ನಾಟಕದಲ್ಲಿ rain fed area ಸುಮಾರು 70% ಇದೆ. Drought prone area more than 70% ಇದೆ. ಇದಕ್ಕಾಗಿಯೇ ನಾವು ಎರಡು ವರ್ಷಕ್ಕೊಮ್ಮೆ, ಮೂರು ವರ್ಷಕ್ಕೊಮ್ಮೆ ಬರಗಾಲಕ್ಕೆ ತುತ್ತಾಗುತ್ತಲೇ ಇದ್ದೇವೆ. ಆದರೂ ನಾವು ಅನುಭವದಿಂದ ಪಾಠ ಕಲಿಯಲೇ ಇಲ್ಲ. ಕಳೆದ ವರ್ಷ ಬರಗಾಲ ಬಂದಿತ್ತು, ಈ ವರ್ಷ ಬರಗಾಲ ಬಂತು ಎಂದು ನಾವು ಯಾವುದೇ ಒಂದು contingency plan ಕೂಡ ಮಾಡಿಕೊಳ್ಳಲಿಲ್ಲ. ಬರಗಾಲ ಬಂದರೆ ಹೇಗೆ ಎದುರಿಸಬೇಕು ಎನ್ನುವುದಕ್ಕೆ contingency plan ಮಾಡಬೇಕು. ಬೀಜ, ಗೊಬ್ಬರ, ನೀರು, ಮೇವು, ಜನಗಳಿಗೆ ಕೆಲಸ, ಮತ್ತೆ ನಾವು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಶಾರ್ಟ್ ಪಿರಿಯೇಡ್‌ನಲ್ಲಿ ಬೆಳೆಯತಕ್ಕಂಥ ಬೆಳೆಗಳು ಯಾವ್ಯಾವು? ಬರಗಾಲದ ಸಸ್ಟೇನ್ ಮಾಡಿಕೊಳ್ಳವ ಬೆಳೆಗಳು ಯಾವ್ಯಾವು? ಕಡಿಮೆ ಮಳೆ ಬಿದ್ದರೂ ಕೂಡ ಸಸ್ಟೇನ್ ಮಾಡಿಕೊಳ್ಳತಕ್ಕಂಥ ಬೆಳೆಗಳು ಯಾವ್ಯಾವು ಎಂದು ಗಂಭೀರವಾಗಿ ಯೋಚನೆ ಮಾಡಿಲ್ಲ. ನಮ್ಮ ಯೂನಿವರ್ಸಿಟಿಗಳು ಇದರ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಿಲ್ಲ. ಇದು ನಮ್ಮಲ್ಲಿರುವ ಮುಖ್ಯವಾದ ಬಹಳ ದೊಡ್ಡ ಕೊರತೆ. ನಮ್ಮಲ್ಲಿ ಎರಡು ಕೃಷಿ ವಿಶ್ವವಿದ್ಯಾಲಯಗಳಿವೆ. ಇದರ ಜೊತೆಗೆ ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಹೊರಟಿದ್ದೀರಿ. ಕಳೆ ಅನೇಕ ವರ್ಷಗಳಿಂದಲೂ ನಾವು ಬರಗಾಲಕ್ಕೆ ತುತ್ತಾಗುತ್ತಿದ್ದೇವೆ. 1999 ರಿಂದ 2004 ರವರೆವಿಗೂ ಸುಮಾರು ನಾಲ್ಕಾರು ವರ್ಷಗಳ ಕಾಲ ಬರಗಾಲ ಇತ್ತು. ಕಳೆದ ವರ್ಷ ಮತ್ತು ಈ ವರ್ಷ ಕೂಡ ಬರಗಾಲವಿದೆ. ರೈತರು ಗೊಬ್ಬರಕ್ಕಾಗಿ ಬಡಿದಾಡುತ್ತಾರೆ. ಅದಕ್ಕಾಗಿ ಶಾಶ್ವತವಾದ ಪರಿಹಾರೋಪಾಯಗಳನ್ನು

ಮಾಡಿಕೊಳ್ಳಬೇಕಾಗುತ್ತದೆ. ಇವುಗಳನ್ನು ಮಾಡಬೇಕಾದರೆ, ನಾವು ಆಹಾರದ ಉತ್ಪಾದನೆ ಹೆಚ್ಚು ಮಾಡಲಿಕ್ಕೆ ಏನು ಮಾಡಬೇಕೆಂದು ವಿಚಾರ ಮಾಡಬೇಕು. Watershed development programme ಗಳನ್ನು ವ್ಯಾಪಕವಾಗಿ ಮಾಡುವ ಕೆಲಸ ಮಾಡಬೇಕು. ಕರ್ನಾಟಕದಲ್ಲಿ ಸುಮಾರು 3,400 ಕೆರೆಗಳಿವೆ. ಮೈನರ್ ಇರಿಗೇಷನ್‌ನಲ್ಲಿ, ಜಿಲ್ಲಾ ಪಂಚಾಯತ್‌ನಲ್ಲಿ, ಒಂದೊಂದು ಕೆರೆಗೆ ಇಷ್ಟಿಷ್ಟು ಅಚ್ಚುಕಟ್ಟು ಪ್ರದೇಶ ಇದೆ ಎಂದು ಲೆಕ್ಕ ಬರೆದುಕೊಂಡಿದ್ದೇವೆ. 200, 300, 500, 1000 ಎಕರೆ ಅಚ್ಚುಕಟ್ಟು ಪ್ರದೇಶ ಇದೆ ಎಂದು ಬರೆದುಕೊಂಡಿದ್ದೇವೆ. ಆದರೆ, ವಾಸ್ತವಿಕವಾಗಿ ಅನೇಕ ಕೆರೆಗಳನ್ನು ಒತ್ತುವರಿ ಮಾಡಿದ್ದಾರೆ. ನಮ್ಮ ಅಚ್ಚುಕಟ್ಟು ಪ್ರದೇಶವನ್ನು ಒತ್ತುವರಿ ಮಾಡಿದ್ದಾರೆ. ಕೆರೆಗಳಿಗೆ ಅಚ್ಚುಕಟ್ಟು ಪ್ರದೇಶಗಳಿಂದ ನಿರು ಬಾರದೆ ಕೆರೆಗಳು ಬಂದ್ ಆಗಿವೆ. ಹೀಗಾಗಿ ಈ ಸಾರಿ ಮುಂಗಾರಿನಲ್ಲಿ 3,400 ಕೆರೆಗಳಲ್ಲಿ 680 ಕೆರೆಗಳಲ್ಲಿ 50 ರಷ್ಟು ನೀರು ತುಂಬಿಲ್ಲ. ಸುಮಾರು 1200 ಕೆರೆಗಳಲ್ಲಿ 40% ಗಿಂತ ಹೆಚ್ಚು ನೀರು ತುಂಬಲಿಲ್ಲ. ಉಳಿದ ಕೆರೆಗಳಲ್ಲಿ ನೀರೇ ಸಂಗ್ರಹಣೆಯಾಗಲಿಲ್ಲ. ನೀರು ಬಾರದೇ ಕೆರೆಗಳು ತುಂಬದೇ ಅವೆಲ್ಲಾ ಒಣಗಿಕೊಂಡು ಬಿದ್ದಿವೆ. ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಈ ರೀತಿಯಾಗಿ 3400 ಕೆರೆಗಳಲ್ಲಿ 50% ಗಿಂತ 40% ಗಿಂತ ಕಡಿಮೆ ನೀರು ತುಂಬಿದ್ದು 1200 ಕೆರೆಗಳಲ್ಲಿ ನೀರೇ ಇಲ್ಲ ಎಂದರೆ ನಮ್ಮ ಅಂತರಜಲ ಯಾವ ಮಟ್ಟಕ್ಕೆ ಕೆಳಗೆ ಹೋಗಿದೆ ಎಂದು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ಅದಕ್ಕಾಗಿ ನಮ್ಮ ಕೆರೆಗಳನ್ನು ತುಂಬಿಸುವುದಕ್ಕಾಗಿ, ಯಾರ ಮುಲಾಜಿಲ್ಲದೆ, ಒತ್ತುವರಿಯಾಗಿರುವ ಎಲ್ಲವೂ ಕೂಡ ಬುನಾದಿ ಸಮೇತವಾಗಿ ತೆರವುಗೊಳಿಸಬೇಕು. ಏಕೆಂದರೆ, ಕೆಲವರು ಬಹಳ ಪ್ರಭಾವಶಾಲಿಗಳು ಒತ್ತುವರಿ ಮಾಡಿರುತ್ತಾರೆ. ತಹಶೀಲ್ದಾರ್‌ರವರು ಅವುಗಳನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ. ರಾಜಕೀಯ ಪ್ರಭಾವ ಬೀರತಕ್ಕಂಥವರು ಇರುತ್ತಾರೆ. ಲಂಚ ಕೊಟ್ಟು ಪೊಲೀಸ್‌ರವರನ್ನು, ರೆವಿನ್ಯೂ ಇಲಾಖೆಯವರನ್ನು, ಬಳಸಿಕೊಂಡು ಮೋಸ ಮಾಡಿಕೊಂಡಿರುತ್ತಾರೆ. ಅದಕ್ಕೆ ನನ್ನ ಸಲಹೆ ಏನೆಂದರೆ, 3,400 ಕೆರೆಗಳಿಗೂ ಕೂಡ, ಹೇಗೂ ನಮಗೆ NREG ನಲ್ಲಿ ದುಡ್ಡು ಬಂದಿದೆ. ಅದನ್ನು ಬಳಸಿ. ನಾಲೆಗಳು ಸಿಲ್ಟ್ ಅಪ್ ಮಾಡಬೇಕಾದರೂ NREG ಯಿಂದ ದುಡ್ಡು ಬಳಸುತ್ತಾರೆ, ನೀರಾವರಿಯಿಂದ ಒಂದು ರೂಪಾಯಿ ಕೊಟ್ಟಿಲ್ಲ. ನಮ್ಮ ಬಸವರಾಜ ಬೊಮ್ಮಾಯಿರವರು ಇಲ್ಲಿ ಇಲ್ಲ. ನೀರಾವರಿ ಇಲಾಖೆಯಿಂದ ಕಳೆದ ವರ್ಷ, ಈ ವರ್ಷ for the maintenance of the canals, not a single pie is

given. ನರೇಂದ್ರ ಸ್ವಾಮಿಯವರೆ ನಿಮ್ಮ ಕಡೆಯ ನಾಲೆಗಳನ್ನು ನೀವು ನೋಡಿದ್ದೀರಲ್ಲವೆ? ಈ ಸಾರಿ NREG ಯಿಂದ ತಾನೇ ಮಾಡಿರುವುದು. Not a single pie is released for the maintenance of canals. ಹೋಗಲಿ ಈ ಸಾರಿ NREG ದುಡ್ಡು ಉಪಯೋಗಿಸಿ ಮಾಡಿ. ಅದರಲ್ಲಿ ಕೆಲವು ಎತ್ತಿದರು, ಕೆಲವರು ತೆಗೆದು ಹಾಕಿದರು, jungle remove ಎಂದು ಬರೆದುಕೊಂಡು ಬಿಟ್ಟಿರುತ್ತಾರೆ. ಅದನ್ನು ತೆಗೆದಿದ್ದಾರೋ ಇಲ್ಲವೋ ಅದು ಏನು ಕತೆಯೋ ಅದು ಯಾರಿಗೂ ಗೊತ್ತಾಗುವುದಿಲ್ಲ. ಇದ್ದಕ್ಕಿದ್ದ ಹಾಗೆ ನೀರು ಬಿಟ್ಟುಬಿಡುತ್ತಾರೆ. ಒಂದು ವಾರ ನೀರು ಬಿಡುವುದಕ್ಕೆ ಶುರು ಮಾಡುತ್ತಾರೆ. ಒಂದು ವಾರ ನೀರು ಬಿಡುವುದು ಶುರು ಮಾಡಿ ಅದೆಷ್ಟು ಮಣ್ಣು ಡಿಸಿಲ್ಟ್ ಮಾಡಿದರೋ, ಎಷ್ಟು ಜಂಗಲ್ ತೆಗೆದು ಹಾಕಿದರೋ ಯಾರಿಗೂ ಗೊತ್ತಿರುವುದಿಲ್ಲ, ಲೆಕ್ಕ ಮಾತ್ರ ಬರೆದಿರುತ್ತಾರೆ. This is what going on. ನನ್ನ ಸಲಹೆ ಏನೆಂದರೆ, ಇಷ್ಟು ಕೆರೆಗಳನ್ನು ದುರಸ್ತಿ ಮಾಡುವ ಕೆಲಸವಾಗಬೇಕು. ಇದಕ್ಕೆ ರಾಜ್ಯ ಸರ್ಕಾರ ಹಣ ಖರ್ಚು ಮಾಡಿ. ಕೃಷಿ ಅಭಿವೃದ್ಧಿಯಾಗಬೇಕು ಎನ್ನುವುದಾದರೆ, ಕೃಷಿಯ ಬಗ್ಗೆ ಕಾಳಜಿ ಇರುವುದಾದರೆ, take up this work as 'a apriority program. M.Iನಲ್ಲಿ ದುಡ್ಡು ಇಲ್ಲ. ಇಲ್ಲಿ ಕಾರಜೋಳ್‌ರವರು ಇಲ್ಲ. ನಾನು ಕಾರ್‌ಜೋಳ್‌ರವರಿಗೆ, ಏನ್ರೀ ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ದುಡ್ಡು ಇಟ್ಟು ಕೊಂಡಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು, 53 ಕೋಟಿ ಇದೆ, ನಮಗೆ on going ಕೆಲಸ ಬಿಟ್ಟು, pending bills 125 ಕೋಟಿ ಇದೆ, ಅವರಿಗೆ ಕೊಟ್ಟು ಬಿಟ್ಟರೆ ಏನೂ ಉಳಿದುಕೊಳ್ಳುವುದಿಲ್ಲ, ಹೀಗಾಗಿ ಹೊಸ ಕೆಲಸ ಏನೂ ಇಲ್ಲವೆಂದು ಅವರು ಪಾಪ ಸತ್ಯ ಹೇಳಿಬಿಟ್ಟರು. ಎಲ್ಲಿ ಕ್ಯಾಚ್‌ಮೆಂಟ್ ಏರಿಯಾ ಇದೆ, ಔಟ್‌ಲೆಟ್ಸ್‌ಗಳೇನಿವೆ, ಕೆರೆ ಏನು ಹೂಳು ತುಂಬಿದೆ, ಯಾರು ಒತ್ತುವರಿ ಮಾಡಿದ್ದಾರೆ, ಇದಕ್ಕೆ ಹೆಚ್ಚು ಕಾಳಜಿಯನ್ನು ಕೊಡಬೇಕು ಮಾನ್ಯ ಕರುಣಾಕರರೆಡ್ಡಿಯವರೆ. ಇದಕ್ಕೆ ಹೆಚ್ಚು ಹಣ ಕೊಡಬೇಕು. ಬರಗಾಲ ಬಂತು ಎಂದರೆ ನೀವು ಏನು ಮಾಡುತ್ತಿದ್ದೀರಿ ಎಂದರೆ, ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರ್‍ಯಾಂಡಮ್ ಕೊಡುತ್ತೀರಿ. ಎಲ್ಲರೂ ಕೊಟ್ಟಿದ್ದರೆ ನೀವು ಕೊಡುತ್ತೀರಿ. ಕೊಟ್ಟು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೀರಿ. ಈಗ ಅತಿವೃಷ್ಟಿಯಾಯಿತು, ಅತಿವೃಷ್ಟಿಯಲ್ಲಿ ಬಹಳಷ್ಟು ನಷ್ಟವಾಯಿತು. 180 ಜನ ಸತ್ತರು, 1200 ಜಾನುವಾರುಗಳು ಸತ್ತು ಹೋದವು, 11 ಸಾವಿರ ಮನೆಗಳು ಬಿದ್ದು ಹೋದವು. 1 ಲಕ್ಷದ 35 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿರುವಂಥದ್ದು ಎಲ್ಲಾ

ಕೊಚ್ಚಿಕೊಂಡು ಹೋಯಿತು. ಉಡುಪಿ, ಮಂಗಳೂರು, ಶಿವಮೊಗ್ಗ, ಹಾಸನ, ಉತ್ತರ ಕನ್ನಡ ಜಿಲ್ಲೆ ಹೀಗೆ 7 ಜಿಲ್ಲೆಗಳಲ್ಲಿ ಕೊಚ್ಚಿಕೊಂಡು ಹೋಯಿತು. 7 ಸಾವಿರ ಕಿ.ಮಿ.ರಸ್ತೆಗಳು ಹಾಳಾಯಿತು. ಇವೆಲ್ಲ ಸರ್ಕಾರ ಕೊಟ್ಟಿರುವ ಅಂಕಿಅಂಶಗಳು. ಸುಮಾರು 400 ಕೆರೆಗಳು ನಾಶವಾದವು. Because of this ಅತಿವೃಷ್ಟಿಯಿಂದ. ಇದು ಜುಲೈನಲ್ಲಿ ಆಯಿತು. ನಂತರ ನಾವು ಹೇಗೆ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೇವೆಂದರೆ, ಒಳನಾಡಿನಲ್ಲಿ ಜುಲೈ 1 ರಿಂದ ಆಗಸ್ಟ್ 15ನೇ ತಾರೀಖಿನವರೆಗೆ ಮಳೆಯಿಲ್ಲ. I am correct ರವೀಂದ್ರನಾಥ್‌ರವರೆ? ಮೇ ಮೊದಲ ಭಾಗದಲ್ಲಿ ಜೂನ್ ಕೊನೆಯಲ್ಲಿ ಮಳೆ ಬಿತ್ತು. ಆಗ ಎಲ್ಲರೂ ಬಿತ್ತನೆ ಮಾಡಿದರು. ಹಾವೇರಿಯಲ್ಲಿ, ದಾವಣಗೇರಿಯಲ್ಲಿ ಗೊಬ್ಬರಕ್ಕಾಗಿ ಹೊಡೆದಾಡಿದರು. ಸಾಲ ಮಾಡಿ ಬೀಜ, ಗೊಬ್ಬರ ತೆಗೆದುಕೊಂಡು ಹೋಗಿ ಬಿತ್ತನೆ ಮಾಡಿದರು. ಬಿತ್ತನೆ ಮಾಡಿದ ಪ್ರದೇಶದಲ್ಲಿ 20 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹೊರಟು ಹೋಯಿತು. ಒಟ್ಟು ರಾಜ್ಯದಲ್ಲಿ ಮುಂಗಾರಿಗೆ 70 ಲಕ್ಷ ಹೆಕ್ಟೇರ್‌ನಲ್ಲಿ ನಾವು ಬಿತ್ತನೆ ಮಾಡಬೇಕಾಗಿತ್ತು. ಇದರಲ್ಲಿ 20 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿರುವುದು ಹೊರಟು ಹೋಯಿತು. ಸುಮಾರು 10 ರಿಂದ 12 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಮಾಡಿಲ್ಲ. ಇವತ್ತಿನ ದಿವಸ ರೈತರಿಗೆ ಮುಂಗಾರಿನಲ್ಲಿ 32 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಮಾನ್ಯ ಸಹಕಾರ ಇಲಾಖೆ ಸಚಿವರೆ, ಈ ರೀತಿಯಾದರೆ ರೈತರು ಸಾಲದ ಹಣವನ್ನು ಹೇಗೆ ಕಟ್ಟುತ್ತಾರೆ ಹೇಳಿ? ನೀವು ಸಲ ವಸೂಲ್ಮಾಡುವುದಕ್ಕೆ ಹೋದರೆ ಅವರು ಎಲ್ಲಿಂದ ಕಟ್ಟುತ್ತಾರೆ. ಹಣ ಕೊಡುವುದಕ್ಕೆ ಆಗುವುದಿಲ್ಲ. ಕಮರ್ಷಿಯಲ್ ಬ್ಯಾಂಕ್‌ಗಳಿಂದ ರೈತರಿಗೆ 3% ಬಡ್ಡಿ ದರದಲ್ಲಿ ಸಾಲವನ್ನು ಕೊಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತಿನವರೆಗೆ ಏತಕ್ಕಾಗಿ ಕೊಡಿಸುವುದಕ್ಕೆ ಆಗಿಲ್ಲವೆಂದರೆ 4% ಬಡ್ಡಿ ದರದಲ್ಲಿ ತೆಗೆದುಕೊಂಡಿರುವ ಸಾಲವನ್ನು ಕಟ್ಟುವುದಕ್ಕೆ ಆಗಿಲ್ಲ. ಮತ್ತೆ ಸಾಲ ಮನ್ನಾ ಮಾಡಿರುವುದರಲ್ಲಿ ನಬಾರ್ಡ್‌ಗೆ ಇನ್ನು ದುಡ್ಡನ್ನು ಪೂರ್ಣವಾಗಿ ಚುಕ್ತಮಾಡಿಲ್ಲ. ಇದೆಲ್ಲಾ ಮಾಡದೆ ಇದ್ದರೆ ರೈತರಿಗೆ ಮುಂಗಾರಿನಲ್ಲಿ ಸಾಲ ಸಿಗುವುದಿಲ್ಲ. ಎಲ್ಲಿ ಸಾಲ ಸಿಗದೆ ಇದ್ದಾಗ ಒಡವೆ ತೆಗೆದುಕೊಂಡು ಹೋಗಿ ಪಾನ್ ಬ್ರೋಕರ್ಸ್ ಹತ್ತಿರು ಗಿರವಿ ಇಟ್ಟು ಸಾಲ ತೆಗೆದುಕೊಳ್ಳುತ್ತಾರೆ. ಈ ಒಂದು ಕಾರಣದಿಂದ ಸಾಲಗಾರರಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕಳೆದ ವರ್ಷ 300 ಕ್ಕೂ ಹೆಚ್ಚು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವರ್ಷ ಮತ್ತೆ 50 ರಿಂದ 60 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಳ್ಳಿಗಾಡಿನ ಜನರು ಮರ್ಯಾದಸ್ಥರು.

ಇವತ್ತಿನ ದಿವಸ ಮೋಸ ಮಾಡುವವರು ಬೇರೆಯವರು. ಹಳ್ಳಿಯ ಜನರು ಯಾವತ್ತೂ ಮೋಸ ಮಾಡುವುದಿಲ್ಲ. ಅವರು ಮೋಸ ಮಾಡುವುದು ಬಹಳ ಕಡಿಮೆ. ಹಿಂದೆ ಯಾರಾದರೂ ಮನೆಗೆ ಬಂದು ಸಾಲ ಕೇಳಿದರೆ ಸಾಲ ಕೊಡುವುದಕ್ಕೆ ಆಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡಿರುವ ಅನೇಕ ನಿದರ್ಶನಗಳಿವೆ. ಅಷ್ಟರಮಟ್ಟಿಗೆ ಹಳ್ಳಿಯ ಜನರು ಮಾರ್ಯಾದಸ್ಥರು ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ತಪ್ಪು ನೀತಿಗಳಿಂದ ಇವತ್ತಿನದಿವಸ ಇದೆಲ್ಲಾ ಆಗುತ್ತಿದೆ. ಈಗಲಾದರೂ ಕೂಡ ನಾವು ಎಚ್ಚೆತ್ತುಕೊಳ್ಳದಿದ್ದರೆ ನಾವು ರೈತರನ್ನು ಹಳ್ಳಿಗಳಲ್ಲಿ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಹಳ್ಳಿಯಲ್ಲಿ ಇರಿ ಎಂದರೆ ಅವರು ಹಳ್ಳಿಯಲ್ಲಿ ಏತಕ್ಕೆ ಇರುತ್ತಾರೆ? ಈ ರೀತಿಯಾಗಿ ಮಳೆ ಹೋದರೆ ಏನು ಮಾಡುತ್ತಾರೆ. ಇವತ್ತಿನದಿವಸ ಸರಾಸರಿ ಘಂಟಜುಟಿಂ ಇರುವುದೇ 1.9 ಹೆಕ್ಟೇರ್. ಆದರೆ, ಇದು ಕೂಡ ಕಡಿಮೆಯಾಗಿದೆ. ಅಂದರೆ, ಈಗ 1.6 ಹೆಕ್ಟೇರ್‌ಗೆ ಬಂದಿದೆ. 2001ನೇ ಇಸವಿಯಲ್ಲಿ 1.9 ಹೆಕ್ಟೇರ್ ಇತ್ತು. It is further reduced to 1.5 or 1.6 hector. ಇಷ್ಟಕ್ಕೆ ನಮ್ಮ holding ಬಂದಿದೆ. ಒಬ್ಬ ಸಣ್ಣ ರೈತನಿಗೆ ಒಂದು ಸಾರಿ ಬೆಳೆ ಹೋದ ಮೇಲೆ ಆತನ ಗತಿ ಏನು? ಆತ ಹೇಗೆ ಬದುಕುತ್ತಾನೆ? ಆದ್ದರಿಂದ. ಈತನ ಬಗ್ಗೆ ಹೆಚ್ಚು ಕಳಕಳಿ ಬೇಕು. ಮತ್ತೆ ಈತನನ್ನು ಹೇಗೆ ಉಳಿಸಬೇಕೆಂಬುದು ಮತ್ತು ಈತನಿಗೆ ಆಹಾರವನ್ನು ಯಾವ ರೀತಿಯಾಗಿ ಕೊಡಬೇಕೆಂದು ಹಾಗೂ ಈತನನ್ನೂ ಯಾವ ರೀತಿಯಾಗಿ ಬದುಕಿಸಬೇಕೆಂಬುದರ ಬಗ್ಗೆ ಮತ್ತು ಈತನಿಗೆ ಕುಡಿಯುವ ನೀರನ್ನು ಹೇಗೆ ಕೊಡುವುದೆಂದು ಮತ್ತು ಈತನಿಗೆ ಯಾವ ರೀತಿಯಾಗಿ ಕೆಲಸ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ವ್ಯವಸಾಯ ಮಾಡುವವರಿಗೆಲ್ಲಾ ಗೊತ್ತಿರಬಹುದು. ನಾನೂ ಕೂಡ ವ್ಯವಸಾಯ ಕುಟುಂಬದ ರೈತನ ಮಗನಾಗಿದ್ದೇನೆ. ನಾನು ರೈತನ ಮಗನಾಗಿ ಎಲ್ಲವನ್ನು ನೋಡಿದ್ದೇನೆ. ಒಂದು ಕಾಲದಲ್ಲಿ 2 ಅಥವಾ 3 ಸಾವಿರ ರೂಪಾಯಿಗೆ ಒಂದು ಜೊತೆ ಒಳ್ಳೆಯ ಎತ್ತುಗಳು ಸಿಗುತ್ತಿದ್ದವು. ಆದರೆ, ಇವತ್ತಿನದಿವಸ ಏಳೆಂಟು ಕ್ವಿಂಟಲ್ ತುಂಬಿರುವ ಗಾಡಿಯನ್ನು ಎಳೆಯುವ ಎತ್ತುಗಳ ಜೋಡಿಗೆ ಒಂದು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಒಂದು ಲಕ್ಷ ರೂಪಾಯಿ ಎತ್ತುಗಳೇನಾದರು ಹೊರಟು ಹೋದರೆ ಆತ ಮತ್ತೆ ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಒಂದು ಕಾರಣಕ್ಕಾಗಿಯೇ ರೈತರು ವ್ಯವಸಾಯವನ್ನು ಬಿಟ್ಟು ಬಿಡುತ್ತಾರೆ. ಈ ರೀತಿಯಾದರೆ ವ್ಯವಸಾಯ ಮಾಡುವುದಕ್ಕೆ ಮತ್ತೆ ಎತ್ತುಗಳು ಎಲ್ಲಿಂದ ಬರುತ್ತದೆ.

These are the hard facts. ಹಳ್ಳಿಗಳಲ್ಲಿ ಇರತಕ್ಕಂಥದ್ದು hard facts. ಇದರ ಜೊತೆಗೆ ಈಗ ಬರಗಾಲ ಬಂತು. ನಿಮ್ಮ ಕಂದಾಯ ಇಲಾಖೆಯವರು ಈಗ ಏನು ಮಾಡುತ್ತಾರೆಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಹೇಳುವುದನ್ನು ನೀವು ಬೇಕಾದರೆ ನಿಮ್ಮ ಇಲಾಖೆಯಲ್ಲಿ ಪರಿಶೀಲನೆ ಮಾಡಿ. ಮಳೆ ಎಷ್ಟು ಬೀಳುತ್ತದೆಂಬುದನ್ನು ನೋಡುವುದಕ್ಕೆ rain gauge ಇಟ್ಟುಕೊಂಡಿರುತ್ತಾರೆ. ಆದರೆ, ಇವುಗಳನ್ನು 300 ಕಿ.ಮೀ.ಗಿಂತ ದೂರಕ್ಕೊಂದು rain gauge ಗಳನ್ನು ಇಟ್ಟಿದ್ದಾರೆ. ಇವುಗಳಲ್ಲಿ ಕೆಲವು ಕಿತ್ತು ಹೋಗಿರುವುದರಿಂದ ಕೆಲಸವೇ ಮಾಡುವುದಿಲ್ಲ. ಕರಾರುವಕ್ಕಾಗಿ ಎಷ್ಟು ಮಳೆ ಬಿದ್ದಿದೆ ಎಷ್ಟು ಮಳೆ ಬಿದ್ದಿಲ್ಲ ಎಂಬುದರ ಬಗ್ಗೆ ತಪ್ಪು ಲೆಕ್ಕಚಾರವೇ ಜಾಸ್ತಿ ಇರುತ್ತದೆ. The method you have adopted and the telemetric rain gauges are distributed are not adequate and most of them are not functioning. Then how do you asses? ಎಷ್ಟು ಕರೆಕ್ಟ್ ಆಗಿ ಮಳೆ ಬಿದ್ದಿದೆ ಎಂದು ಮತ್ತು ರೈತರಿಗೆ ಎಷ್ಟು ನಷ್ಟವಾಗಿದೆ ಎಂದು ಹೇಗೆ ಅಸೆಸ್ ಮಾಡುವುದಕ್ಕೆ ಆಗುತ್ತದೆ? That is why I suggest, the other day also I suggested, even today I am suggesting. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಒಂದು Telemetric Rain Gauge ಇಡಬೇಕಾಗುತ್ತದೆ. ಕೇಂದ್ರ ಸರ್ಕಾರ 2007ನೇ ಇಸವಿಯಿಂದ Weather Based Insurance Scheme ಅನ್ನು ಜಾರಿಗೆ ತಂದಿದೆ. ಇದರ ಪ್ರಕಾರ ನಷ್ಟವಾಗಿರುವುದಕ್ಕೆ ರೈತರಿಗೆ ಸಹಾಯ ಸಿಗಬೇಕಾದರೆ ಕರೆಕ್ಟ್ ಆಗಿ assessment ಆಗಬೇಕಾಗುತ್ತದೆ. ಹಾಗೆಯೇ ಬೆಳೆ ವಿಮೆ ಸರಿಯಾಗಿ ಆಗಬೇಕಾಗುತ್ತದೆ. ಆದರೆ, ನೀವು Telemetric Rain Gauges ಗಳನ್ನು 300 ಕಿ.ಮೀ. ದೂರಕ್ಕೊಂದು ಇಟ್ಟಿರುವುದರಿಂದ ಬೆಳೆ ಎಷ್ಟು ಹಾಳಾಯಿತ್ತೆಂದು ಸರಿಯಾಗಿ ಅಸೆಸ್ ಮಾಡುವುದಕ್ಕೆ ಆಗುವುದಿಲ್ಲ. ನಿಮಗೊಂದು ಉದಾಹರಣೆ ಹೇಳುತ್ತೇನೆ. ಬೇಕಾದರೆ ನೀವು ಇದನ್ನು ಪರಿಶೀಲನೆ ಮಾಡಿ ನೋಡಿ. ಮಾನ್ಯ ಕಂದಾಯ ಮಂತ್ರಿಯವರೆ, ನಿಮ್ಮ ಹತ್ತಿರ ಇರುವ ಮಳೆ ಬಿತ್ತನೆ ಲೆಕ್ಕಾಚಾರದ ಬಗ್ಗೆ ಹೇಳುವುದಾದರೆ, ನೆಲಮಂಗಲದಲ್ಲಿ ಇನ್ನು ಬಿತ್ತನೆಯೇ ಮಾಡಿಲ್ಲ. ಅಲ್ಲಿ rain fall data ಏನು ಹೇಳುತ್ತದೆಂದರೆ, ಅಲ್ಲಿ 35 ರಿಂದ 45 ರವರೆಗೆ ಎಕ್ಸಸ್ ಮಳೆಯಾಗಿದೆ ಎಂದು ರೆಕಾರ್ಡ್‌ನಲ್ಲಿದೆ. ಈ ರೀತಿಯಾದರೆ, ಬೆಳೆ ವಿಮೆ ಪ್ರಕಾರ ರೈತರಿಗೆ ಒಂದು ರೂಪಾಯಿ ಸಿಗುತ್ತದೆಯೇ? Not a single pie farmers are getting, who were affected by drought. ಈಗ ಮಳೆ ಕೂಡ ಇಲ್ಲ.

ಆದ್ದರಿಂದ, This to be set right immediately. ಎಷ್ಟೇ ದುಡ್ಡು ಖರ್ಚು ಆಗಲಿ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ 5680 ಗ್ರಾಮಪಂಚಾಯಿತಿಗಳಿಗೆ ಒಂದೊಂದು Telemetric Rain Gauge ಅನ್ನು ಇಡಬೇಕು. ರೈತರಿಗೆ ಸಹಾಯ ಮಾಡಬೇಕೆನ್ನುವುದಾದರೆ ಇದಕ್ಕಾಗಿ ಎಷ್ಟಾದರು ಖರ್ಚಾಗಲಿ ಪರವಾಗಿಲ್ಲ. ಒಂದೊಂದಕ್ಕೆ ಸುಮಾರು 25 ಸಾವಿರ ರೂಪಾಯಿ ಆಗಬಹುದು. ಆದ್ದರಿಂದ, ಇದನ್ನು ಮೊದಲು ಮಾಡಿ. ಆದರೆ, ಏತಕ್ಕಾಗಿ ಹಿಂದೇಟು ಮಾಡುತ್ತಿದ್ದೀರಿ. ನಾನು ನೆಲಮಂಗಲ ತಾಲ್ಲೂಕು ಬಗ್ಗೆ ಹೇಳಿದ್ದೇನಷ್ಟೆ. ನಾನು ಹೇಳುವ ಅನೇಕ ತಾಲ್ಲೂಕುಗಳ ರೆಕಾರ್ಡ್‌ಗಳನ್ನು ತಾವು ಪರಿಶೀಲನೆ ಮಾಡಿ. ಕೋಲಾರ ಜಿಲ್ಲೆಯ ಹೋಬಳಿಯಲ್ಲಿ ವಾಸ್ತವಿಕವಾಗಿ ವಾಡಿಕೆ ಮಳೆಗಿಂತ 50% ನಷ್ಟು ಮಳೆ ಅಲ್ಲಿ ಕಡಿಮೆಯಾಗಿದೆ. ಆದರೆ, ವಾಡಿಕೆ ಮಳೆಗಿಂತ 9% ನಷ್ಟು ಹೆಚ್ಚಿಗೆ ಮಳೆ ಬಿದ್ದಿದೆ ಎಂದು ನಿಮ್ಮ rain gauge ತೋರಿಸಿದೆ. 50% ಗಿಂತ ಕಡಿಮೆ ಮಳೆಯಾಗಿರುವಂಥ ಕೋಲಾರ ಹೋಬಳಿಯಲ್ಲಿ 9% ಜಾಸ್ತಿ ಮಳೆ ಬಿದ್ದಿದೆ ಎಂಬುದು ನಿಮ್ಮ rain gauge ನಲ್ಲಿ ತೋರಿಸಿದೆ. ಕೋಲಾರ ಹೋಬಳಿಗೆ ತಾವು ಹೋಗಿ ಅಲ್ಲಿ ಮಳೆ ಮತ್ತು ಬಿತ್ತನೆಯಾಗಿದೆಯೇ ಎಂಬುದನ್ನು ನೋಡಿಕೊಂಡು ಬನ್ನಿ. ಈ ಹೋಬಳಿಯನ್ನು ನೀವು ಡಿಕ್ಲೇರ್ಡ್ ಮಾಡದೆ ಹೋದರೆ, how can they get the reliefs for drought? ಆದ್ದರಿಂದ, ವಾಸ್ತವಿಕವಾದ ವಿಚಾರವನ್ನು ಪತ್ತೆಹಚ್ಚಿ ಅವುಗಳಿಗೆ ಪರಿಹಾರ ಕೊಡುವಂಥ ಕೆಲಸ ಸರ್ಕಾರದಿಂದ ಆಗಬೇಕೆಂಬುದು ನನ್ನ ಆಗ್ರಹ. ಇದೇ ರೀತಿಯಾಗಿ ಇನ್ನು ಅನೇಕ ಉದಾಹರಣೆಗಳಿವೆ. ಮಾಲೂರು ತಾಲ್ಲೂಕು ಹೋಬಳಿಗಳಲ್ಲಿ 50 ಇದ್ದರೆ 86% deficit ಇದೆ ಎಂದು ಇದರಲ್ಲಿದೆ. ಇದು ನಿಜವಾಗಿ ಇರತಕ್ಕಂಥದ್ದು. ಆದರೆ, ಅಲ್ಲಿ excess rain fall ಎಂದು ರಿಪೋರ್ಟ್‌ನಲ್ಲಿದೆ. ನಮ್ಮ ನಂಜನಗೂಡು ತಾಲ್ಲೂಕಿನ ದೊಡ್ಡಕವಲಂದೆ ಹೋಬಳಿಯಲ್ಲಿ ಮಳೆ ಬಿದ್ದಿಲ್ಲ. ಅಲ್ಲಿ ಬೆಳೆಯೆಲ್ಲ ಹಾಳಾಗಿದೆ. But Nanjangudu Taluk is not declared as drought affected taluk. ಮಾನ್ಯ ಮಹದೇವಪ್ರಸಾದ್‌ರವರೆ ಏಕೆ ಈ ರೀತಿಯಾಗಿತ್ತಿದೆ ಎಂದರೆ ಇವರು Telemetric Rain Gauge ಅನ್ನು 300 Sq. k.m. ಒಂದೊಂದು ಇಟ್ಟಿದ್ದಾರೆ. ಇದರಲ್ಲಿ ಕೆಲವು ಕೆಟ್ಟು ಹೋಗಿರುವುದರಿಂದ ಕೆಲಸ ಮಾಡುತ್ತಿಲ್ಲ. ಯಾವ ತಾಲ್ಲೂಕು ಮತ್ತು ಹೋಬಳಿಯಲ್ಲಿ ನಿಜವಾಗಿ ತೊಂದರೆಯಾಗಿದೆ ಎಂಬ ವಾಸ್ತವಿಕ ವಿಚಾರವನ್ನು ನಾವು ಪತ್ತೆ ಮಾಡುವುದಕ್ಕೆ ಆಗುತ್ತಿಲ್ಲ. ಈ ಒಂದು ಕಾರಣದಿಂದ ಇವತ್ತಿನದಿವಸ ಬರ ಪರಿಹಾರ ಕಾರ್ಯಕ್ರಮಗಳು

ಆದರೂ ಕೂಡ ಅನೇಕ ಜನ ರೈತರಿಗೆ ಒಂದು ರೂಪಾಯಿ ಸಿಗುತ್ತಿಲ್ಲ. ಕೇಂದ್ರ ಸರ್ಕಾರದವರು 2007ರಿಂದ ಮಾಡಿದ್ದಾರೆ. ಅವರ ಕೈಗೆ 1.00 ರೂಪಾಯಿಯು ಅವರ ಕೈಗೆ ಸಿಗುವುದಿಲ್ಲ. ಈ ತರಹ ಅನೇಕ ತಾಲ್ಲೂಕುಗಳ ಬಗ್ಗೆಯೂ ಹೇಳಬಹುದು. ಕಸಬಾ ಹೋಬಳಿ ಮುಳಬಾಗಿಲು, ಪಾವಗಡ, ಶ್ರೀನಿವಾಸಪುರ, ಭಾಗೇಪಲ್ಲಿ, ಕರುಣಾಕರ ರೆಡ್ಡಿಯವರ ತಾಲ್ಲೂಕು ಬಳ್ಳಾರಿ, ಕಸಬಾ ಹೋಬಳಿಯಲ್ಲಿ ಏಕೆಂದರೆ ನಿಮ್ಮ report ಏನಿದೆ ಎಂದರೆ, it is more than normal ಎಂದು ಬಂದಿದೆ. But the truth is, otherwise. ಅಲ್ಲಿ ಮಳೆಯೂ ಆಗಿಲ್ಲ. ಅಲ್ಲಿ ಯಾರಿಗೂ ಕೂಡ Weather Based Crop Insurance ಸಿಕ್ಕುವುದಿಲ್ಲ. ಏಕೆಂದರೆ, more than ವಾಡಿಕೆ ಮಳೆಗಿಂತ ಜಾಸ್ತಿಯಾಗಿಬಿಟ್ಟಿದೆ. Normal rainಗಿಂತ ಜಾಸ್ತಿಯಾಗಿ ಬಿಟ್ಟಿದೆ. ಹಾಗೆಯೇ ಕೂಡ್ಲಿಗಿಯಲ್ಲಿ, ಮಾನ್ವಿಯಲ್ಲಿ, ಕುಂದಗೋಳದಲ್ಲಿ ಇದು ಒಂದು ಕಡೆಯಾಯಿತು. ಇದು NREGA ದುಡ್ಡು ನೀವು ಅದನ್ನು ಬಿಟ್ಟು ಬೇರೆ ಯಾವುದೇ ಒಂದೂ ರೂಪಾಯಿಯನ್ನು ಖರ್ಚು ಮಾಡಿರುವುದಿಲ್ಲ. ನಿಮ್ಮ ಸರ್ಕಾರದಿಂದ except ನಿಮ್ಮ ಪಾಲನ್ನು ಮಾಡಿರುವುದನ್ನು ಬಿಟ್ಟರೆ, ಕಳೆದ ವರ್ಷ 321 ಕೋಟಿ ರೂಪಾಯಿಗಳನ್ನು ಬರಗಾಲ ಇಟ್ಟಿರುವುದು. ನಿಮ್ಮ 34 ಕೋಟಿ ರೂಪಾಯಿಗಳು CRF 25% ಬಿಟ್ಟರೆ, ಅದನ್ನು ಬಿಟ್ಟು ನೀವು ಒಂದು ರೂಪಾಯಿಯನ್ನು ಕಳೆದ ವರ್ಷ ನಿಮ್ಮ ಸರ್ಕಾರದಿಂದ ಖರ್ಚು ಮಾಡಿರುವುದಿಲ್ಲ, not a single pie, ನೀವು ಕೊಟ್ಟಿರುವಂತಹ ಅಂಕಿ ಅಂಶಗಳ ಪ್ರಕಾರವೇ ಹೇಳುತ್ತಿದ್ದೇನೆ. 321 ಕೋಟಿ ರೂಪಾಯಿಯನ್ನು ಕೂಡ 131 ಕೋಟಿ ರೂಪಾಯಿಗಳು ಕಳೆದ ವರ್ಷದ್ದು ಡಿಸಿಯವರ ಕಿಆ ಅಕೌಂಟ್‌ನಲ್ಲಿದೆ. ನಿಮ್ಮಿಂದ ಒಂದು ರೂಪಾಯಿಯ ಖರ್ಚು ಆಗಿರುವುದಿಲ್ಲ. ಕಳದೆ ವರ್ಷದ್ದು 131 ಕೋಟಿ ರೂಪಾಯಿಗಳು ಈ ವರ್ಷ ಬಂದಿರುವಂತಹ CRF, NCCF, ಎಲ್ಲವೂ ಸೇರಿ ಇವತ್ತು 284 ಕೋಟಿ ರೂಪಾಯಿಗಳು ನಿಮ್ಮ ಹತ್ತಿರ ಇರಬೇಕು. ನೀವು ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣ 115 ಕೋಟಿ ರೂಪಾಯಿಗಳು. ನೀವು ಒಂದು ಸಾರಿ 52 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಆಮೇಲೆ ಇನ್ನೊಂದು ಸಾರಿ Fodder Mini Kitsಗೆಂದು 7 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. Diesel Subsidy ಎಂದು 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. 45 ಕೋಟಿ ರೂಪಾಯಿಗಳನ್ನು Drought Reliefಗೆ ಕೊಟ್ಟಿದ್ದೀರಿ. ಒಟ್ಟು 115 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು. Total 52 crores,

45 crores, 7 crores, 3 crores, 115 crores, out of 284 crores. Then why are blaming Central Government when such being the case? ನೀವು ಒಂದು ರೂಪಾಯಿಯನ್ನು ನಿಮ್ಮ ಖಜಾನೆಯಿಂದ ಕೊಡದೆಯೇ ಕೇಂದ್ರಸರ್ಕಾರ ಕೊಟ್ಟಿಲ್ಲ, ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದರೆ, ಏತಕ್ಕಾಗಿ ಹೇಳುತ್ತೀರಿ. ಕಳೆದ ವರ್ಷ 321 ಕೋಟಿ ರೂಪಾಯಿಗಳಲ್ಲಿ why you could not able to spent entire money? 321 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಖರ್ಚು ಮಾಡಲು ಆಗಲಿಲ್ಲ. It is a fact. Facts cannot be denied. ಈ ತರಹ ಇಷ್ಟು ದುಡ್ಡನ್ನು ಇವರು ಬಿಡುಗಡೆ ಮಾಡಿ, 321 ಕೋಟಿ ರೂಪಾಯಿಗಳಲ್ಲಿ ಅಷ್ಟು ಹಣವು ಉಳಿದುಕೊಂಡಿತಾ? ಈ ವರ್ಷ ಇಲ್ಲಿಯವರೆಗೆ 284 ಕೋಟಿ ರೂಪಾಯಿಗಳನ್ನು ಈಗಾಗಲೇ ಇವರಮ 17 ಕೋಟಿ ರೂಪಾಯಿಗಳು ಸೇರಿ, ಈಗಾಗಲೇ 284 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿರುವುದು, ಕಳೆದ ವರ್ಷ ಉಳಿದುಕೊಂಡಿರುವಂತಹ ಹಣ, ಇವರ 17 ಕೋಟಿ ರೂಪಾಯಿಗಳು ಸೇರಿ 284 ಕೋಟಿ ರೂಪಾಯಿಗಳು ಇದೆ. ಕೇಂದ್ರ ಸರ್ಕಾರವು ನಮ್ಮ ರಾಜ್ಯ ಸರ್ಕಾರಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ. ಇವರು Memorandum ಕೊಡುವುದು ಲೇಟ್, ನೀವು 317 ಕೋಟಿ ರೂಪಾಯಿಗಳಿಗೆ ಜುಲೈನಲ್ಲಿ Memorandum ಕೊಟ್ಟಿದ್ದೀರಿ. ಆಗಸ್ಟ್‌ನಲ್ಲಿ 394 ಕೋಟಿ ರೂಪಾಯಿಗಳಿಗೆ ಕೊಟ್ಟಿದ್ದೀರಿ. ಅವರು ಬಂದು ಜುಲೈ ತಿಂಗಳಲ್ಲಿ ಬಂದು ನೋಡಿಕೊಂಡು ಹೋಗಿದ್ದಾರೆ. ನೀವು ಒತ್ತಾಯವನ್ನು ಮಾಡಿ ಹಣವನ್ನು ತೆಗೆದುಕೊಳ್ಳಬೇಕು. ಆಮೇಲೆ NREGAದಲ್ಲಿ ಹಣ ಕೆಲವು ಕಡೆಯಲ್ಲಿ ಅದನ್ನು ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, it is purely for Rural Development ಅದನ್ನು ಹಳ್ಳಿಗಾಡಿಗೆ ಮಾತ್ರ ಖರ್ಚು ಮಾಡಬೇಕು. ನಮ್ಮಲ್ಲಿ ಹೇಗಿದೆ ಎಂದರೆ, ಕೆಲವು ಹಳ್ಳಿಗಳು, ಕೆಲವು ಪಟ್ಟಣಗಳು so called towns, Yelburga ಅದು ಹಳ್ಳಿಯೂ ಅಲ್ಲ ಪಟ್ಟಣವೂ ಸಹ ಅಲ್ಲ. ಅಲ್ಲಿರುವವರೆಲ್ಲರೂ ವ್ಯವಸಾಯವನ್ನು ಮಾಡುವವರು ಆಗಿದ್ದಾರೆ. ಅವರಿಗೆ NREGAದಲ್ಲಿ ಒಂದು ರೂಪಾಯಿ ಖರ್ಚು ಮಾಡುವುದಕ್ಕೆ ಬರುತ್ತದೆಯೇ? Why cannot you spent from your Government, from your treasury to save the farmers of Yleburga, who are living in Yelburga town. ಇದನ್ನು ಏಕೆ ಮಾಡಿಲ್ಲ? That is my allegation. ಯಲ್ಬುರ್ಗಾಕ್ಕೆ ಒಂದು ರೂಪಾಯಿಯನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಹಾಗೆಯೇ ಬೀದರ್

ಜಿಲ್ಲೆಯಲ್ಲಿರತಕ್ಕಂತಹ ಔರಾದ್ ಇರಬಹುದು, ಹುಮ್ನಾಬಾದ್ ಇರಬಹುದು, ಭಾಲ್ಕಿ ಇರಬಹುದು, ಅವು ಹಳ್ಳಿಗಳು ಅಲ್ಲ ಪಟ್ಟಣವು ಸಹ ಅಲ್ಲ and the people who are living in so called towns and villages are villagers and agriculturists. ನೀವು ದುಡ್ಡು ಕೊಟ್ಟಿರುವುದಿಲ್ಲ. NREGAದಲ್ಲಿ ಒಂದು ರೂಪಾಯಿ ಹಣವನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. How can you save those farmers? What are your programmes? ಅವರಿಗೆ ಏನು ಮಾಡಿದ್ದೀರಿ? ಈಗ ಟೈಮ್ ಹೋಗುತ್ತಿದೆ ನನಗೆ ಗೊತ್ತಾಗಲಿಲ್ಲ. ಅದಕ್ಕಾಗಿ ನಾನು ಸಲಹೆಗಳನ್ನು ಕೊಟ್ಟು ಬಿಡುತ್ತೇನೆ. ಈ ತರಹ ಬೇಕಾದಷ್ಟು ಇವೆ. ನೀವು ಇಲ್ಲಿಗೆ ಹೋಗಿ ಬನ್ನಿ. ಹುಮ್ನಾಬಾದ್‌ಗೆ ಹೋಗಿ ಬರಲಿ, ಅದನ್ನು ನೀವು ಸಹ ನೋಡಿದ್ದೀರಿ, ಔರಾದ್‌ಗೆ ಹೋಗಿ ನೋಡಿಕೊಂಡು ಬರಲಿ. ಭಾಲ್ಕಿಗೂ ಸಹ ಹೋಗಿ ನೋಡಿಕೊಂಡು ಬರಲಿ, ನಾವು ಹೋಗಿ ನೋಡಿಕೊಳ್ಳಬೇಕು. The are niehter villages nor towns, but majority of the people who are living there are all agriculturists. ಅನೇಕ ತಾಲ್ಲೂಕುಗಳಲ್ಲಿ ಹೀಗೆ ಇದೆ. ಪಾಪ ಅವರಿಗೆ ಏನು ಮಾಡಬೇಕು? ಅವರಿಗೆ ಸಿಗುವುದಿಲ್ಲ. ಬಹಳ ಕಷ್ಟವಾಗುತ್ತದೆ, ಇಂತಹವರನ್ನು cover ಮಾಡುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಅದನ್ನು ನಿಮ್ಮ ಹಣದಿಂದ ಖರ್ಚು ಮಾಡಬೇಕು. ನೀವು ಒಂದು ರೂಪಾಯಿಯನ್ನು ಖರ್ಚು ಮಾಡದೆಯೇ, ಇಲ್ಲಾ ನಾವು ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಅಲ್ಲಿಗೆ Memorandumನ್ನು ಕಳುಹಿಸಿದ್ದೇವೆ. ಅವರು ಇನ್ನು ಕೊಟ್ಟಿರುವುದಿಲ್ಲ. Central Team ಬಂದು ಹೋಗಿದೆ ಎಂದು ಹೇಳಿದರೆ ಏನು ಪ್ರಯೋಜನವಾಗುತ್ತದೆ ಇದು ಒಂದು ಕಡೆ ಆಯಿತು. ಆನೆಗಳು, ಹಂದಿಗಳು ಕಾಡಿನಿಂದ ಬಂದು ನುಗ್ಗುತ್ತವೆ, ರೈತರ ಬೆಳೆಗಳನ್ನು ಹಾಳು ಮಾಡಿಬಿಡುತ್ತವೆ. ಹಂದಿಗಳ ಕಾಟವು ಬಹಳ ಜಾಸ್ತಿಯಾಗಿದೆ. ನನ್ನ ಪ್ರಕಾರ 1952 Wild Life Protection Act, 1952 ಪ್ರಕಾರ ಹಂದಿಯನ್ನು ಹೊಡೆಯಬಹುದು ಎಂದು ಇದೆ. ಹಂದಿಯನ್ನು ಶೂಟ್ ಮಾಡುವುದಕ್ಕೆ ಪವರ್ ಇದೆ. ರೈತರಿಗೆ ಶೂಟ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಇದಕ್ಕೆ ನೀವು 200 ರೂಪಾಯಿಯ ಪರಿಹಾರವನ್ನು ಕೊಡುತ್ತೀರಿ, ಇಷ್ಟು ಹಣ ಕೊಟ್ಟರೆ ರೈತನು ಏನು ಮಾಡಬೇಕು? ಆನೆಗಳು ನುಗ್ಗಿ ಬಿಡುತ್ತವೆ, ಬೆಳೆಗಳನ್ನು ತುಳಿದುಹಾಕಿಬಿಡುತ್ತದೆ, ಜನರನ್ನು ಸಾಯಿಸಿಬಿಡುತ್ತದೆ. ಈ ಬಗ್ಗೆ ನಾನು ಒಂದು reportನ್ನು ಕೊಟ್ಟಿದ್ದೇನೆ. ಈ ಬಗ್ಗೆ Public Accounts Committee ಯಿಂದ

ಒಂದು report ಬಂದಿದೆ. ಏನು ಮಾಡಬೇಕೆಂಬುದರ ಬಗ್ಗೆ ಒಂದು ಡಿಜಿರಿಂಡಿಣ ಕೊಟ್ಟಿದ್ದೇನೆ. ನಾನು PAC Committee ಯಲ್ಲಿ ಶಿಫಾರಸ್ಸು ಮಾಡಿದ್ದೇನೆ.

ಒಬ್ಬ ಮಾನ್ಯ ಸದಸ್ಯರು: ಕರಡಿ ಕಣ್ಣು ಕಿತ್ತು ಹಾಕಿದೆ ನನ್ನ ಕ್ಷೇತ್ರದಲ್ಲಿ ಬರೀ 8,000 ರೂಪಾಯಿ ಪರಿಹಾರವನ್ನು ಕೊಟ್ಟಿದ್ದಾರೆ. ಕೆಳಗಡೆಗೆ ಕಣ್ಣುಗುಡ್ಡೆಯನ್ನು ಕಿತ್ತು ಇಟ್ಟಿದೆ.

ಶ್ರೀ ಸಿದ್ದರಾಮಯ್ಯ: ಕರಡಿಯು ಯಾರದೋ ಕಣ್ಣನ್ನು ಕಿತ್ತುಹಾಕಿಬಿಟ್ಟಿದೆಯಂತೆ. ಅವರಿಗೆ 8,000 ಪರಿಹಾರವನ್ನು ಕೊಟ್ಟಿದ್ದಾರಂತೆ, ಕಳೆದ ಸಾರಿಯೇ ಇದನ್ನು ನಾನು ಚೇಂಜ್ ಮಾಡಿ ಎಂದು ಹೇಳಿದ್ದೇನೆ. ಪರಿಹಾರ ಕೊಡುವುದು ಹಳೆಯದು ಇದೆ, ಇದನ್ನು ಚೇಂಜ್ ಮಾಡಿ, ನೀವು ಮಾಡಿದ್ದೀರೆಂದರೆ ಅದು ಉತ್ತರವಾಗುವುದಿಲ್ಲ. ನೀವು ಮಾಡಿಲ್ಲ, ನಾವು ಏಕೆ ಮಾಡಬೇಕು ಎಂದು ಬಹಳ ಹೇಳುವುದು ಸುಲಭ. ನಾವು ಮಾಡದೇ ಇದ್ದರೆ ನೀವು ಮಾಡಬಾರದು ಎಂದು ಇದೆಯೇ? ನಾವು ಮಾಡಲಿಲ್ಲ, ನೀವು. . . . .

ಶ್ರೀ ಜಿ. ಕರುಣಾಕರರೆಡ್ಡಿ: ನಾವು ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ನೀವು ಬಹಳ ಬುದ್ಧಿವಂತರಿದ್ದೀರಿ. ನಾನು ಏನು ಹೇಳುತ್ತೇನೆಂದು expect ಮಾಡುವುದು ಇದೆಯಲ್ಲಾ, you are very intelligent. ನಮಗೆ ಇವೆಲ್ಲವೂ ಹೊಳೆಯುವುದಿಲ್ಲ ನೋಡಿ. ನೀವು ಏನು ಹೇಳುತ್ತೀರೆಂದು ನಮಗೆ ಗೊತ್ತಾಗುವುದೇ ಇಲ್ಲ. ನೀವು ಏನಾದರೂ ಜೋತಿಷ್ಯವನ್ನು ಕೇಳಿಕೊಂಡು ಬಂದಿದ್ದೀರಾ ಹೇಗೆ?

ಶ್ರೀ ಜಿ. ಕರುಣಾಕರರೆಡ್ಡಿ: ಇಲ್ಲ.

ಶ್ರೀ ಸಿದ್ದರಾಮಯ್ಯ: ಇಲ್ಲವೇ, ನಿಂಬೆಹಣ್ಣಿನ ಬಗ್ಗೆ ನಮಗೆ ಗೊತ್ತಿಲ್ಲಪ್ಪಾ, ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನೀವು ಹೋಗಿಲ್ಲಾ ನೋಡಿಕೊಂಡು ಬನ್ನಿ.

ಅಧ್ಯಕ್ಷರು : ನೀವು ಹೇಳಿರುವ ಪ್ರಕಾರ 2.30 ಗಂಟೆಯಾಯಿತು. ನಿಮ್ಮ ಪ್ರಕಾರವೇ 2.30 ಗಂಟೆಯಾಯಿತು.

ಶ್ರೀ ಸಿದ್ದರಾಮಯ್ಯ: ಹಾಗಾದರೆ ನಾನು ಕುಳಿತುಕೊಂಡು ಬಿಡುತ್ತೇನೆ. 5 ನಿಮಿಷದಲ್ಲಿ I will conclude. I will not go beyond 2.35. O.K. ಇದು ಏನಾಗಿದೆ ಎಂದರೆ, ನಾನು ಅದಕ್ಕೆ ನಾನು jump ಮಾಡುತ್ತಿದ್ದೇನೆ. File Jumping ಎನ್ನುವುದು ಇದೆ. ಆ ತರಹ ನಾನು file jumping ಮಾಡುತ್ತಿದ್ದೇನೆ.

ಎಲ್ಲಾ important ವಿಚಾರಗಳನ್ನು ಮಾತ್ರ ಹೇಳುತ್ತಿದ್ದೇನೆ. ಬೇಕಾದರೆ ಇದರ ಬಗ್ಗೆ 4 ಗಂಟೆಯವರೆಗೆ ಮಾತನಾಡಲೇ, ನಾವೆಲ್ಲರೂ ಹಳ್ಳಿಯವರಲ್ಲಾ, ಬೆಳೆ ನಾಶವಾದವರಿಗೆ compansationನ್ನು ಹೆಚ್ಚಿಗೆ ಮಾಡಿ. ಆನೆಗಳು ಕಾಡಿನಿಂದ ಹೊರಗಡೆ ಬರದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು.

2.30 P.M.

ಆನೆಗಳು ಏಕೆ ಬರುತ್ತವೆ. ಕುಡಿಯುವುದಕ್ಕೆ ನೀರು ಇಲ್ಲವೆಂದು ಅವು ಬರುತ್ತವೆ. ಮೇವು ಇಲ್ಲವೆಂದು ಈ ಕಡೆಗೆ ಬರುತ್ತದೆ ಬೇಸಿಗೆಯಲ್ಲಿ ಮಳೆಯಿಲ್ಲದೆ ಇದ್ದಾಗ ಅವುಗಳಿಗೆ ಕುಡಿಯುವುದಕ್ಕೆ ನೀರಿಲ್ಲದೆಯೇ, ಅವುಗಳಿಗೆ ಮೇವು ಸಿಗದೆಯೇ ಹುಡುಕಿಕೊಂಡು ಹೊರಗಡೆ ಬರುತ್ತದೆ. ನಾವು trenches ಗಳನ್ನು ತೋಡಿಸಿದ್ದೆವು. ಅವುಗಳೆಲ್ಲವೂ ಮುಚ್ಚಿಹೋಗಿವೆ. ಅದನ್ನು maintain ಸಹ ಮಾಡಿರುವುದಿಲ್ಲ. No maintenance absolutely. ಅಲ್ಲಿ ಆಅಈ ರವರನ್ನು ಕೇಳಿದರೆ maintenance ಮಾಡುವುದಕ್ಕೆ ಹಣ ಇಲ್ಲ ಏನು ಮಾಡೋಣ ಸಾರ್ ಎಂದು ಹೇಳುತ್ತಾನೆ. Give them money. ಆನೆ ನಷ್ಟ ಮಾಡುವುದನ್ನು ತಪ್ಪಿಸಿ, ಹಂದಿಗಳು ನಷ್ಟಮಾಡುವುದನ್ನು ತಪ್ಪಿಸಿ, ಅನೇಕ ಜನರು ಪಾಪ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಹಂದಿಗಳು ಸಾಯುತ್ತವೆ, ಮನುಷ್ಯರು ಸಹ ಸಾಯುತ್ತಾರೆ, ಆನೆಗಳು ಸಾಯುತ್ತವೆ. ಈ ತರಹ ಇವತ್ತು ನಾವು ರೈತರನ್ನು ಉಳಿಸಬೇಕಾದರೆ, ಇವೆಲ್ಲವನ್ನು ಮಾಡಬೇಕು. ನಾನು ಕೊಡುವ 2–3 ಸಲಹೆಗಳನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಇವತ್ತು ರಾಜ್ಯಮಟ್ಟದಲ್ಲಿ ಒಂದು ಉಪಸಮಿತಿಯನ್ನು ಮಾಡಿಕೊಂಡಿದ್ದೀರಿ. ನೀವು ಯಾವುದಾದರೂ ಜಿಲ್ಲೆಗೆ ಉಪಸಮಿತಿಯವರೊಂದಿಗೆ ಒಟ್ಟಿಗೆ ಹೋಗಿದ್ದೀರಾ? Agriculture Minister, Co-operation Minister, Revenue Minister, Rural Development Minister, ಎಲ್ಲಿಯಾದರೂ ಒಂದು ಕಡೆಗೆ ಹೋಗಿದ್ದೀರಾ? ಎಲ್ಲಿ ಗೋಶಾಲೆಗಳನ್ನು ಮಾಡಿದ್ದೀರಿ? ಎಲ್ಲಿ ತೊಂದರೆ ಇದೆ, Electionನಲ್ಲಿ ಒಟ್ಟಿಗೆ ಹೋಗಿದ್ದೀರೇನೋ ಅದು ನನಗೆ ಗೊತ್ತಿಲ್ಲ. ಎಲ್ಲಿಯಾದರೂ ಒಟ್ಟಿಗೆ ಹೋಗಿದ್ದೀರಾ? ನೀವು ಎಲ್ಲಿಯೂ ಹೋಗಿಲ್ಲ. District in-charge Minister ಅಲ್ಲಿ ಒಂದು Task Force. ಜಿಲ್ಲಾ ಮಂತ್ರಿಗಳು ಇಲ್ಲಿಯವರೆಗೆ ಎಷ್ಟು ಮೀಟಿಂಗ್‌ನ್ನು ಮಾಡಿದ್ದಾರೆ? ಜಿಲ್ಲಾ ಮಂತ್ರಿಗಳು ಯಾರಾದರೂ ಒಂದು ಮೀಟಿಂಗ್‌ನ್ನು ಮಾಡಿದ್ದಾರಾ? ತಾಲ್ಲೂಕು ಮಟ್ಟದಲ್ಲಿ ಕಮಿಟಿಯನ್ನು ರಚನೆ

ಮಾಡಿದ್ದಾರಾ? Drought Relief Committee ಎಂದು ಮಾಡಿದ್ದಾರಾ? ಮಾನ್ಯ ಹಾಲಪ್ಪನವರೆ ತಾವು ಎಲ್ಲಿಗೆ ಹೋಗಿದ್ದೀರಿ?

ಶ್ರೀ ಹೆಚ್. ಹಾಲಪ್ಪ : (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು): ನಾನು ಹೋಗಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಹಾಲಪ್ಪನವರೆ, ತಾವು ಚಾಮರಾಜನಗರದಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಮಳೆಯಾಗಿದೆ ಎಂದು immediately ಹೇಳಿ ನೋಡೋಣ. ತಕ್ಷಣ ಎಷ್ಟು ಮಳೆ ಬಿದ್ದಿದೆ, ಎಷ್ಟು ಬೆಳೆ ಹಾಳಾಗಿದೆ ಎಂದು ಹೇಳಿ ನೋಡೋಣ. ಸುಮ್ಮನೆ ಹೇಳುವುದಕ್ಕೆ ಹೋಗಬೇಡಿ ಹಾಲಪ್ಪನವರೆ ತಾವು ಎಲ್ಲಿಯೂ ಹೋಗಿಲ್ಲ, ತಾವು ಕುಳಿತುಕೊಳ್ಳಿ. ಮೊನ್ನೆ ದಿನ ತಾವು election ಗೆ ಹೋಗಿದ್ದೀರಿ ಅಷ್ಟೇ.

ಅಧ್ಯಕ್ಷರು: ಉತ್ತರ ಕೊಡುವಾಗ ತಾವು ಹೇಳುವಿರಂತೆ.

ಶ್ರೀ ಸಿದ್ದರಾಮಯ್ಯ: ತಾವು ಉತ್ತರ ಕೊಡುವಾಗ ಹೇಳಿ. ಈಗ ತಾವು ಕುಳಿತುಕೊಳ್ಳಿ. ನೀವು ಯಾವ ಯಾವ ಡೇಟ್‌ನಲ್ಲಿ ಹೋಗಿದ್ದೇ, ಏನೇನು ಮಾಡಿದ್ದೀರಿ, ಎಂದು ರಿಪೋರ್ಟನ್ನು ಕೊಡಿ.

ಶ್ರೀ ಹಾಲಪ್ಪ : ಈ ಬಗ್ಗೆ ನಾನು ಡೈರಿಯನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನನಗೆ ಡೈರಿ ಬೇಕಾಗಿಲ್ಲ. This House is expected to know. You are answerable to this House. The Government is answerable to this House. Accountabiltiy ಇರಬೇಕು. ನಾನು ಡೈರಿ ಕೊಡಬೇಕೆಂದು ಕೇಳಿದ್ದೀನಾ? ನಮ್ಮಂತಹವರು ಎಷ್ಟು ಜನ ಇದ್ದಾರೆ ಕುಳಿತುಕೊಳ್ಳಪ್ಪಾ, ನಿಮ್ಮ ಸೊರಬ ಮತ್ತು ಸಾಗರದಲ್ಲಿ ಯಾರಿಗೂ ನೀನು ಬಗ್ಗುವುದಿಲ್ಲ ಇಲ್ಲಿ ಬಗ್ಗುತ್ತಿಯಾನಪ್ಪಾ? ಕರುಣಾಕರರೆಡ್ಡಿಯವರನ್ನು ಹೆದರಿಸಿದರೆ ಅವರು ಹೆದರಿಕೊಳ್ಳುತ್ತಾರೆಯೇ? ಮಾನ್ಯ ರವೀಂದ್ರನಾಥ್‌ರವರು ಹೆದರಿಕೊಳ್ಳುತ್ತಾರೆಯೇ? ನಾವು ಯಾರನ್ನು ಕೂಡ ಹೆದರಿಸುವುದಿಲ್ಲ, ಹೆದರಿಕೊಳ್ಳಿ ಎಂದು ಹೇಳುವುದಿಲ್ಲ, ಅದನ್ನು ಯಾರು ಮಾಡಲು ಬಾರದು. ನಾನು ಏನು ಹೇಳುತ್ತೇನೆಂದರೆ, ಇವತ್ತು ರೈತರ ಬಗ್ಗೆ ನಾವು ಕಳಕಳಿಯನ್ನು ವ್ಯಕ್ತಪಡಿಸುತ್ತೇವೆಂದಾಗ ನಮ್ಮ action ನಲ್ಲಿಯೂ ಕೂಡ ಅದು ಇರಬೇಕು. ನಮ್ಮ action ಮತ್ತು ನಮ್ಮ ಹೇಳಿಕೆ ಪರಸ್ಪರ ಹೊಂದಿರಬೇಕು. ಏನು ಮಾಡದೆಯೇ ನಾವು ರೈತರ ಪರ ಇದ್ದೇವೆಂದರೆ, ಏಕೇ ನೀವು ಇವತ್ತಿನವರೆಗೆ ಮಾನ್ಯ ಕರುಣಾಕರರೆಡ್ಡಿಯವರೇ ತಾಲ್ಲೂಕು ಮಟ್ಟದಲ್ಲಿ Releif Committee

ಯನ್ನು ಮಾಡಿದ್ದೀರಾ? ಅಲ್ಲಿ ಏನು ಕೆಲಸಗಳನ್ನು ತೆಗೆದುಕೊಳ್ಳಬೇಕು. ಕುಡಿಯುವ ನೀರಿನ ಬಗ್ಗೆ ಎಲ್ಲಿ ತೆಗೆದುಕೊಳ್ಳಬೇಕು. ಎಲ್ಲೆಲ್ಲೆ ಕೆರೆಗಳ ಕೆಲಸಗಳನ್ನು ತೆಗೆದುಕೊಳ್ಳಬೇಕು. ಏನು ಮಾಡಬೇಕೆಂಬುದರ ಬಗ್ಗೆ Relief Committee ಯಲ್ಲಿ ಹಿಂದಿನಿಂದ drought ಬಂದಾಗ ಮಾಡಿದ್ದೀರಾ. ಎಂಎಲ್‌ಎ ಅಧ್ಯಕ್ಷತೆಯಲ್ಲಿ Relief Committee ಯನ್ನು ಮಾಡುತ್ತೀರಿ. ಇವತ್ತಿನವರೆಗೆ ಎಲ್ಲಿಯಾದರೂ 175 ತಾಲ್ಲೂಕುಗಳಲ್ಲಿ ಒಬ್ಬ ಎಂಎಲ್‌ಎ ಅವನ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದ್ದರೆ ಅದರ ಬಗ್ಗೆ ಆರ್ಡರ್ಸ್‌ನ್ನು ಕೊಡಿ. ಎಲ್ಲಾ ತಾಲ್ಲೂಕುಗಳಲ್ಲಿಯೂ ಕಮಿಟಿಯನ್ನು ಮಾಡಿದ್ದೇವೆ, ಅವರು ಇಷ್ಟು ಮೀಟಿಂಗ್‌ನ್ನು ಮಾಡಿದ್ದಾರೆ. ಇಷ್ಟು programmeನ್ನು ತೆಗೆದುಕೊಂಡಿದ್ದಾರೆ. ಇಷ್ಟು implement ಆಗಿದೆ. ಕುಡಿಯುವ ನೀರಿಗೆ ಇಷ್ಟು ಹಣವನ್ನು ಕೊಟ್ಟಿದ್ದಾರೆ. ಮೇವಿಗೆ ಇಷ್ಟು ಹಣವನು ಕೊಟ್ಟಿದ್ದಾರೆ. ಇವತ್ತಿನವರೆಗೆ ಏನು ಮಾಡಿರುವುದಿಲ್ಲ. ಈಗ ಏನಾಗಿದೆ ಎಂದರೆ, ಮಳೆ ಬಂದಿದೆ, ಮಳೆ ಬಂದಿರುವುದರಿಂದ ರೈತರು ಸ್ವಲ್ಪ ದನಕರುಗಳಿಗೆ ಮೇವುಗಳು ಸಿಕ್ಕಿದೆ. ಬೇಲಿಗಳಲ್ಲಿ ಅಲ್ಲಲ್ಲಿ ರಸ್ತೆಗಳಲ್ಲಿ ಮೇಯಿಸಿಕೊಳ್ಳುತ್ತಾರೆ. ಅಲ್ಲಿ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಸ್ವಲ್ಪ ಹಸಿರು ಬರುತ್ತದೆ ಆ ಚಿಗರನ್ನು ಕುರಿಗಳು, ದನಗಳನ್ನು ಮೇಯಿಸಿಕೊಳ್ಳುತ್ತಾರೆ. ಆಮೇಲೆ ಮಳೆಯು ಹೊರಟು ಹೋದ ಮೇಲೆ ಏನು ಮಾಡುತ್ತಾರೆ. ಬೀಜ ಇಲ್ಲ, ಇವತ್ತು 20 ಲಕ್ಷ ಬೆಳೆ ಬಿದ್ದಿರುವಂತಹದ್ದು, 10 ಲಕ್ಷ ಬಿತ್ತನೆಯಾಗದೆ ಇರುವಂತಹದ್ದು. 30 ಲಕ್ಷ ಹೆಕ್ಟೇರ್ ಪ್ಲಸ್ 30 ಲಕ್ಷ ಹೆಕ್ಟೇರ್ ರಬಿ ಕ್ರಾಪ್ ಪಟ್ಟು 60 ಲಕ್ಷ ಹೆಕ್ಟೇರ್ ಆಯಿತು. ಅದಕ್ಕೆ ಎಷ್ಟು ಬಿತ್ತನೆ ಬೀಜ, ಎಷ್ಟು ಗೊಬ್ಬರ ಬೇಕು. ಈಗ 75% ಕೊಡಬೇಕೆಂದು ಹೇಳಿದ್ದೀರಿ. ಅವರಿಗೆ ಗೊಬ್ಬರವನ್ನು ಸಹ ಕೊಡಿ. ಅವರುಗಳು ಮನೆಗಳನ್ನು ಕಳೆದುಕೊಂಡು ನಷ್ಟ ಮಾಡಿಕೊಂಡಿದ್ದಾರೆ. ಅವರಿಗೆ ಗೊಬ್ಬರವನ್ನು ಪುಕ್ಕಟೆಯಾಗಿ ಕೊಡಿ. ಅದಕ್ಕಾಗಿ ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನು ಮಾಡಿ. ಮನೆಗಳು ಬಿದ್ದುಹೋಗಿರುವ ಕಡೆಯಲ್ಲಿ ಮನೆಯನ್ನು ಕಟ್ಟಿಸಿಕೊಡಿ. 11,000 ಮನೆಗಳು floodsನಲ್ಲಿ ಹೋದವು. ಅವರುಗಳಿಗೆ ಒಂದು ಮನೆಯನ್ನು ಸಹ ಕಟ್ಟಿಕೊಟ್ಟಿರುವುದಿಲ್ಲ. ನಾನು ಮಲೆನಾಡು ಪ್ರದೇಶ ಹಾಗೂ ಕರಾವಳಿ ಪ್ರದೇಶದವರನ್ನು ಈ ಬಗ್ಗೆ ಕೇಳಿದೆ, ಅವರಿಗೆ ಏನು relief ನ್ನು ಮಾಡಿಯೇ ಇಲ್ಲ. ನಿಮ್ಮ ರೆವಿನ್ಯೂ ಮಂತ್ರಿಗಳ ಜಿಲ್ಲೆಯಲ್ಲಿಯೆ ಮನೆಗಳೆಲ್ಲವೂ ಹಾಳಾಗಿ ಹೋಗಿದೆ. ಮೊನ್ನೆ ಮಳೆ ಬಿದ್ದಾಗ ಹಾನಿಯಾಗಿರುವ ಬಗ್ಗೆ ಪತ್ರಿಕೆಯಲ್ಲಿ ದೊಡ್ಡದಾಗಿ ಬಂದಿದೆ. 90 ಮನೆಗಳು

ಕುಸಿದುಹೋಗಿದೆ ಎಂದು ಬಂದಿದೆ. ಅವರುಗಳು ಪಾಪ ಏನು ಮಾಡಬೇಕು. ಗುಡಿಸಲುಗಳಿಗೆ ನೀರು ನುಗ್ಗಿದರೆ ಭಾರಿ ಕಷ್ಟ. ಇವತ್ತು ನೀವು ಎಷ್ಟು ಗಂಜಿ ಕೇಂದ್ರವನ್ನು ತೆರೆದಿದ್ದೀರಿ. ಎಷ್ಟು ಗೋಶಾಲೆಗಳನ್ನು ತೆರೆದಿದ್ದೀರಿ. ಎಲ್ಲಿ ಮೇವು ಇತ್ತು, ಎಲ್ಲಿ ಮೇವಿಲ್ಲ, ಮೇವು ಬೆಳೆಯುವುದಕ್ಕೆ ಏನು ಮಾಡಿದ್ದೀರಿ. ಮುಂದೆ ಏನು ಮಾಡಬೇಕು. ಇದೆಲ್ಲಾ ಒಂದು ಪ್ಲಾನ್, ಪ್ರೋಗ್ರಾಮ್ ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಇದನ್ನು ತಾವು ಯುದ್ಧದೋಪಾಧಿಯಲ್ಲಿ ತಾವು ಮಾಡಬೇಕು. ಅದಕ್ಕೆ on war footing all these programmes have to be taken up. War footingನಲ್ಲಿ ಮಾಡಬೇಕು. ಇಲ್ಲದೆಹೋದರೆ ಬರಗಾಲವು ಬರುತ್ತದೆ, ಬರಗಾಲ ಬಂದಾಗ ಕಾರ್ಯಕ್ರಮವನ್ನು ಮಾಡುತ್ತೇವೆ. ಮತ್ತೇ ಅದೇ ಪರಿಸ್ಥಿತಿಯೂ ಮುಂದುವರಿಯುತ್ತದೆ. ಮಾನ್ಯ ಅಧ್ಯಕ್ಷರೆ ಟೈಮ್ ಇಲ್ಲದೆ ಇರುವುದರಿಂದ ಎಲ್ಲಾ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತಾರೆಂದು ಅಂದುಕೊಂಡಿದ್ದೇನೆ. ನಾವು ಕೊಟ್ಟಿರುವಂತಹ ಸಲಹೆಗಳಿಗೆ ಅವರು ಸ್ಪಂದಿಸುತ್ತಾರೆಂದು ಅಂದುಕೊಂಡಿದ್ದೇನೆ. ಅವರು ಕೊಡುವ ಉತ್ತರವನ್ನು ನೋಡಿಕೊಂಡು ನಾನು clarificationsನ್ನು ಕೇಳುತ್ತೇನೆ. ನೀವು ಹೇಳಿದ್ದೀರೆಂದು ಕರೆಕ್ಟಾಗಿ 2.35 ನಿಮಿಷಕ್ಕೆ ನಿಲ್ಲಿಸಿಬಿಟ್ಟಿದ್ದೇನೆ. ನಿಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣವರೆ, ನೀವು ಮಾತನಾಡುವುದಿಲ್ಲವೇ?

ಶ್ರೀ ಹೆಚ್. ಡಿ. ರೇವಣ್ಣ: ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ನೀವೊಬ್ಬರು ಮಾತನಾಡಿ. ನೀವಾದರೂ ಮಾತನಾಡಿ, ಇಲ್ಲವಾದರೆ ನಿಮ್ಮ ಪರವಾಗಿಯಾದರೂ ಒಬ್ಬರೂ ಮಾತನಾಡಲಿ.

ಶ್ರೀ ಹೆಚ್. ಡಿ. ರೇವಣ್ಣ: ನೀವು ಹೇಳುವುದು 25 ನಿಮಿಷ ಆಯಿತು.

ಅಧ್ಯಕ್ಷರು : ಈಗಾಗಲೇ 2.30 ಗಂಟೆಯಾಗಿದೆ. actually 2.30 ಗಂಟೆಗೆ ಮುಗಿಸಬೇಕಾಗಿತ್ತು. ಅವರೊಬ್ಬರೇ ಮಾತನಾಡುವುದು. **ಆಮೇಲೆ** ನೀವು ಮಾತನಾಡುವ ಹಾಗಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಶ್ರೀಮತಿ ಅನಿತಾ ಕುಮಾರಸ್ವಾಮಿಯವರು 15 ನಿಮಿಷ ಮಾತನಾಡುತ್ತಾರೆ.

ಅಧ್ಯಕ್ಷರು : ಆಮೇಲೆ ನೀವು ಮಾತನಾಡುವಹಾಗಿಲ್ಲ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಅವರಿಗೆ 15 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ನೋಡಿ understand ಆಗಿರುವ ಪ್ರಕಾರ ತಾವು ನಡೆದುಕೊಳ್ಳಬೇಕು ಅಷ್ಟೇ. ಇದನ್ನು ತಾವು violate ಮಾಡುವುದಕ್ಕೆ ಹೋಗಬೇಡಿ. ಏನು understanding ಆಗಿತ್ತು ಅದರ ಪ್ರಕಾರ ತಾವು ನಡೆದುಕೊಳ್ಳಬೇಕು. ಮಾನ್ಯ ರೇವಣ್ಣನವರೆ ಅದಕ್ಕೆ ನಮಗೆ ಬೇಜಾರು ಆಗುತ್ತಿದೆ.

ಶ್ರೀ ಹೆಚ್. ಡಿ. ರೇವಣ್ಣ : ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ತಾವು ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಶ್ರೀಮತಿ ಅನಿತಾ ಕುಮಾರಸ್ವಾಮಿಯವರು 10 ನಿಮಿಷ ಮಾತನಾಡುತ್ತಾರೆ.

ಅಧ್ಯಕ್ಷರು : ಅವರು ಎಲ್ಲಿ 10 ನಿಮಿಷ ಮಾತನಾಡುತ್ತಾರೆ? ಟೈಮ್ ಹೇಗೆ ಆಗುತ್ತದೆ ಅದನ್ನು ನೋಡೋಣ.

ಶ್ರೀ ಹೆಚ್. ಸಿ. ಬಾಲಕೃಷ್ಣ : ನಮಗೆ ನಿಗಧಿ ಮಾಡಿರುವ ಸಮಯದಲ್ಲಿ ನಾವು ಮಾತನಾಡುತ್ತೇವೆ.

ಅಧ್ಯಕ್ಷರು: ಅದು ಬಿಡಿ, ಏನು understanding ಆಗಿದೆ ಅದರ ಪ್ರಕಾರ ತಾವು ನಡೆದುಕೊಳ್ಳಬೇಕು. ಇದಕ್ಕೆ ನಮಗೆ ಬೇಜಾರು ಆಗುವುದು. ಏನು understanding ಆಗಿದೆ ಅದರ ಪ್ರಕಾರ ತಾವು ನಡೆದುಕೊಳ್ಳಬೇಕು. ಅದಕ್ಕಾಗಿಯೇ ಬೇಜಾರು ಆಗುತ್ತದೆ. ಕಾಂಗ್ರೆಸ್ ಪಕ್ಷದಿಂದ ಮಾತನಾಡುವುದಕ್ಕೆ 4–5 ಜನರು ರೆಡಿ ಇದ್ದಾರೆ. ಅವರು tolerate ಮಾಡಿಕೊಳ್ಳಲಿಲ್ಲ.

ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸಕಾಲಕ್ಕೆ ಮಳೆಯು ಬರದೆ ಇಡೀ ರಾಜ್ಯದಲ್ಲಿ ರೈತರು ಕಂಗೆಟ್ಟಿದ್ದಾರೆ. ಅವರುಗಳು ಬಹಳ ತೊಂದರೆಗೆ ಒಳಗಾಗಿದ್ದಾರೆ. ಬೆಳೆ ಬೆಳೆಯುವುದಕ್ಕಾಗಲಿಲ್ಲ, ಜೊತೆಗೆ ಜಾನುವಾರುಗಳಿಗೂ ಸಹ ನೀರಾಗಲಿ, ಮೇವಿನ ಸಮಸ್ಯೆ ಉಂಟಾಗಿದೆ. ಈ ದಿನ ಹುಲ್ಲಿಗೂ ಸಹ ಪರದಾಡುವಂತಾಗಿದೆ. ಸರ್ಕಾರ ಜಾನುವಾರುಗಳಿಗಾಗಿ ಮೇವಿನ ವ್ಯವಸ್ಥೆಯನ್ನು ಹಾಗೂ ನೀರಿನ ವ್ಯವಸ್ಥೆಯನ್ನು ಸಹ ಮಾಡಬೇಕಾಗಿದೆ. ಇದು ಅಲ್ಲದೆ ವ್ಯಾಪಕವಾಗಿ ಗೋಶಾಲೆಗಳನ್ನು ತೆರೆಯಬೇಕಾಗಿದೆ. ಇದು ಅಲ್ಲದೆ ಇತರೆ ಕಸುಬುಗಳಿಗೆ ವ್ಯವಸಾಯವನ್ನೆ ನಂಬಿಕೊಂಡಿರುವಂತಹ ಪ್ರದೇಶಗಳಲ್ಲಿ ಅದು ಮಳೆಯನ್ನೆ

ನೆಚ್ಚಿಕೊಂಡಿರುವಂತಹ ಪ್ರದೇಶಗಳಲ್ಲಿ ಈ ತರಹ ಕಸುಬುಗಳಿಗೆ ಹೈನುಗಾರಿಕೆ ಇದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಕಡಿಮೆ ನೀರನ್ನು ಬಳಕೆ ಮಾಡಿ ಹಣ್ಣು, ಹೂವು ಮತ್ತು ತರಕಾರಿ ಬೆಳೆಯುವುದಕ್ಕೆ ರೈತರಿಗೆ ತರಬೇತಿ ಹಾಗೂ ಮಾಹಿತಿಯನ್ನು ಸರ್ಕಾರದ ಕಡೆಯಿಂದ ಕೊಡಿಸಬೇಕು. ಕೃಷಿ ವಿಶ್ವವಿದ್ಯಾನಿಲಯದವರನ್ನು ಕಳುಹಿಸಿ ಅಲ್ಲಿ agriculture officer ಗಳೆಂದು ಹೇಳುತ್ತಾರೆ. ಅವರು ಹಳ್ಳಿಹಳ್ಳಿಗೂ ಹೋಗಿ ನಮ್ಮ ರೈತರಿಗೆ ತರಬೇತಿ ಹಾಗೂ ಮಾಹಿತಿಯನ್ನು ಕೊಡುವಂತಾಗಬೇಕು. ಆದರೂ Agriculture Officer ಗಳು ಅವರು ರೈತ ಕುಟುಂಬಕ್ಕೆ ಸೇರಿದವರಾದರೂ ಹೆಚ್ಚಿಗೆ ಅವರು ಹಳ್ಳಿ ಕಡೆಗಳಿಗೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಇದಕ್ಕೆ ಕಾರಣ ಏನೋ ಗೊತ್ತಿಲ್ಲ. ಇದರ ಬಗ್ಗೆ ಸರ್ಕಾರ ಸ್ವಲ್ಪ monitor ಮಾಡುವುದು ಒಳ್ಳೆಯದು ಎಂದು ಹೇಳಿ ನಾನು ಅಭಿಪ್ರಾಯವನ್ನು ಪಡುತ್ತೇನೆ. ಬರಪರಿಹಾರಕ್ಕೆ ತಾತ್ಕಾಲಿಕ ಪರಿಹಾರದ ಜೊತೆಗೆ ಶಾಶ್ವತವಾದಂತಹ ಪರಿಹಾರವನ್ನು ಸಹ ಹೆಚ್ಚಿಸಬೇಕಾಗಿದೆ. ಶಾಶ್ವತ ಪರಿಹಾರಗಳಲ್ಲಿ ಅಂತರಜಲವನ್ನು ಅಭಿವೃದ್ಧಿ ಮಾಡುವುದು, ಇದರ ಜೊತೆಗೆ ಭೂಸಂರಕ್ಷಣೆ ಹಾಗೂ ಇತರ ಕಸುಬುಗಳಿಗೆ ಪ್ರೋತ್ಸಾಹವನ್ನು ಕೊಡುವುದು. ಹಿಂದಿನ ಕಾಲದಲ್ಲಿ ಮಳೆಗಾಲದಲ್ಲಿ ಬೆಟ್ಟಗುಡ್ಡಗಳಿಂದ ಹರಿದು ಬರುವಂತಹ ನೀರನ್ನು ಅವರು ಶೇಖರಣೆ ಮಾಡಿಟ್ಟುಕೊಳ್ಳುತ್ತಿದ್ದರು. ಕೆರೆ ಮತ್ತು ಕುಂಟೆಗಳಲ್ಲಿ ನೀರನ್ನು ಶೇಖರಣೆ ಮಾಡಿಟ್ಟುಕೊಂಡು ನಂತರ ಅದನ್ನು ಈ ತರಹದ ಪರಿಸ್ಥಿತಿ ಬಂದಾಗ ಉಪಯೋಗ ಮಾಡಿಟ್ಟುಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಅದು ನಡೆಯುತ್ತಿಲ್ಲ. ಅದರ ಬಗ್ಗೆ ನಮ್ಮ ರೈತರುಗಳು ಎಚ್ಚೆತ್ತುಕೊಂಡು ಮಳೆಗಾಲದಲ್ಲಿ ಅವರು ನೀರನ್ನು ಸಂಗ್ರಹಮಾಡಿಟ್ಟುಕೊಳ್ಳಬೇಕಾಗಿದೆ. ನಮ್ಮ ರೈತರು ಎಚ್ಚೆತ್ತುಕೊಂಡು ಮಳೆಗಾಲದಲ್ಲಿ ಸಿಗುವ ನೀರನ್ನು ಸಂಗ್ರಹ ಮಾಡಿಟ್ಟುಕೊಳ್ಳಬೇಕಾಗಿದೆ. ಕೆಲವು' ಕಡೆ ಕೆರೆಗಳ ಏರಿಗಳು ದುರಸ್ತಿ ಕಾಣದೆ ನೀರೆಲ್ಲಾ ಹರಿದು ಹೋಗುತ್ತಿವೆ. ಹಾಗೆ ಕೆರೆಗಳನ್ನು ಪುನಶ್ಚೇತನಗೊಳಿಸಬೇಕಾಗಿದೆ. ಕೆರೆಗಳಲ್ಲಿ ಹೂಳೆತ್ತುವ ಕೆಲಸವಾಗಿ ಈಗಲಾದರೂ ಆ ಕೆಲಸವನ್ನು ಪ್ರಾರಂಭ ಮಾಡಿದರೆ ಮುಂದಿನ ಮಳೆಗಾಲದಲ್ಲಿ ಹೆಚ್ಚು ನೀರು ಕೆರೆಗಳಲ್ಲಿ ಸಂಗ್ರಹವಾಗುತ್ತದೆ. ಇದು ವ್ಯವಸಾಯಕ್ಕೂ ಹಾಗೂ ಜನರಿಗೆ ಮತ್ತು ಜಾನುವಾರುಗಳಿಗೂ ಕೂಡ ಉಪಯೋಗವಾಗುತ್ತದೆ. ಮಳೆ ನೀರಿನ ಬಗ್ಗೆ ನಾನೇನು ಮಾತನಾಡಿದೆ, ಇದನ್ನು ಒಂದು ರೀತಿ ಜನಜಾಗೃತಿ ಆಂದೋಲನದ ರೀತಿಯಲ್ಲಿ ಮಾಡಬೇಕು, ರೈತರಿಗೆ ಇದರ ಬಗ್ಗೆ ಒಂದು ಮಾಹಿತಿಯನ್ನು,

ತರಬೇತಿಯನ್ನು ಕೊಟ್ಟು ಅವರಿಗೆ ಇದರ ಬಗ್ಗೆ ತಿಳುವಳಿಕೆ ನೀಡಬೇಕಾಗಿದೆ ಇದಲ್ಲದೆ ಈಗ ಸಿಟಿಗಳಲ್ಲಿ ಕೈಗಾರಿಕೆಗಳಿರುವ ಜಾಗದಲ್ಲಿ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುತ್ತೀರಿ, ಅದೇ ರೀತಿ ಈಗ ನೀರಾವರಿ ಸೌಕರ್ಯವಿಲ್ಲದೇ ಇರುವ ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜು ಮಾಡುವ ನಿಯಮಾವಳಿಯನ್ನು ತುರ್ತಾಗಿ ನೀವು ಬದಲಾಯಿಸಬೇಕಾಗಿದೆ, ಅಂದರೆ ನಿರಂತರವಾಗಿ ಹಗಲಿನಲ್ಲಿ ಬೆಳಿಗ್ಗೆ 6.00–12.00 ಗಂಟೆಯವರೆಗೂ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕಾಗಿದೆ. ಇದನ್ನು ಬಹಳ ಹಿಂದುಳಿದಿರುವ ಪ್ರದೇಶಗಳಲ್ಲಿ ಎಲ್ಲಿ ನೀರಾವರಿ ಸೌಕರ್ಯಗಳಿರುವುದಿಲ್ಲವೋ ಮಳೆ ಆಧಾರಿತ ಮೇಲೆ ವ್ಯವಸಾಯವನ್ನು ನಂಬಿಕೊಂಡಿರುತ್ತಾರೋ ಅಂಥ ಕಡೆ ಈ ನಿಯಮಾವಳಿಯನ್ನು ತರುವುದರ ಬಗ್ಗೆ ಸರ್ಕಾರ ಯೋಚಿಸಬೇಕಾಗಿದೆ. ಅದರಲ್ಲಿಯೂ ವಿಶೇಷವಾಗಿ ತುಮಕೂರು, ಕೋಲಾರ, ಬೀದರ್, ಬಿಜಾಪುರ ಇಂಥ ಜಿಲ್ಲೆಗಳಲ್ಲಿ ನಾವು ಮಾಡಬೇಕಾಗಿದೆ, ಹೇಗೆ ಈಗ ಒಂದು family ಯಲ್ಲಿ weak ಆಗಿರುವಂಥ ಒಂದು ಮಗುವಿಗೆ ಹೆಚ್ಚು ಪೌಷ್ಠಿಕ ಆಹಾರ ಕೊಟ್ಟು strong ಮಾಡಲಿಕ್ಕೆ ಸಂಸಾರದಲ್ಲಿ ಪ್ರಯತ್ನ ಮಾಡುತ್ತಾರೋ ಅದೇರೀತಿ ಈ ನೀರಾವರಿ ಸೌಕರ್ಯಗಳಿಲ್ಲದೇ ಇರುವ ಪ್ರದೇಶಗಳಲ್ಲಿ ಈ ರೀತಿ ಒಂದು ಸೌಕರ್ಯವನ್ನು ಸರ್ಕಾರ ಕಲ್ಪಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ. ಇದಲ್ಲದೆ Garment industry ಗಳನ್ನು ಈಗ ಸಿಟಿಗಳಲ್ಲಿ ಅವರಿಗೆ ಸಾಕಷ್ಟು option ಗಳಿರುತ್ತದೆ. Call center ಗಳಲ್ಲಿ ಕೆಲಸ ಸಿಗುತ್ತದೆ, ಬೇರೆ ಬೇರೆ ರೀತಿ factories ಇರುತ್ತವೆ. ಆದರೆ ಹಳ್ಳಿಗಳಲ್ಲಿ ಆ ರೀತಿ ಇರುವುದಿಲ್ಲವಲ್ಲ, ವ್ಯವಸಾಯವನ್ನೇ ನಂಬಿಕೊಂಡಿರುತ್ತಾರೆ. ಸಕಾಲಕ್ಕೆ ಮಳೆ ಬರದೆ ಬೆಳೆ ಸಹ ಬೆಳೆಯಲಿಕ್ಕಾಗುವುದಿಲ್ಲ, ಅವರಿಗೆ ಆದಾಯ ಹೇಗೆ ಬರುತ್ತದೆ. ಅವರು ಜೀವನ ಹೇಗೆ ಸಾಗಿಸುತ್ತಾರೆ. ಅದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅದರಲ್ಲಿಯೂ ಈ B.P.L. families ಹೇಗೆ ಜೀವನ ಸಾಗಿಸುತ್ತಾರೆ. ಅವರಿಗೆ ಆದಾಯ ಎಲ್ಲಿಂದ ಬರುತ್ತದೆ. ವ್ಯವಸಾಯದಿಂದ ಅವರಿಗೆ ಆದಾಯ ಬರದೆ ಇದ್ದರೆ ಬೇರೆ ರೀತಿಯಲ್ಲಿ ಅವರಿಗೆ ಆದಾಯ ಬರುವ ರೀತಿಯಲ್ಲಿ ಸರ್ಕಾರ ಯೋಜನೆಯನ್ನು ರೂಪಿಸಬೇಕಾಗಿದೆ. ಈ ಸಂಬಂಧವಾಗಿ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿಯೂ ಗಾರ್ಮೆಂಟ್ ಫ್ಯಾಕ್ಟರಿ ತೆಗೆಯಲಿಕ್ಕೆ ಯಾರಿಗೆ ಆಸಕ್ತಿ ಇರುತ್ತದೋ ಅಂಥವರಿಗೆ ಸ್ವಲ್ಪ ಉತ್ತೇಜನವನ್ನು ಕೊಟ್ಟು ಸರ್ಕಾರದ ಕಡೆಯಿಂದ ಸವಲತ್ತುಗಳನ್ನು ಒದಗಿಸಿಕೊಡಬೇಕಾಗುತ್ತದೆ.

ಸರ್ಕಾರಿ ಜಮೀನು ಇದಲ್ಲದೆ ವಿದ್ಯುತ್ತನ್ನು ಪೂರೈಕೆ ಮಾಡಿಕೊಡುವುದು, ನೀರಿನ ವ್ಯವಸ್ಥೆ ಹಾಗೆ ಅವರಿಗೆ ಸಬ್ಸಿಡಿ ದರದಲ್ಲಿ ಅವರಿಗೆ ಸಾಲ ದೊರಕುವ ಸೌಲಭ್ಯ ಈ ಎಲ್ಲಾ ಸವಲತ್ತುಗಳನ್ನು ದೊರಕಿಸಿ ಕೊಟ್ಟರೆ ಖಂಡಿತವಾಗಿಯೂ ತಾಲ್ಲೂಕು ಕೇಂದ್ರಗಳಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ತೆರೆಯಲಿಕ್ಕೆ ಜನ ಮುಂದೆ ಬರುತ್ತಾರೆ. ಇದಲ್ಲದೆ ರಸ್ತೆಗಳ ವ್ಯವಸ್ಥೆಯು ಸಹ ಆಗಬೇಕಾಗಿದೆ. ಹೆಚ್ಚಾಗಿ ಸಿಟಿಗಳಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ಮಾಡಲಿಕ್ಕೆ ಜನ ಇಷ್ಟಪಡುತ್ತಾರೆ. ಹಳ್ಳಿಗಳವರೆಗೆ ಹೋಗುವುದಕ್ಕೆ ಮನಸ್ಸು ಮಾಡುವುದಿಲ್ಲ, ಈ ರೀತಿ ಸೌಕರ್ಯಗಳನ್ನಾದರೂ ಸರ್ಕಾರ ಒದಗಿಸಿ ಕೊಟ್ಟರೆ ಆಗಲಾದರೂ ಅಲ್ಲಿ ಹೋಗಿ ಕಾರ್ಖಾನೆಗಳನ್ನು ಸ್ಥಾಪಿಸುವ ಕೆಲಸವನ್ನು industrialists ಮಾಡುತ್ತಾರೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಇದಲ್ಲದೆ .ಕೆರೆಗಳಿಗೆ ನೀರು ತುಂಬಿಸುವಂಥ ಯೋಜನೆಗಳನ್ನು ಸರ್ಕಾರ ರೂಪಿಸಬೇಕಾಗಿದೆ. ತುಮಕೂರಿನ ಕೆಲವು ಭಾಗಗಳಿಗೆ ಹೇಮಾವತಿ, ನೇತ್ರಾವತಿ ನದಿಗಳಿಂದಾಗಲಿ ಸ್ವಲ್ಪ ನೀರು ತರುವುದಕ್ಕೆ ಪ್ರಯತ್ನ ಮಾಡುವಲ್ಲಿ ಸರ್ಕಾರ ಯೋಚಿಸಬಹುದಾಗಿದೆ. ಈ ಬಗ್ಗೆ ನೀರಾವರಿ ತಜ್ಞರ ಸಲಹೆಯನ್ನು ಪಡೆದುಕೊಂಡು ಅಧ್ಯಯನ ಮಾಡಿ ಅವರು ವರದಿಯನ್ನು ಕೊಟ್ಟ ನಂತರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಕೊನೆಯದಾಗಿ ಬರಗಾಲಕ್ಕೆ ನಮ್ಮ ರೈತರು ತುತ್ತಾಗಿ ಸಂಕಟದಲ್ಲಿದ್ದಾರೆ ಅದಕ್ಕೆ ಸರ್ಕಾರದಿಂದ ಏನು ಕೆಲವು ಸೌಕರ್ಯಗಳನ್ನು ಕೊಡಬಹುದು ಎಂದು ಯೋಚಿಸಿದಾಗ ರೈತರಿಗೆ Interest free loan ಕೊಡುವ ಬಗ್ಗೆ ಸರ್ಕಾರ ಯೋಚಿಸಬಹುದು, ಇದಲ್ಲದೆ ಉಪ ಕಸುಬುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬಹುದು, ಹಾಗೆ ವ್ಯಾಪಕವಾಗಿ ಗೋಶಾಲೆಗಳನ್ನು ತೆರೆಯುವುದರ ಬಗ್ಗೆ ಯೋಚನೆ ಮಾಡಬಹುದು. ಅದಲ್ಲದೆ ನೀರಾವರಿ ವಂಚಿತ ಪ್ರದೇಶಗಳಲ್ಲಿ ಕೆರೆಗಳನ್ನು ತುಂಬಿಸುವಂಥ ಕೆಲಸವನ್ನು ಮಾಡಬಹುದಾಗಿದೆ. ಈಗ ಏನು ಅಧಿವೇಶನ ಕರೆದಿದ್ದೀರಿ, ಕೆಲವು ಶಾಸಕರಿಂದ ಕೆಲವು ಮುಖಂಡರುಗಳಿಂದ ಸಲಹೆಗಳನ್ನು ಪಡೆದುಕೊಂಡಿದ್ದೀರಿ, ಇದರಲ್ಲಿ ಕೆಲವನ್ನಾದರೂ implement ಮಾಡುವುದಕ್ಕೆ ಸರ್ಕಾರ ಪ್ರಯತ್ನವನ್ನು ಮಾಡಲಿ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇನ್ನು ನನ್ನ ಸ್ವಕ್ಷೇತ್ರ ಮಧುಗಿರಿ ಬಗ್ಗೆ ಮಾತನಾಡುವುದಾದರೆ ಬಹಳ ಹಿಂದುಳಿದಿರುವ ಪ್ರದೇಶ ಅದು, ಅಲ್ಲಿ ವ್ಯವಸಾಯ ಬಿಟ್ಟು ಬೇರೇನು ಮಾಡಲಿಕ್ಕೆ ಅಲ್ಲಿನ ಜನಕ್ಕೆ ಗೊತ್ತಿಲ್ಲ. ಅದು

ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳ ಪಟ್ಟಿಗೆ ಸೇರಿದೆ. ಇಲ್ಲಿ ಹೆಚ್ಚಾಗಿ ಮಳೆಯಾಗದೆ ರಾಗಿ ಹಾಗೂ ಕಡಲೆಕಾಯಿಯನ್ನು ಬೆಳೆಯಲಿಕ್ಕೆ ಆಗಿಲ್ಲ. ಇತ್ತೀಚೆಗೆ ಸ್ವಲ್ಪ ಮಳೆ ಬಂದಿದ್ದರಿಂದ ಜೋಳ, ಹುರುಳಿ ಬೆಳೆಯುತ್ತಿದ್ದಾರೆ, ಇನ್ನು ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗಿದೆ, ಕುಡಿಯಲಿಕ್ಕೆ ನೀರು ಸಹ ಇಲ್ಲ, ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ, ನಮ್ಮ ಮೂರು ಹೋಬಳಿಗಳಾದ ಮಿಡಿಗೇಶಿ, ಕೊಡಿಗೆಹಳ್ಳಿ, ಐ.ಡಿ.ಹಳ್ಳಿ, ಇಲ್ಲಂತೂ ಪರಿಸ್ಥಿತಿ ಬಹಳ ಭೀಕರವಾಗಿದೆ. ಇದರ ಬಗ್ಗೆ ಸರ್ಕಾರ ಸರ್ಕಾರ ಹೆಚ್ಚಿಗೆ ಗಮನ ಕೊಟ್ಟು ಹೆಚ್ಚು ಪರಿಹಾರ ಧನವನ್ನು ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಮನವಿ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಸರ್, ನಾನು ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು: ರೇವಣ್ಣ ಐದು ನಿಮಿಷದಲ್ಲಿ ಮುಗಿಸಿ, ಅರ್ಧ ತಾಸು Lunch break ಬಿಡುತ್ತೇನೆ, ನಂತರ ನೀವು ಐದು ನಿಮಿಷದಲ್ಲಿ ಮಾತನಾಡಿ, ಸರ್ಕಾರ ಉತ್ತರ ಕೊಟ್ಟುಬಿಡಲಿ.

ಶ್ರೀ ಹೆಚ್. ಡಿ. ರೇವಣ್ಣ: ನಾನು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ, ಊಟ ಆದ ನಂತರ ಅವರು ಉತ್ತರ ಕೊಡಲಿ.

ಅಧ್ಯಕ್ಷರು: ಆಯಿತು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಒಂದು ನಿಲುವಳಿ ಸೂಚನೆಯನ್ನು ನಮ್ಮ ಪಕ್ಷದ ವತಿಯಿಂದ ಕೊಟ್ಟಿದ್ದೆವು. ಈ ರಾಜ್ಯದಲ್ಲಿ 20 ಜಿಲ್ಲೆಗಳಲ್ಲಿ ಬರಗಾಲ ಇರಬಹುದು. ಮೂರು ಜಿಲ್ಲೆಗಳಲ್ಲಿ ಅತೀವೃಷ್ಟಿ ಇರಬಹುದು. ಏಕೆಂದರೆ ಈ ಸರ್ಕಾರ ಬಂದ ಮೇಲೆ ಕಳೆದ 2008–09 ರಿಂದ ಕೆಲವು ಜಿಲ್ಲೆಗಳಲ್ಲಿ ಉದಾಹರಣೆಗೆ ಹೇಳುವುದಾದರೆ, ಕೇಂದ್ರ ಸರ್ಕಾರದಿಂದ ಹಣ ಬಂದಿದೆ, ರಾಜ್ಯ ಸರ್ಕಾರದಿಂದ ಹಣ ಎಷ್ಟು ವಿನಿಯೋಗ ಮಾಡಿದ್ದಾರೆಂಬುದನ್ನು ಮಾನ್ಯ ಕಂದಾಯ ಸಚಿವರು ಸದನದ ಗಮನಕ್ಕೆ ತರಬೇಕೆಂದು ನಾನು ಮೊದಲನೆಯದಾಗಿ ಮನವಿ ಮಾಡುತ್ತಿದ್ದೇನೆ. ಏಕೆಂದರೆ ಇವತ್ತು ಮುಂಗಾರು ಬೆಳೆ ಗುರಿ ಸುಮಾರು 72.00 ಲಕ್ಷ ರೂ.ಗಳಿತ್ತು, ಆ 72.00 ಲಕ್ಷ ರೂ.ಗಳಲ್ಲಿ ಕೇವಲ ವಾಡಿಕೆ ಮಳೆ ಇವತ್ತು ಆಗಸ್ಟ್‌ವರೆಗೆ ಕೇವಲ 61000 ಹೆಕ್ಟೇರ್ ಎಂದು ಹೇಳುತ್ತಾರೆ. ಬಿತ್ತನೆ ಆಗಿರುವಂಥ ಪ್ರದೇಶ 60000

ಹೆಕ್ಟೇರ್, ಮತ್ತೆ ತೇವಾಂಶದ ಕೊರತೆಯಿಂದ ಸುಮಾರು 20000 ಹೆಕ್ಟೇರ್ ಜಮೀನಿನಲ್ಲಿ ಬೆಳೆ ಸಂಪೂರ್ಣವಾಗಿ ಹೋಗಿದೆ ಎಂದು ವರದಿ ಹೇಳುತ್ತಿದೆ. ಅದರೊಂದಿಗೆ ಇವತ್ತಿನ ಕೆಲವು ಏಕದಳ ಧಾನ್ಯದ ಬಿತ್ತನೆ ಬೀಜವೆಂದು ಹೇಳಿ 34.00 ಲಕ್ಷ ರೂ.ಗಳ ಗುರಿ ಇತ್ತು. ಕೇವಲ 29000 ಆಗಿದೆ, ಅದರಲ್ಲಿ ಸುಮಾರು 28000 ಹೆಕ್ಟೇರ್ complete ಆಗಿ ನಾಶವಾಗಿದೆಯೆಂದು ಹೇಳುತ್ತಾರೆ. ಏಕೆಂದರೆ ಒಂದು ಕಡೆ ಕೇಂದ್ರ ಸರ್ಕಾರದಿಂದ ಮೊನ್ನೆ ಒಂದು ಟೀಮ್ ಬಂದಿದೆ, ಇವತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ, ಮುಖ್ಯಮಂತ್ರಿಗಳು, ವಿರೋಧಪಕ್ಷದವರೆಲ್ಲಾ ಹೋಗಿ ಮನವಿ ಕೊಡುವುದು ಎಂದು ಹೇಳಿದ್ದರು, ಆದರೆ ಇದು ಆಗುವುದಿಲ್ಲ, ದಯಮಾಡಿ ಬರಬೇಡಿ ಎಂದು ನಮಗೆ 31ನೇ ತಾರೀಖು ನಮಗೆ ಒಂದು ಪತ್ರವನ್ನು ಕಳುಹಿಸಿದರು. ಒಂದು ಜಿಲ್ಲೆಯನ್ನು ಉದಾಹರಣೆ ಕೊಡುತ್ತೇನೆ. ಶಿವಮೊಗ್ಗ ತಾಲ್ಲೂಕಿನ ಶಿಕಾರಿಪುರ 14.75 ಲಕ್ಷ ರೂಪಾಯಿಗಳು, ಸೊರಬ 2 ಕೋಟಿ 15 ಲಕ್ಷ ರೂಪಾಯಿಗಳು, ಸಾಗರ 1 ಕೋಟಿ 92 ಸಾವಿರ ರೂಪಾಯಿಗಳು, ಇದೇ ರೀತಿ ಹೊಸನಗರ ಹಾಗೂ ಭದ್ರಾವತಿ ಇವೆಲ್ಲಾ ಸೇರಿ 5 ಕೋಟಿ 34 ಲಕ್ಷ ರೂಪಾಯಿಗಳ ಒಟ್ಟು ಹಣ ಬೆಳೆ ಹಾನಿ ಅತಿವೃಷ್ಟಿಯಿಂದ ಆಗಿದೆ. ಇದೇ ರೀತಿ ಇವತ್ತು ಶಿವಮೊಗ್ಗದ ರೀತಿಯಲ್ಲಿ ಲೆಕ್ಕ ಹಾಕಿದರೆ ಒಂದು ಉದಾಹರಣೆಯನ್ನು ನಮ್ಮ ಜಿಲ್ಲೆಯದ್ದನ್ನೂ ಕೊಡಬೇಕಾಗುತ್ತದೆ. ಏಕೆಂದರೆ, 2008–09ರಲ್ಲಿ 71 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆ ಬೆಳೆಯಲಾಗಿತ್ತು. ಅದರಲ್ಲಿ 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಬೆಳೆದ ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಇವತ್ತು ಒಂದು ಎಕರೆಗೆ 800 ರೂಪಾಯಿಗಳೆಂದು CRF fund ಅನ್ನು ಇಟ್ಟಿದ್ದಾರೆ. ಒಂದು ಹೆಕ್ಟೇರ್‌ಗೆ 2 ಸಾವಿರ ರೂಪಾಯಿಗಳೆಂದು ಮಾಡಿದ್ದಾರೆ. ಇದು 5–10 ವರ್ಷಗಳ ಹಿಂದಿನದು ಇರಬಹುದು. ಅದು ಬೇಡ. ಇತ್ತೀಚಿನ ಎರಡು ವರ್ಷಗಳದ್ದನ್ನು ಇಟ್ಟುಕೊಳ್ಳೋಣ. 800 ರೂಪಾಯಿಗಳಿಗೆ ಒಂದು ಎಕರೆ ಆಲೂಗೆಡ್ಡೆಯನ್ನು ಬೆಳೆಯುವುದಕ್ಕಾಗುತ್ತದೆಯೇ ಸ್ವಾಮಿ? ಕನಿಷ್ಠ ಒಂದು ಎಕರೆಗೆ 15–25 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಬರೀ ಬಿತ್ತನೆ ಮಾಡುವುದು, ಗೊಬ್ಬರ, ಆಳಿನ ಕೂಲಿ ಸೇರಿ ಸುಮಾರು 25 ಸಾವಿರ ಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ಒಂದು ಹೆಕ್ಟೇರ್‌ಗೆ 25 ಸಾವಿರ ರೂಪಾಯಿಗಳು ಬೇಕು ಎಂದು ವರದಿ ಕೊಟ್ಟಿದ್ದರು. ಇವತ್ತು 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಸುಮಾರು 140 ಕೋಟಿ ರೂಪಾಯಿಗಳ ಆಲೂಗೆಡ್ಡೆ ಬೆಳೆ ಸರ್ವನಾಶವಾಗಿದೆ.

ಕಳೆದ ವರ್ಷದಲ್ಲಿ 71 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆಯನ್ನು ಬೆಳೆಯುವಂಥ ರೈತರು ಈ ವರ್ಷ 2008–09ಕ್ಕೆ ಕೇವಲ 17 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆದಿದ್ದಾರೆ. ಅದರಲ್ಲೂ 8 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಇವತ್ತು ಆಲೂಗೆಡ್ಡೆ ಬೆಳೆ ಸರ್ವನಾಶವಾಯಿತು. ಕಳೆದ ವರ್ಷ ಹಾಗೂ ಈ ವರ್ಷ ಸೇರಿ ಇವತ್ತು ರೈತರಿಗೆ 150 ಕೋಟಿ ರೂಪಾಯಿಗಳ loss ಆಗಿದೆ. ಸಂಪೂರ್ಣವಾಗಿ ನಷ್ಟವಾಗಿದೆ. ಏನೆಂದರೆ, ಕಂದಾಯ ಮಂತ್ರಿಗಳು ಹಾಗೂ ಕೃಷಿ ಮಂತ್ರಿಗಳಿಗೆ ನಾನು ಗಮನಕ್ಕೆ ತರುವುದು ಇಷ್ಟೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರಾ? ಕನಿಷ್ಠ ಒಂದು ಎಕರೆಗೆ 5 ಸಾವಿರ ರೂಪಾಯಿಗಳ CRF fund ಮಾಡುವುದಕ್ಕೆ ಸಭೆಯಲ್ಲಿ ನಿರ್ಣಯ ಮಾಡಿ ಕಳುಹಿಸುವುದಕ್ಕೆ ಏನಾದರೂ ಇವತ್ತು ತೊಂದರೆಯಿದೆಯೇ? ಕೇಂದ್ರ ಸರ್ಕಾರಕ್ಕೆ ಒಂದು proposal ಕಳುಹಿಸಿ. ಏಕೆಂದರೆ, ಕನಿಷ್ಠ 5 ಸಾವಿರ ರೂಪಾಯಿಗಳ CRF fund ಕೊಡದೇ ಹೋದರೆ ಆ ರೈತರ ಪಾಡೇನು? ಆಮೇಲೆ ರಾಜ್ಯ ಸರ್ಕಾರದಿಂದ ಏನು ಕೊಡುತ್ತೀರಿ? ಏಕೆಂದರೆ ಕೆಲವು ಭಾಗಗಳಲ್ಲಿ 5 ಕೋಟಿ ರೂಪಾಯಿಗಳನ್ನು release ಮಾಡಿದ್ದೇವೆ ಎಂದು ಹೇಳುತ್ತೀರಿ. 5 ಕೋಟಿ 93 ಲಕ್ಷ ರೂಪಾಯಿಗಳ ಬೆಳೆ ಹಾನಿ ಎಂದು ಹೇಳುತ್ತೀರಿ. ಶಿವಮೊಗ್ಗಕ್ಕೆ release ಮಾಡುತ್ತೀರಿ. ನಾವು ಹಾಸನದವರು ಏನು ಮಾಡಿದ್ದೇವೆ? ಹೋದ ಸಲ ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ 55 ಸಾವಿರ ಹೆಕ್ಟೇರ್ ಬೆಳೆ ಹೋಯಿತಲ್ಲಾ, ಅದಕ್ಕಾಗಿ ಸುಮಾರು 17 ಸಾವಿರ ಹೆಕ್ಟೇರ್ ಜಮೀನಿನಲ್ಲಿ maize ಬೆಳೆಯುತ್ತಿದ್ದಂಥವರು ಇವತ್ತು 55 ಸಾವರಿ ಹೆಕ್ಟೇರ್‌ನಲ್ಲಿ maize ಬೆಳೆದಿದ್ದಾರೆ. ಸರ್ಕಾರ ಅದಕ್ಕೆ ಬೆಂಬಲ ಬೆಲೆಯನ್ನಾದರೂ ಘೋಷಣೆ ಮಾಡಬೇಕಲ್ಲವೇ? ಕನಿಷ್ಠ 1,200 ರೂಪಾಯಿಗಳ ಬೆಂಬಲ ಬೆಲೆಯನ್ನಾದರೂ ಘೋಷಣೆ ಮಾಡಬೇಕು. ಕಳೆದ ವರ್ಷ 850 ರೂಪಾಯಿಗಳ ಬೆಂಬಲ ಬೆಲೆಯನ್ನು ಮಾಡಿದ್ದರು. ಇಲ್ಲಿ ಕೃಷಿ ಸಚಿವರು ಇದ್ದಾರೆ. ಇವತ್ತಿನವರೆಗೆ ಇದರ ಬಗ್ಗೆ ಪ್ರಸ್ತಾಪವಿಲ್ಲ. ಏಕೆಂದರೆ, ಇವತ್ತು ಬರಗಾಲ ಹಾಗೂ ಅತಿವೃಷ್ಟಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಿದ್ದೀರಿ. ವರದಿ ಕಳುಹಿಸುವಾಗ 224 ವಿಧಾನಸಭಾ ಕ್ಷೇತ್ರಗಳಲ್ಲಿ ಏನಿದೆ ಎನ್ನುವುದರ ಚಿತ್ರೀಕರಣವನ್ನು ಸೇರಿಸಿ. ವಿರೋಧ ಪಕ್ಷದ ನಾಯಕರನ್ನೂ ಸಹ ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರನ್ನೂ ನೀವು ವಿಶ್ವಾಸಕ್ಕೆ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದರೆ ನಾವು ಒಪ್ಪಬಹುದಾಗಿತ್ತು. ಕೇಂದ್ರ ಸರ್ಕಾರಕ್ಕೆ ಸುಮಾರು 700 ಕೋಟಿ ರೂಪಾಯಿಗಳ

ಮನವಿ ಕೊಟ್ಟಿದ್ದೇವೆ ಎಂದು ತಾವು ಹೇಳಿದ್ದೀರಿ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಚರ್ಚೆ ಮಾಡಿದಾಗ ಬರಪರಿಹಾರ ಕಾರ್ಯಕ್ರಮಗಳಿಗೆ 394 ಕೋಟಿ ರೂಪಾಯಿಗಳು ಪ್ರವಾಹ ಪೀಡಿತ ಪರಿಹಾರ ಕಾರ್ಯಕ್ರಮಗಳಿಗೆ 317 ಕೋಟಿ ರೂಪಾಯಿಗಳು ಎಂದು ಹೇಳಿದಿರಿ. ರಾಜ್ಯದಲ್ಲಿ ಬೆಳೆ ನಷ್ಟ ಎಷ್ಟಾಗಿದೆ ಎಂದು ಹೇಳಬೇಕಲ್ಲವೇ? ಯಾವ ಯಾವ ಜಿಲ್ಲೆಗಳಲ್ಲಿ ಬೆಳೆ ನಷ್ಟ ಎಷ್ಟೆಷ್ಟಾಗಿದೆ? ಇದರಿಂದ ಎಷ್ಟು ರೈತರು ಸಂಕಷ್ಟಕ್ಕೆ ಒಳಗಾಗಿದ್ದರೆ, ಇದಕ್ಕೆ ಕಾರಣವೇನು? ಉದಾಹರಣೆಗೆ ಹೇಳುವುದಾದರೆ ನೀರಾವರಿ ಪ್ರದೇಶವಿಲ್ಲದೇ ಇರುವಂಥಾದ್ದು ಎಂದರೆ ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳು. ಇವು ಸಂಪೂರ್ಣವಾಗಿ ನೀರಾವರಿಯಿಲ್ಲದೇ ಇರುವ ಪ್ರದೇಶಗಳು. ಈಗ ಮಾನ್ಯ ಪಶುಸಂಗೋಪನೆ ಇಲಾಖೆಯ ಸಚಿವರು ಇಲ್ಲ. 2 ರೂಪಾಯಿಗಳ ಬೆಂಬಲ ಬೆಲೆಯನ್ನು ಹಾಲಿಗೆ ಕೊಟ್ಟಿದ್ದೀರಿ. ಇವತ್ತಿನವರೆಗೂ ಸಹ ಹಣ release ಮಾಡಿಲ್ಲ. ಸರ್ಕಾರಕ್ಕೆ ಹಣ release ಮಾಡುವುದಕ್ಕೆ ತೊಂದರೆ ಏನಾದರೂ ಇದೆಯೇ? ಒಂದು ಕಡೆಯಲ್ಲಿ ರೈತರಿಗೆ 2 ರೂಪಾಯಿಗಳ ಬೆಂಬಲ ಬೆಲೆ ಕೊಡುತ್ತೇವೆ ಎಂದು ಹೇಳುತ್ತೀರಿ. ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಹಾಲು ಉತ್ಪಾದನೆಯಾಗುತ್ತದೆ. ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ, ಇವೆರಡೂ ಕಡೆಗಳಿಂದ ಕನಿಷ್ಠ 40 ಲಕ್ಷ ಲೀಟರ್ ಹಾಲಿನಲ್ಲಿ 20 ಲಕ್ಷ ಲೀಟರ್ ಹಾಲು ಇಲ್ಲಿಗೇ ಸರಬರಾಜಾಗುತ್ತದೆ. ಎರಡು ತಿಂಗಳುಗಳಾದರೂ 2 ರೂಪಾಯಿಗಳ ಬೆಂಬಲ ಬೆಲೆ ಇವತ್ತಿನವರೆಗೂ release ಆಗಿಲ್ಲ. ರೈತ ಎರಡು ಲೀಟರ್ ಹಾಲನ್ನು ಮಾರಾಟ ಮಾಡುತ್ತಾನೋ ಅಥವಾ 5 ಲೀಟರ್ ಹಾಲನ್ನು ಮಾರಾಟ ಮಾಡುತ್ತಾನೋ ಗೊತಿಲ್ಲ. ಇದರಿಂದ ರೈತ ಒಂದು ವಾರಕ್ಕೆ ಜೀವನ ಮಾಡುವುದಕ್ಕೆ ಏನು ಮಾಡಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಏನಾದರೂ ತೊಂದರೆ ಇದೆಯೇ? ಈ ಭಾಗಗಳಲ್ಲಿ ಮಳೆಯೇ ಆಗಿಲ್ಲ. ಇವತ್ತು ಹೋಬಳಿ ಮಟ್ಟದಲ್ಲಿ ನೀವು rain gauge ಇಟ್ಟಿದ್ದೀರಿ. ಅದನ್ನು ಲೆಕ್ಕಾಚಾರ ಹಾಕಿದರೆ ನೀವು ಕಸಬಾ ಹೋಬಳಿ ತೆಗೆದುಕೊಳ್ಳಿ. ಕಸಬಾ ಹೋಬಳಿ ಬಿಟ್ಟು ಬಾಕಿ ಇರುವ ಹೋಬಳಿಗಳಲ್ಲಿ ಏನೇನು ಪರಿಸ್ಥಿತಿ ಇದೆ ಎನ್ನುವುದನ್ನು ಹೇಳಿ. ಏನು ಮಾನ್ಯ ಸಿದ್ದರಾಮಯ್ಯನವರು ಹಾಗೂ ಕೃಷಿ ಸಚಿವರು ಹೇಳಿದರು, ಅದೇ ರೀತಿಯಲ್ಲಿ ಪ್ರತಿ ಪಂಚಾಯಿತಿ ಲೆವೆಲ್‌ನಲ್ಲಿ ಇದನ್ನು ನೀವು ಮಾಡಬೇಕಾಗುತ್ತದೆ. ಇವತ್ತು rain gauge ಅನ್ನು

ಪ್ರತಿ ಪಂಚಾಯಿತಿಯಲ್ಲಿ ನೀವು ಇಡಬೇಕು. ಅದರ ಜೊತೆಗೆ ಬೆಳೆ ವಿಮೆಯನ್ನು ಪಂಚಾಯಿತಿ ಮಟ್ಟದಲ್ಲಿ ತರಬೇಕು. ಕೃಷಿ ಇಲಾಖೆ ಕಾರ್ಯದರ್ಶಿಗಳಿರಬಹುದು, ತಾವು ಇರಬಹುದು, ವಿರೋಧ ಪಕ್ಷದ ನಾಯಕರನ್ನೂ ಸಹ ಕರೆಯಿರಿ. LIC Insurance ಮಾಡುವವರನ್ನೂ ಸಹ ಕರೆಸಿ. ಅವರಿಗೆ ಯಾವ ರೀತಿಯ ಸಲಹೆಗಳನ್ನು ಕೊಡಬೇಕು ಎಂಬುದರ ಬಗ್ಗೆ ಸರ್ಕಾರದಿಂದ ಒಂದು ಕಾಂಕ್ರೀಟ್ proposal ಅನ್ನು ನೀವು ಕೊಡಿ. ಏಕೆಂದರೆ, ಕೇಂದ್ರ ಸರ್ಕಾರದವರು ಕೊಡುತ್ತಾರೋ ಅಥವಾ ಇಲ್ಲವೋ ಅದರ ಬಗ್ಗೆ ನನಗೆ ಗೊತ್ತಿಲ್ಲ. ನೀವು ಅದಕ್ಕೆ ಒತ್ತಾಯವನ್ನಾದರೂ ಕೂಡ ಮಾಡಬೇಕಲ್ಲವೇ? ಇವತ್ತು ಯಾವ್ಯಾವ ಜಿಲ್ಲೆಗಳಲ್ಲಿ ಬೆಳೆ ಹಾನಿಯಾಗಿದೆ, ಎಷ್ಟು ಬೆಳೆ ಇದೆ ಇದರ ಬಗ್ಗೆ ದಯಮಾಡಿ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು. ಆ ಬೆಳೆ ಹಾನಿಯಾಗಿರುವುದಕ್ಕೆ ರಾಜ್ಯ ಸರ್ಕಾರ ಏನು ಪರಿಹಾರ ಕೊಡುತ್ತದೆ ಎಂದು ಹೇಳಬೇಕು. ಏನಾದರೂ ಪ್ಯಾಕೇಜ್ ಕೊಡುತ್ತೀರಾ? ಇವತ್ತು 150 ಕೋಟಿ ರೂಪಾಯಿಗಳ ಹಾನಿ ಬರೀ ಹಾಸನ ಜಿಲ್ಲೆ ಒಂದರಲ್ಲಿಯೇ ಆಗಿದೆ. ಅದಕ್ಕೆ ಏನಾದರೂ ಪ್ಯಾಕೇಜ್ ಕೊಡುವುದು ಇದ್ದರೆ ದಯಮಾಡಿ ಹೇಳಿ. ಅಥವಾ ಕೇಂದ್ರ ಸರ್ಕಾರಕ್ಕೆ ಪ್ಯಾಕೇಜ್ ಕಳುಹಿಸಿಕೊಡುವುದು ಇದ್ದರೆ ಹೇಳಿ. ಮೆಕ್ಕೆಜೋಳಕ್ಕೆ ಸಂಬಂಧಿಸಿದಂತೆ, ಸುಮಾರು 17 ಲಕ್ಷ ಟನ್ ಮೆಕ್ಕೆಜೋಳ ಇವತ್ತು ಬೆಳೆಯಲಾಗಿದೆ. ಅದಕ್ಕೆ ಬೆಂಬಲ ಬೆಲೆಯನ್ನಾದರೂ ಕೊಡುತ್ತೀರಾ? ಮತ್ತೆ ರೈತರು ಈ ಬಗ್ಗೆಯೂ ಕಣ್ಣೀರು ಹಾಕುವಂಥ ಪರಿಸ್ಥಿತಿ ಬರುತ್ತದೆಯೇ? ಮೆಕ್ಕೆಜೋಳಕ್ಕೆ ಇಟ್ಟಿರುವ 850 ರೂಪಾಯಿಗಳ ಬೆಂಬಲ ಬೆಲೆಯನ್ನು ಕನಿಷ್ಟ 1200 ರೂಪಾಯಿಗಳಿಗೆ ಮಾಡಬೇಕು. ಇದನ್ನು ನಾನು ಕಂದಾಯ ಹಾಗೂ ಕೃಷಿ ಸಚಿವರ ಗಮನಕ್ಕೆ ತರುತ್ತೇನೆ. ಇವತ್ತಿನವರೆಗೆ ಬರಗಾಲದ ಬಗ್ಗೆ ಚರ್ಚೆಯಾಗಿದೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಸಲಹೆ ಕೊಟ್ಟಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಎಲ್ಲಾ ಪಕ್ಷದ ಸದಸ್ಯರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನೀವು 5 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದಿರಿ. 5 ನಿಮಿಷಗಳಲ್ಲೇ ನನ್ನ ಭಾಷಣವನ್ನು ಮುಗಿಸಿದ್ದೇನೆ.

ಅಧ್ಯಕ್ಷರು : ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ: ಏಕೆಂದರೆ, ಯಾವುದೇ ಆದೇಶ ಉಲ್ಲಂಘನೆಯಾಗಬಾರದು. ಏಕೆಂದರೆ, ಮಾನ್ಯ ಸಿದ್ದರಾಮಯ್ಯ ಹಾಗೂ

ಶ್ರೀನಿವಾಸ್ ಪ್ರಸಾದ್‌ರವರು ಒಂದು ಗಂಟೆಯ ಕಾಲಾವಕಾಶ ತೆಗೆದುಕೊಂಡು ಮಾತನಾಡಿದ್ದಾರೆ. ನಮ್ಮ ನಾಯಕರು ಮಾತನಾಡಲು ಕಾಲಾವಕಾಶ ತೆಗೆದುಕೊಳ್ಳಲಿ. ನನ್ನದು ಅಭ್ಯಂತರವೇನು ಇಲ್ಲ.

ಅಧ್ಯಕ್ಷರು: Within time ನಲ್ಲಿ ಮುಗಿಸಿದ್ದಕ್ಕೆ ವಿಶೇಷವಾದ ಧನ್ಯವಾದಗಳು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

3.30 PM

ಸದನವು ಪುನ: ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಆರಂಭಗೊಂಡಿತು.
ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಉಂಟಾಗಿರುವ ಭೀಕರ ಬರ ಹಾಗೂ ಅತಿವೃಷ್ಟಿಯಿಂದ ಜನ ಹಾಗೂ ಜಾನುವಾರುಗಳಿಗೆ ತೀವ್ರ ಸ್ವರೂಪದ ತೊಂದರೆಯುಂಟಾಗಿರುವ ಕುರಿತಂತೆ ನಿಯಮ 69ರಡಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ, ಟಿ.ಬಿ. ಜಯಚಂದ್ರ, ಸಿ.ಎಸ್.ನಾಡಗೌಡ, ಹೆಚ್.ಡಿ. ರೇವಣ್ಣ, ಬಂಡೆಪ್ಪ ಕಾಶೆಂಪೂರ್ ಹಾಗೂ ಇನ್ನಿತರ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರ ಜಿಲ್ಲೆಯಲ್ಲಿ ಮತ್ತು ಅವರ ಕ್ಷೇತ್ರದಲ್ಲಿ ಉಂಟಾಗಿರುವ ಅನೇಕ ವಿಚಾರಗಳನ್ನು ಈ ಸದನಕ್ಕೆ ತಮ್ಮ ಮೂಲಕ ತಿಳಿಸಿದ್ದಾರೆ. ಇವತ್ತು ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ, ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಟಿ.ಬಿ.ಜಯಚಂದ್ರರವರು ಮಾತನಾಡಿ, ಬರಗಾಲ ಬಂದಾಗ ಮಾತ್ರ ಸಬ್ ಕಮಿಟಿಗಳು ತುರ್ತಾಗಿ ಸೇರುತ್ತವೆ, ಘೋಷಣೆಯಾಗುತ್ತದೆಂದೂ, ಆನಂತರ, ಆ ಕುರಿತು ಕಾಳಜಿ ವಹಿಸುವುದಿಲ್ಲವೆಂದಿದ್ದಾರೆ. ಬಹುತೇಕ ಸದಸ್ಯರ ಕ್ಷೇತ್ರಗಳಲ್ಲಿ,

ಜಿಲ್ಲೆಗಳಲ್ಲಿ ನದಿಗಳು ಹರಿದು ಹೋಗುತ್ತಿದ್ದು, ನದಿಯಲ್ಲಿ ನೆರೆಯುಂಟಾದಾಗ ಹೆಚ್ಚಿನ ಪ್ರಮಾಣದ ನೀರು ಸಮುದ್ರಕ್ಕೆ ಹರಿದು ಹೋಗುವ ಬದಲು ಅಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿ, ತನ್ಮೂಲಕ ಅಂತರ್ಜಲದ ಮಟ್ಟ ಹೆಚ್ಚಿಸಬೇಕೆಂಬ ಅನೇಕ ರೀತಿಯ ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ.

ಇನ್ನು ಬಿತ್ತನೆಗೆ ಸಂಬಂಧಿಸಿದಂತೆ ನಮ್ಮ ಗುರಿ ಏನಿತ್ತು, 72 ಲಕ್ಷ ಹೆಕ್ಟೇರ್‌ಗಳ ಪೈಕಿ 67 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆಯಾಗಿದ್ದು, ಅದರಲ್ಲಿ ಸುಮಾರು 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಷ್ಟವುಂಟಾಗಿರುವುದಕ್ಕೆ ಸಂಬಂಧಿಸಿದಂತೆ ರಾಜ್ಯಕ್ಕೆ ಏನೇನು ಬೇಕೆಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸದ್ದೇವೆ. ಬರದ ಬಗ್ಗೆ ಮನವಿ ಪತ್ರ ಸಲ್ಲಿಸಿದ ನಂತರ, 20 ಜಿಲ್ಲೆಗಳ 86 ತಾಲ್ಲೂಕುಗಳನ್ನು 'ಬರಪೀಡಿತ ತಾಲ್ಲೂಕು'ಗಳೆಂದು ಘೋಷಿಸಿದ ಬಳಿಕ ಸತತವಾಗಿ ಉತ್ತಮ ಮಳೆ ಮತ್ತೆ ಪ್ರಾರಂಭಗೊಂಡಿತು. ಅದೇ ರೀತಿ ಆಗಸ್ಟ್ ತಿಂಗಳಿನಲ್ಲಿ ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದರಿಂದ, ಸ್ವಲ್ಪಮಟ್ಟಿಗಾದರೂ ಮೇವು ಮತ್ತು ಕುಡಿಯುವ ನೀರಿನ ವಿಚಾರದಲ್ಲಿ ಸುಧಾರಣೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಕೇಂದ್ರ ಸರ್ಕಾರದಿಂದ ಬಂದ 180 ಕೋಟಿ ರೂ. ನಿಮ್ಮ ಬಳಿ ಇದ್ದು, ನೀವು ಆ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳಿದರು. ಆದರೆ, ಇವತ್ತಿನವರೆಗೂ ಇನ್ನೂ 3 ಕೋಟಿ ಹೆಚ್ಚಿಗೆ, ನಮಗೆ ಕೇಂದ್ರ ಸರ್ಕಾರದಿಂದ ಏನು ಹಣ ಬಂದಿತ್ತು, ಅದರ ಜೊತೆಗೆ ರಾಜ್ಯದ ಪಾಲು ಏನಿತ್ತು, ಎಲ್ಲವನ್ನೂ ಸೇರಿಸಿ, ಒಟ್ಟಾರೆ ಎಲ್ಲಾ ಹಣವನ್ನೂ ಇವತ್ತು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಈ ವರ್ಷ ನಿರ್ದಿಷ್ಟವಾಗಿ 52 ಕೋಟಿ ರೂ. ಅಖಈ ನಲ್ಲಿ ಬಂದಿತ್ತು, 83 ಕೋಟಿ ರೂ.ಗಳು ಓಅಅಈ ನಲ್ಲಿ ಬಂದಿತ್ತು. ಅವೆಲ್ಲವನ್ನೂ ಬಿಡುಗಡೆ ಮಾಡಿದ್ದೇವೆ. ಅದರ ಜೊತೆಗೆ ನಮ್ಮ ಪಾಲನ್ನೂ ಬಿಡುಗಡೆ ಮಾಡಿದ್ದೇವೆ. ಒಟ್ಟಾರೆ ಇವತ್ತು ಎಲ್ಲಾ ದುಡ್ಡು ಕೊಟ್ಟು ಬರಗಾಲದ ವಿಚಾರದಲ್ಲಿ ರೈತರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗಬಾರದು, ಗೋಶಾಲೆಗಳನ್ನು ತೆರೆಯುವುದಾಗಿರಬಹುದು, ಎಲ್ಲೆಲ್ಲಿ ಅವಶ್ಯಕತೆಗಳಿವೆಯೋ, ಈ ಕುರಿತು ಸಾಕಷ್ಟು ಸದಸ್ಯರು ಪ್ರಸ್ತಾಪಿಸಿದರು. ನಾವು ಈ ಕುರಿತಂತೆ ಅಗತ್ಯವಿರುವ ಎಲ್ಲಾ ಸೂಚನೆಗಳನ್ನು ಕೊಟ್ಟು ಮೇವನ್ನು ಸಂಗ್ರಹಿಸುವುದಲ್ಲದೆ, ಕುಡಿಯುವ ನೀರಿನ ವ್ಯವಸ್ಥೆಗೂ ಆದ್ಯತೆ ಕೊಟ್ಟು ಕೆಲಸ ಮಾಡಬೇಕಾಗುತ್ತದೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಎಂಎಲ್‌ಎಗಳ ನೇತೃತ್ವದಲ್ಲಿ ಎಲ್ಲಿ ಟಾಸ್ಕ್‌ಫೋರ್ಸ್ ಕಮಿಟಿ ರಚಿಸಿದ್ದೀರೆಂದು ಪ್ರಶ್ನಿಸಿದರು. ಎಲ್ಲಾ ತಾಲ್ಲೂಕುಗಳಲ್ಲೂ, ಕೇತ್ರಗಳಲ್ಲೂ ಎಂಎಲ್‌ಎಗಳ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಗಳಿವೆ. ಸ್ವತ: ನನ್ನ ತಾಲ್ಲೂಕಿನಲ್ಲಿ ನಾನೇ ಹಣ ಕೊಟ್ಟಿದ್ದೇನೆ. ಹಣ ಬಂದಿರುವುದನ್ನು ಎಲ್ಲೆಲ್ಲಿ, ಯಾವುದಕ್ಕೆ ಕೊಡಬೇಕೆಂದು ಮಂಜೂರು ಮಾಡಿದ್ದೇವೋ, ಅನೇಕ ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಯಾರಿಗೂ ಕೂಡ ಇವತ್ತಿನವರೆಗೂ ಬರದ ಬಗ್ಗೆ ಮೀಟಿಂಗ್ ಮಾಡಿರುವುದು ಸ್ವತ: ನನಗೇ ಗೊತ್ತಿಲ್ಲ. ಈ ಕುರಿತು ಸರ್ಕಾರದಿಂದ ಆದೇಶ ಬಂದು ನೀವೆಲ್ಲರೂ ಮೀಟಿಂಗ್ ಮಾಡಿ, ಇಷ್ಟು ದುಡ್ಡು ಬಂದಿದೆ, ನಾವು ಇಷ್ಟು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿಲ್ಲ. ಆ ಸಮಿತಿಗೆ ಸಾಮಾನ್ಯವಾಗಿ ಎಂಎಲ್‌ಎಗಳು ಅಧ್ಯಕ್ಷರಾಗಿರುತ್ತಾರೆ, ತಹಸೀಲ್ದಾರ್‌ರವರು ಕಾರ್ಯದರ್ಶಿಗಳಾಗಿರುತ್ತಾರೆ, ಸಮಿತಿಗಳನ್ನು ರಚಿಸಿರುವ ಬಗ್ಗೆ ಹೊರಡಿಸಿರುವ ಆದೇಶ ನಮಗೆ ಒದಗಿಸಿಕೊಡಿ. ಅದರ ಬಗ್ಗೆ communication ಇಲ್ಲ. ನೀವು ಮಾಡಿದ್ದರೆ ಆರ್ಡರ್ ಕೊಡಿ.

ಶ್ರೀ ಜಿ. ಕರುಣಾಕರರೆಡ್ಡಿ: ಅದರ ಬಗ್ಗೆ ತಮಗೆ ಮಾಹಿತಿ ಇಲ್ಲವೆಂದರೆ, ಇವತ್ತೇ ಈ ಕುರಿತಂತೆ ಸೂಚನೆ ಕೊಡುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ನಾನು ತಮ್ಮ ಸಹಾಯಕ್ಕೆ ಬರುತ್ತೇನೆ. ನಮ್ಮ ಕಲ್ಪನೆ ಏನಿದೆಯೆಂದರೆ, ಹಿಂದೆ ಮಾಡಿರುವ ಆದೇಶವೇನಿದೆ, ಅದು ಇನ್ನೂ ಜಾರಿಯಲ್ಲಿದೆ ಎನ್ನುವ ಕಲ್ಪನೆ ತಮಗಿದೆ, ಆದರೆ, ಸರ್ಕಾರಗಳು ಬದಲಾವಣೆಗಳಾದಾಗ ಹೊಸ ಆದೇಶ ಕಳುಹಿಸಿಕೊಡಬೇಕಾಗುತ್ತದೆ. ಆ ಆದೇಶವನ್ನು ತಾವು ಇದುವರೆಗೂ ಮಾಡಿಲ್ಲ. ಹೀಗಾಗಿ, ಆ ಸಮಿತಿಗಳು ಕಾರ್ಯ ನಿರ್ವಹಿಸುತ್ತಿಲ್ಲ. ಇವತ್ತಿನವರೆಗೂ ಆ ಕುರಿತಂತೆ ಮಾಹಿತಿ ಇಲ್ಲ. ದಯವಿಟ್ಟು ತಾವು ಮಾಹಿತಿ ತರಿಸಿ ನೋಡಬಹುದು.

ಶ್ರೀ ಜಿ. ಕರುಣಾಕರರೆಡ್ಡಿ : ಕಮಿಟಿಗಳೇನಿದ್ದವು ಮತ್ತು ಸಿಸ್ಟಮ್ ಏನಿತ್ತು, ಶಾಸಕರು ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಸದಸ್ಯರಾಗಿರುವ ಸಮಿತಿಯು ಹಾಗೇ ಮುಂದುವರಿಯುತ್ತಿದೆ.

Sri Siddaramaiah: I am telling the truth. ನೀವು ಹೊಸದಾಗಿ ಆದೇಶ ಹೊರಡಿಸದಿದ್ದರೆ, ತಹಸೀಲ್ದಾರ್‌ಗಳು ಎಲ್ಲಿಯೂ ಒಂದು ಮೀಟಿಂಗ್

ಸಹ ಕರೆಯುವುದಿಲ್ಲ. ಅವರುಗಳಿಗೆ ಡಿ.ಸಿ.ಗಳಿಂದ ಯಾವುದೇ ನಿರ್ದೇಶನವಿಲ್ಲ. How can they call the meeting?

ಶ್ರೀ ಜಿ. ಕರುಣಾಕರರೆಡ್ಡಿ: ನಮ್ಮ ತಾಲ್ಲೂಕಿನಲ್ಲಿ ನಾನೇ ಮೀಟಿಂಗ್ ಕರೆದು ನಿರ್ದೇಶನ ನೀಡಿದ್ದೇನೆ.

ಶ್ರೀ ಸಿದ್ದರಾಮಯ್ಯ: ನೀವು ಕಂದಾಯ ಮಂತ್ರಿಗಳಾಗಿದ್ದು, ಮೀಟಿಂಗ್ ಕರೆದಿರಬಹುದು. What about other MLAs. ಅವರುಗಳನ್ನು ಕೇಳಿ. ನನಗೆ ಗೊತ್ತಿಲ್ಲ. I am also a Senior Member. ಈ ಕುರಿತು ಯಾವುದೇ ಆದೇಶ ಆಗಿಲ್ಲ. ಸುಮ್ಮನೆ ಏನೋ ಹೇಳಲು ಹೋಗಬೇಡಿ. ಬರಗಾಲ ಬಂದ ಬಳಿಕ ಒಂದು ಆದೇಶ ಹೊರಡಿಸಿದ್ದರೆ, ಅದನ್ನು ಒದಗಿಸಿಕೊಡಿ.

ಶ್ರೀ ಜಿ. ಕರುಣಾಕರರೆಡ್ಡಿ: ಈ ರೀತಿ ಗೊಂದಲಗಳಾಗಿದ್ದರೆ, ಖಂಡಿತವಾಗಿಯೂ ಈ ಕುರಿತಂತೆ ಒಂದು ಆದೇಶ ಹೊರಡಿಸಲು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಬರ ಪರಿಹಾರ ಸಮಿತಿಗಳೆಂದು ರಚಿಸುತ್ತಾರೆ.

ಶ್ರೀ ಜಿ. ಕರುಣಾಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮೂರು ದಿವಸಗಳ ಕಾಲ ಚರ್ಚೆಯಾಯಿತು. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾ, ಕಾಮಗಾರಿಗಳಾಗಿರಬಹುದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸುಮಾರು 400 ಕೋಟಿ ರೂ. ಖರ್ಚು ಮಾಡಿ ಇನ್ನು 2,000 ಕೋಟಿ ರೂ. ಖರ್ಚು ಮಾಡುವುದಕ್ಕೆ ನಾವು ಗುರಿ ಇಟ್ಟುಕೊಂಡು, ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿಗೆ ಒತ್ತು ನೀಡುವುದಾಗಿರುಬಹುದು, ಇವತ್ತು 50 ಕಿಲೋಮೀಟರ್ ರಸ್ತೆಯನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ನಿರ್ಮಿಸುವ ಮೂಲಕ ಇದರಿಂದಲೂ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ.

ಅದೇ ರೀತಿ ಇವತ್ತು ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ವಸ್ತುಗಳನ್ನು ಸರ್ಕಾರವೇ ಖರೀದಿಸುವ ವಿಚಾರ ಇರಬಹುದು. ಮುಖ್ಯವಾಗಿ, ರೈತರ ಕಿಸಾನ್ ಕ್ರೆಡಿಟ್ ಕಾರ್ಡ್. ಆ ಕಿಸಾನ್ ಕಾರ್ಡ್ ಇದ್ದರೆ ಯಾವುದೇ ಬ್ಯಾಂಕಿನಲ್ಲಿ ತಕ್ಷಣ 25 ಸಾವಿರ ರೂಪಾಯಿಯವರೆಗೆ ಸಾಲ ತೆಗೆದುಕೊಳ್ಳುವ ಅವಕಾಶ ಸಿಗುತ್ತದೆಂದು ಅದನ್ನು ಒಂದು ಆಂದೋಲನದ ರೀತಿಯಾಗಿ ತೆಗೆದುಕೊಂಡು ಪ್ರತಿಯೊಬ್ಬ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ನ್ನು ಒದಗಿಸುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಘೋಷಣೆ

ಮಾಡಿದ್ದಾರೆ. ಅದೇ ರೀತಿ, ಬೆಳೆ ವಿಮೆಯಲ್ಲಿಯೂ ಸಹ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ 50 ಪರ್ಸೆಂಟ್ ಹಣವನ್ನು ಸರ್ಕಾರ ಭರಿಸುತ್ತದೆಂದು ಹೇಳಿದ್ದಾರೆ. ಮಾನ್ಯ ಜಯಚಂದ್ರರವರು ಮಾತನಾಡುತ್ತಾ, ಸಬ್ ಕಮಿಟಿಯಲ್ಲಿ ನಿರಂತರವಾಗಿ ಯಾವ ರೀತಿಯಾಗಿ ಬರಗಾಲವನ್ನು ಶಾಶ್ವತವಾಗಿ ನಿಬಾಯಿಸಲು ಯೋಜನೆ ರೂಪಿಸಿದ್ದೀರಿ ಎಂದು ಕೇಳಿದರು. ನೀರಿನ ಸಂಗ್ರಹ, ಮಳೆ ನೀರು ನದಿಗಳಿಗೆ ಹೆಚ್ಚಾಗಿ ಹೋಗುತ್ತದೆ, ಅದನ್ನು ಸಂಗ್ರಹ ಮಾಡಬೇಕೆಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಅದಲ್ಲದೆ, ಬರಗಾಲದ ಬಗ್ಗೆ ಕೇಂದ್ರ ಸರ್ಕಾರಕ್ಕೇನು ಮೆಮೊರ್‍ಯಾಂಡಂನ್ನು ಕೊಟ್ಟಿದ್ದೇವೆ, ನೆರೆ ಮತ್ತು ಬರಗಾಲದ ಬಗ್ಗೆ ಅಧ್ಯಯನ ಮಾಡುವ ಸಲುವಾಗಿ ಕೇಂದ್ರದಿಂದ ತಂಡ ಬಂದು ಈಗಾಗಲೇ ಪರಿಶೀಲನೆ ಮಾಡಿಕೊಂಡು ಹೋಗಿದ್ದಾರೆ. ನಾವು ಅವರಿಗೆ ಕೊಟ್ಟಿರುವ ಮೆಮೊರ್‍ಯಾಡಂ ವಾಸ್ತವಿಕವಾಗಿದೆ. ಮಾನ್ಯ ಸಿದ್ದರಾಮಯ್ಯನವರು ಆ ಗೈಡ್‌ಲೈನ್ಸ್ ಓಬಿರಾಯನ ಕಾಲದ್ದಾಗಿದೆ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಪರಿಹಾರ ಕೊಡತಕ್ಕದ್ದು ಎಂದು ನಾನು ಹೇಳಿದ್ದು.

ಶ್ರೀ ಜಿ. ಕರುಣಾಕರರೆಡ್ಡಿ: ಕೇಂದ್ರ ಸರ್ಕಾರ ಕೊಟ್ಟಿರುವ ಆ ಗೈಡ್‌ಲೈನ್ಸ್ ಪ್ರಕಾರವೇ ನಾವು ಮೆಮೊರ್‍ಯಾಡಂ ಕೊಡಬೇಕಾಗುತ್ತದೆ. ವಾಸ್ತವಿಕವಾಗಿ ಹೆಚ್ಚು ನಷ್ಟವಾಗಿದ್ದರೂ ಅವರ ಗೈಡ್‌ಲೈನ್ಸ್ ಪ್ರಕಾರ ನಮಗೆ ಎಷ್ಟು ಬೇಕಾಗುತ್ತದೆ ಅಷ್ಟನ್ನು ಕೊಡಬೇಕಾಗುತ್ತದೆಂದು ನಾವು ಮನವಿ ಪತ್ರವನ್ನು ಕೊಟ್ಟಿದ್ದೇವೆ. ಆದಷ್ಟುಬೇಗ ಕೇಂದ್ರ ಸರ್ಕಾರದವರು ಸ್ಪಂದಿಸುತ್ತಾರೆಂದು ಭಾವಿಸುತ್ತೇವೆ. ಇವತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ 428 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಸಲುವಾಗಿ ಈ ವರ್ಷ 385 ಕೋಟಿ ಈ ರಾಜ್ಯದಲ್ಲಿ ಆದ್ಯತೆಯ ಮೇರೆಗೆ ಬಿಡುಗಡೆ ಮಾಡಿದ್ದೇವೆ. ಹಿಂದೆ ನಾವು ಏನು ಮಾಡಿದ್ದೇವೆ ಎಂಬ ಬಗ್ಗೆ ಹೇಳಬೇಡಿ, ಮುಂದೆ ಏನು ಮಾಡುತ್ತೀರಿ ಅದನ್ನು ಹೇಳಿ ಎಂದು ಹೇಳಿದ್ದಾರೆ. ಖಂಡಿತಾ ಆ ಸಲಹೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಏಕೆಂದರೆ ಈ ಹಿಂದೆ ನೀವು ಮಾಡಿಲ್ಲ. ನಾವು ಅದೇ ರೀತಿ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರ ಬಂದು 1 ವರ್ಷ 3 ತಿಂಗಳುಗಳಾಗಿದೆ. ತಾವು ನೋಡಬೇಕಾಗುತ್ತದೆ. ಸಾಕಷ್ಟು

ವರ್ಷಗಳ ಕಾಲ ಎರಡೂ ಪಕ್ಷದವರು ಅಧಿಕಾರ ನಡೆಸಿದ್ದೀರಿ. ಆದರೂ ತಾವು ಆ ಕೆಲಸವನ್ನು ಮಾಡುವುದಕ್ಕಾಗಿಲ್ಲವೆಂದು ಟೀಕೆ ಮಾಡುವುದಿಲ್ಲ. ಅದು ವಾಸ್ತವ ಸ್ಥಿತಿ ಎಲ್ಲರಿಗೂ ಗೊತ್ತಿದೆ. ಹಾಗೆಂದು ಮುಂದೆ ನಾವು ಸುಮ್ಮನೆ ಕೂರತಕ್ಕದ್ದಲ್ಲ. ಇದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕೈಗೊಳ್ಳಬೇಕು ಎಂಬುದು ಎಲ್ಲಾ ಸದಸ್ಯರುಗಳ ಕಾಳಜಿಯಾಗಿದೆ. ಈ ದೇಶದ ಬೆನ್ನೆಲುಬು ರೈತ ಎಂದು ನಾವೇನು ಹೇಳಿಕೊಳ್ಳುತ್ತೇವೆ ಆ ರೈತನನ್ನು ಉಳಿಸುವ ಪ್ರಯತ್ನವನ್ನು ನಾವೆಲ್ಲಾ ಮಾಡಬೇಕಾಗಿದೆ. ಇವತ್ತು ಏನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆಯಾಯಿತು ಅದರ ಬಗ್ಗೆ ಇನ್ನೂ ಅನೇಕ ಜನ ಸದಸ್ಯರುಗಳು ಮಾತನಾಡಬೇಕಾಗಿತ್ತು. ಆಗ ಇನ್ನೂ ಒಳ್ಳೆಯ ಸಲಹೆಗಳು ಬರುತ್ತಿದ್ದವೋ ಏನೋ ಗೊತ್ತಿಲ್ಲ. ಇವತ್ತು ಸಣ್ಣ ನೀರಾವರಿ, ಭಾರಿ ನೀರಾವರಿ ಇಲಾಖೆಗಳು ಮುಖ್ಯವಾಗಿ ನೀರಿನ ಕೆಲಸವನ್ನು ನೋಡಿಕೊಳ್ಳುವ ಇಲಾಖೆಗಳ ಜೊತೆ ಸಹ ನಾವು ಸಬ್ ಕಮಿಟಿ ಮಾಡಿದ್ದೇವೆ. ಒಂದೊಂದು ಸಬ್ ಕಮಿಟಿಯಲ್ಲಿ ಒಂದೊಂದು ಇಲಾಖೆಗಳವರನ್ನು ಕರೆದು ಚರ್ಚೆ ಮಾಡಿದ್ದೇವೆ. ಅವರು ಕೊಟ್ಟ ಸಲಹೆಯ ಪ್ರಕಾರ ನದಿ ನೀರನ್ನು ಕೆರೆಗಳಿಗೆ ತುಂಬಿಸುವ ಕೆಲಸವನ್ನು ಒಂದೊಂದು ವರ್ಷದಲ್ಲಿ ಎಷ್ಟು ಮಾಡಬಹುದು ಎಂಬ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ, ಅದೇ ರೀತಿ ಸಣ್ಣ ನೀರಾವರಿ ಇಲಾಖೆಯಲ್ಲೂ ಏನು ಮಾಡಬಹುದು ಎಂಬ ಬಗ್ಗೆ ಯೋಜನೆ ಮಾಡುತ್ತೇವೆ. ಮಾನ್ಯ ಸಿದ್ದರಾಮಯ್ಯನವರು ಇವತ್ತು ಸುಮಾರು 40 ಪರ್ಸೆಂಟ್ ಕೆರೆಗಳಿಗೆ ನೀರು ತುಂಬಿಲ್ಲ, ಬಾಕಿ ಕೆರೆಗಳಿಗೆ ನೀರೇ ಬಂದಿಲ್ಲವೆಂದು ಹೇಳಿದರು. ಅದೇ ರೀತಿ ನೆರೆಯಿಂದ 400 ಕೆರೆಗಳು ಒಡೆದುಹೋಗಿದೆಯೆಂದು ಹೇಳಿದರು. ಇವತ್ತು ಆ ಕೆರೆಕಟ್ಟೆಗಳೇನು ಒಡೆದುಹೋಗಿದೆ ಅದಕ್ಕೆ ಆದ್ಯತೆಯನ್ನು ಕೊಟ್ಟು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಇರಬಹುದು, ಅಥವಾ ಬೇರೆ ಯಾವುದೇ ಯೋಜನೆ ಇರಬಹುದು ಅದನ್ನು ಸರಿಮಾಡುತ್ತೇವೆ. ಅನಂತರ catchment ಏರಿಯಾವನ್ನು ಒತ್ತುವರಿ ಮಾಡಿದ್ದಾರೆಂದು ತಾವು ಹೇಳಿದಿರಿ. ನಾನು ಸಚಿವನಾದ ತಕ್ಷಣ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಈ ಕೆರೆಕಟ್ಟೆಗಳ ಒತ್ತುವರಿಯ ಬಗ್ಗೆ ತೀವ್ರವಾಗಿ ಕ್ರಮ ಕೈಗೊಂಡು ಅದನ್ನು ತೆರವು ಮಾಡಿಸಬೇಕೆಂದು ಹೇಳಿದ್ದೇನೆ. ಆ ಕೆಲಸವನ್ನು ನಾವು ಮಾಡಿಸಬೇಕಾಗುತ್ತದೆ. ಹಿಂದಿನ ರಾಜಮಹಾರಾಜರೆಲ್ಲಾ ಆವತ್ತೂ ಜನಸಂಖ್ಯೆಗೆ ಅನುಗುಣವಾಗಿ

ಕೆರೆಗಳನ್ನು ನಿರ್ಮಾಣ ಮಾಡಿ ನೀರು ಸಂಗ್ರಹಣೆ ಮಾಡುತ್ತಿದ್ದರು. ಇವತ್ತು ನಾವು ಒಂದು ಡ್ಯಾಂ ಕಟ್ಟಿದರೆ ನಮ್ಮ ಮೇಲಿರುವ ರಾಜ್ಯದವರು ಇನ್ನೊಂದು ಡ್ಯಾಂ ಕಟ್ಟುತ್ತಾರೆ. ಇವತ್ತು ಕೆರೆಗಳಿಗೆ ಬರುವ ನೀರಿಗೆ ಮೇಲುಗಡೆ ಒಂದು ಚೆಕ್‌ಡ್ಯಾಂ ಕಟ್ಟುತ್ತಾರೆ. ಆ ಚೆಕ್‌ಡ್ಯಾಂ ಮೇಲೆ ಇನ್ನೊಂದು ಚೆಕ್‌ಡ್ಯಾಂ. ಆ ರೀತಿ catchment ನಲ್ಲಿ ಏನು ನೀರು ಬರುತ್ತಿತ್ತು ಅದಕ್ಕೂ ಸ್ವಲ್ಪ ತೊಂದರೆ ಇದೆ. ಆದ್ದರಿಂದ ಯಾವ ರೀತಿಯಲ್ಲೇ ಆಗಲಿ, ನಾವು ಚೆಕ್‌ಡ್ಯಾಂ ಕಟ್ಟಬೇಕಾದರೆ ಯಾವ hight ನಲ್ಲಿ ಕಟ್ಟಬೇಕು, ಎಷ್ಟರಲ್ಲಿ ಮಾಡಬೇಕು, ಆ ಕೆರೆ ಮೊದಲು ಆ catchment ಏರಿಯವನ್ನೇ ನಂಬಿಕೊಂಡು ಇತ್ತೋ, ಆ ಕೆರೆಗೆ ನೀರು ಸಂಗ್ರಹಣೆ ಆಗುವ ರೀತಿಯಲ್ಲಿ ಇವತ್ತು ಚೆಕ್‌ಡ್ಯಾಂನ್ನು ನಿರ್ಮಾಣ ಮಾಡಬೇಕಾಗುತ್ತದೆ. ಅದರ ಬಗ್ಗೆ ಆ ಕಮಿಟಿಯಲ್ಲಿ ಚರ್ಚೆ ಮಾಡಿದ್ದೇವೆ. ಒಟ್ಟಿನಲ್ಲಿ ರೈತರ ಸಂಕಷ್ಟವನ್ನು ಕಡಿಮೆ ಮಾಡುವುದಕ್ಕೆ, ಅವರನ್ನು ಉದ್ಧಾರ ಮಾಡುವುದಕ್ಕೆ, ನೀರಿನ ಸಂಗ್ರಹಣೆ ಹೆಚ್ಚು ಮಾಡುವುದಕ್ಕೆ ಎಲ್ಲಾ ರೀತಿಯಲ್ಲಿ ಚರ್ಚೆ ಮಾಡಿ ಯಾವ ರೀತಿಯಲ್ಲಿ resultನ್ನು ತೆಗೆದುಕೊಂಡು, ಎಲ್ಲೆಲ್ಲೆ ಜಾರಿ ಮಾಡಬಹುದು, ಕನಿಷ್ಟ ಪೈಲೆಟ್ ಪ್ರಾಜೆಕ್ಟ್ ಆಗಿ ಎಲ್ಲೆಲ್ಲಿ ಜಾರಿ ಮಾಡಬಹುದು ಎಂಬುದನ್ನು ನೋಡುತ್ತೇವೆ. ಮುಖ್ಯವಾಗಿ ನಿಮ್ಮ ಜಿಲ್ಲೆಯಲ್ಲಿ ಮತ್ತು ಬಿಜಾಪುರದಲ್ಲಿ ಬಹಳಷ್ಟು ನದಿಗಳು ಹೋಗುತ್ತಿದೆ. ಅಲ್ಲಿ ಮೊದಲು ಮಾಡಿ ಅನಂತರ ಉಳಿದಂಥ ಜಿಲ್ಲೆಗಳಲ್ಲಿ ಕೂಡ ಯಾವ ರೀತಿ ಶಾಶ್ವತ ಪರಿಹಾರಕ್ಕೆ ಮಾಡಬಹುದು ಎನ್ನುವುದನ್ನು ಯೋಚನೆ ಮಾಡುತ್ತೇವೆ. ಅದೇ ರೀತಿಯಲ್ಲಿ, ಇವತ್ತು ಮಳೆ, ನೆರೆ ಬಂತು ಅನಂತರ ಬರ ಬಂತು. ಆ ಬರದಲ್ಲಿ ಏನು 10–12 ಲಕ್ಷ ಎಕರೆ ಬೆಳೆ ನಷ್ಟವಾಗಿತ್ತು ಅನಂತರ ಮತ್ತೆ ಉತ್ತಮವಾದ ಮಳೆ ಬಂದ ಮೇಲೆ ಸುಮಾರು 13 ಲಕ್ಷ ಎಕರೆಯಲ್ಲಿ ಮತ್ತೆ ಬಿತ್ತನೆಯನ್ನು ಮಾಡಿದ್ದಾರೆ. ಆದ್ದರಿಂದ ಮತ್ತೆ ಮಳೆ ಬಂದಿದ್ದಕ್ಕೆ ಒಳ್ಳೆಯ ಬೆಳೆ ಬರುತ್ತದೆ. ಸತತವಾಗಿ ಆಗುತ್ತಿರುವ ಮಳೆಯನ್ನು ನೋಡಿದರೆ ಒಳ್ಳೆಯ ಫಲ ಸಿಗಲಿ ಎಂದು ನಾವೂ ಕೂಡ ಭಾವಿಸೋಣ. ಬೀಜಗಳ ಬಗ್ಗೆ ಗೊಬ್ಬರದ ಬಗ್ಗೆ ಎಚ್ಚರ ವಹಿಸಬೇಕೆಂದು ಹೇಳಿದ್ದಾರೆ. ಬೀಜಗಳ ಬಗ್ಗೆ ಯಾವುದೇ ಕೊರತೆ ಇಲ್ಲ. ಗೊಬ್ಬರದ ಸರಬರಾಜಿನಲ್ಲೂ ಎಲ್ಲಾ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಕೆಲವು ಮಂದಿ ಸದಸ್ಯರುಗಳು ಕೃಷಿ ವಿಶ್ವವಿದ್ಯಾನಿಲಯಗಳು ಶಾಶ್ವತವಾಗಿ, ತುಮಕೂರಿನಲ್ಲಿ ನೀರಿನ ಸಮಸ್ಯೆ ಬಹಳಷ್ಟು ಇದೆ, ಅಲ್ಲಿ ಕೃಷಿ

ವಿಶ್ವವಿದ್ಯಾನಿಲಯದವರು ಬಂದು ಕಡಿಮೆ ನೀರಿನಲ್ಲಿ ಯಾವ ರೀತಿಯಾಗಿ ತೋಟಗಾರಿಕೆ ಮಾಡಬಹುದು ಎಂಬ ಬಗ್ಗೆ ಒಂದು ಕಿಟಬಿಟಿ ಮಾಡಬೇಕೆಂದು ಹೇಳಿದ್ದಾರೆ. ಒಳ್ಳೆಯ ಸಲಹೆಗಳಿವೆ. ಯಾರೇ ಸದಸ್ಯರುಗಳಾಗಲಿ ಇಂಥ ಒಳ್ಳೆಯ, ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಕರೆದು ಯಾವ ಯಾವ ಜಿಲ್ಲೆಯ ವಸ್ತುಸ್ಥಿತಿ ಯಾವ್ಯಾವ ರೀತಿ ಇದೆ, ನೀರಿನ ಸಂಗ್ರಹಣೆ ಎಷ್ಟಿದೆ, ನೀರಿನ ಕೊರತೆ ಎಷ್ಟಿದೆ, ಅಲ್ಲಿ ತೋಟಗಾರಿಕೆ ಬೆಳೆ ಮಾಡಬೇಕೋ, ಯಾವ ರೀತಿ ಬೆಳೆ ಮಾಡಬೇಕು, ಬೇರೆ ಯಾವ ಬೆಳೆ ಮಾಡಿದರೆ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಚರ್ಚೆ ಮಾಡಿ ಅದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡು ಅದನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುತ್ತದೆ. ಕೃಷಿ ಅಧಿಕಾರಿಗಳು ಬಹಳಷ್ಟು ಮಂದಿ ಹಳ್ಳಿಗಳಿಗೆ ಬರುತ್ತಿಲ್ಲವೆಂದು ಹೇಳಿದ್ದಾರೆ. ಅದನ್ನೂ ಮಾಧ್ಯಮಗಳ ಮೂಲಕ ಮತ್ತು ಇತರೆ ಮುಲಗಳ ಮೂಲಕ ಪ್ರಚಾರ ಕೊಡುತ್ತಿದ್ದೇವೆ. ಪ್ರತಿಯೊಂದು ಸರ್ಕಾರದಲ್ಲಿಯೂ, ಅದು ಯಾವುದೇ ಸರ್ಕಾರವಿರಲಿ, ಅಧಿಕಾರಿಗಳು ಆಯಾಯ ಸಂದರ್ಭದಲ್ಲಿ ಏನು ಮಾಡಬೇಕು, ಹೇಗೆ ಮಾಡಿದರೆ ಅನುಕೂಲವಾಗುತ್ತದೆ, ಯಾವ ರೀತಿ ಔಷಧಿ ಉಪಯೋಗಿಸಬೇಕೆಂದು ಸಲಹೆಗಳನ್ನು ಕೊಡುತ್ತಿರುತ್ತಾರೆ. ಆಗ ಪ್ರಾಕ್ಟಿಕಲ್ ಆಗಿ ಹಳ್ಳಿಗಳಿಗೆ ಆಯಾಯ ತಾಲ್ಲೂಕಿನ ಕೃಷಿ ಅಧಿಕಾರಿಗಳು ಭೇಟಿ ಕೊಟ್ಟು ಅಲ್ಲಿನ ವಸ್ತುಸ್ಥಿತಿಯ ಬಗ್ಗೆ ತಿಳಿದುಕೊಂಡು ಆ ಸಂದರ್ಭಕ್ಕೆ ತಕ್ಕಂತೆ ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಅದರ ಬಗ್ಗೆ ಸಹ ಕ್ರಮ ಜರುಗಿಸುತ್ತೇವೆ. ಟೆಲಿಮೆಟ್ರಿಕ್ ಮಳೆಮಾಪನಾ ಕೇಂದ್ರಗಳು. 300 Sq.k.m.ಗೆ ಒಂದೊಂದು ಕೇಂದ್ರಗಳಿದೆಯೆಂದು ತಾವು ಹೇಳಿದ್ದೀರಿ. ಆದರೆ ನಮ್ಮ ರಾಜ್ಯದಲ್ಲಿ ಒಟ್ಟಾರೆ 606 ಟೆಲಿಮೆಟ್ರಿಕ್ ಕೇಂದ್ರಗಳಿವೆ. ನಮ್ಮಲ್ಲಿ 747 ಹೋಬಳಿಗಳಿದ್ದರೆ ಅದರಲ್ಲಿ ಸುಮಾರು 606 ಟೆಲಿಮೆಟ್ರಿಕ್ ಮಳೆಮಾಪನಾ ಕೇಂದ್ರಗಳು ಇದ್ದಾವೆ. ಉಳಿದ ಕಡೆ ಸಹ, ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಉತ್ತರವನ್ನು ಕೊಡುವಾಗ ಪ್ರತೀ ಗ್ರಾಮ ಪಂಚಾಯಿತಿಯಲ್ಲೂ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ.

4.00 PM

ಆ ಬಗ್ಗೆ written reply ಇದೆ. ಅದರ ಬಗ್ಗೆ ನಾವು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ, ತೆಗೆದುಕೊಳ್ಳುತ್ತಿದ್ದೇವೆ. 5600 ಗ್ರಾಮ ಪಂಚಾಯಿತಿಗಳೇನಿವೆ, ಆ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ tele metric centers ಮಾಡಬೇಕೆಂಬುದು ನಮ್ಮ ಸರ್ಕಾರದ ತೀರ್ಮಾನವಾಗಿದೆ. ಅದು ಎಷ್ಟೇ ಕಷ್ಟ ಬರಲಿ, ಅದನ್ನು ಅಳವಡಿಸುತ್ತೇವೆ. ಅದಕ್ಕಾಗಿ programme ಅನ್ನು ಹಾಕಿಕೊಳ್ಳುತ್ತೇವೆ. ಆ ಬಗ್ಗೆ ಅವರ ಹತ್ತಿರ ಎಲ್ಲವನ್ನೂ ಮಾತನಾಡುತ್ತೇವೆ. ಒಂದು ವರ್ಷದಲ್ಲೇ ಎಲ್ಲವನ್ನೂ ಅಳವಡಿಸಬಹುದು ಎನ್ನುವುದಾದರೆ, ಒಂದು ವರ್ಷದಲ್ಲೇ ಎಲ್ಲವನ್ನೂ ಮಾಡೋಣ. ಆರು ತಿಂಗಳಿನಲ್ಲೇ ಮಾಡಬಹುದು, ನಮಗೆ ಕೊಟ್ಟರೆ ಮಾಡುತ್ತೇವೆ, ಎಲ್ಲಾ ಹಳ್ಳಿಗಳಲ್ಲಿ ಹೋಗಿ ಗ್ರಾಮ ಪಂಚಾಯಿತಿಗಳಲ್ಲಿ ಅದನ್ನು ಅಳಡಿಸುತ್ತೇವೆ ಎನ್ನುವುದಾದರೆ, ಆರು ತಿಂಗಳಿನಲ್ಲೇ ಮಾಡುತ್ತೇವೆ. ಒಟ್ಟಾರೆಯಾಗಿ ಹೇಳುವುದಾದರೆ, ಮುಂದಿನ ದಿನಗಳಲ್ಲಿ ಈ ಮಳೆ ಮಾಪನ ಆಧಾರ ಮಾಡಿಕೊಂಡು ಯಾರು crop insurance ಮಾಡಿಸುತ್ತಾರೋ, ಅವರಿಗೆಲ್ಲಾ ಇದರಿಂದ ಅನುಕೂಲವಾಗುತ್ತದೆ. ಆಮೇಲೆ ಇನ್ನೊಂದು ವಿಚಾರ, ಅದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡದೇ ಇರಬಹುದು. ಈಗ ಹೋಬಳಿ ಮಟ್ಟದಲ್ಲಿ ಏನೊಂದು ನಷ್ಟವನ್ನು assessment ಮಾಡುತ್ತಾರೋ, ಅದನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ತರಬೇಕೆಂದೂ ಕೂಡ ನಮ್ಮ ಸರ್ಕಾರದ ಚಿಂತನೆ ಇದೆ. ಈಗಾಗಲೇ ಅಧಿಕಾರಿಗಳಿಗೆ ಕೂಡ ಆ ಬಗ್ಗೆ ಸೂಚನೆ ನೀಡಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟಕ್ಕೆ ನಾವು ತೆಗೆದುಕೊಂಡು ಬಂದರೆ, ಹೆಚ್ಚಿನ ರೈತರಿಗೆ ಅನುಕೂಲವಾಗುತ್ತದೆ. ಹೋಬಳಿ ಎಂದರೆ ಅದರಲ್ಲಿ 20–30 ಹಳ್ಳಿಗಳಿರುತ್ತವೆ. ಅದರಲ್ಲಿ majority ನೋಡುತ್ತಾರೆ. ಅಂದರೆ ಆ ಹೋಬಳಿಯಲ್ಲಿ 20 ಹಳ್ಳಿಗಳಿದ್ದರೆ, 11 ಹಳ್ಳಿಗಳಲ್ಲಿ ನಿಮಗೆ ತೊಂದರೆಯಾಗಿದ್ದರೆ ಮಾತ್ರ declare ಮಾಡುತ್ತಾರೆ. ಆ ರೀತಿ ಮಾಡಿದಾರ ಇನ್ನುಳಿದ 9 ಹಳ್ಳಿಗಳವರಿಗೆ ತೊಂದರೆಯಾಗುತ್ತದೆ. ಗ್ರಾಮ ಪಂಚಾಯಿತಿ ಮಟ್ಟಕ್ಕೆ ಬಂದಾಗ ಅದು ಕಡಿಮೆ ಆಗುತ್ತದೆ. ಈಗಾಗಲೇ ನಮ್ಮ ರಾಜ್ಯದಲ್ಲಿ 1150 ಸಾಮಾನ್ಯ ಮಳೆ ಮಾಪನ ಕೇಂದ್ರಗಳೂ ಕೂಡ ಇವೆ. ಆದರೆ ಈ tele metric centre ಸ್ವಲ್ಪ ಉತ್ತಮವಾದುದು. ಆದ್ದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ tele metric ಮಳೆ ಮಾಪನ ಕೇಂದ್ರಗಳನ್ನು ಸ್ಥಾಪನೆ

ಮಾಡಲಿಕ್ಕೆ ಎಲ್ಲಾ ರೀತಿಯಲ್ಲೂ ಕ್ರಮ ಜರುಗಿಸುತ್ತೇವೆ. ಇನ್ನು 141 ಹೋಬಳಿಗಳಲ್ಲಿ ಇದನ್ನು ಮಾಡಿ ಬಿಟ್ಟರೆ, ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ಆ tele metric centers ಮಾಡಿದಂತಾಗುತ್ತದೆ. ಒಂದು ವೇಳೆ priorityಯಲ್ಲಿ ಒಂದೆರಡು ತಿಂಗಳಿನಲ್ಲಿ ಆಗುವುದಾದರೆ, ಈ 141 ಹೋಬಳಿಗಳಲ್ಲಿ ಮೊದಲು ಅಳವಡಿಸುತ್ತೇವೆ. ಇದಾದ ಮೇಲೆ ಈ 5600 ರಲ್ಲಿ balance 700 ಹೋದರೆ, ಇನ್ನುಳಿದ 4900 ಇರುತ್ತದೆ. ಆ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಅಳವಡಿಸಲಿಕ್ಕೆ ಎಲ್ಲಾ ರೀತಿಯಲ್ಲಿ ಕ್ರಮ ಜರುಗಿಸುತ್ತೇವೆ. ಅದಾದ ಮೇಲೆ ಇವತ್ತು. . . .

ಶ್ರೀ ಟಿ.ಬಿ. ಜಯಚಂದ್ರ:- 86 ತಾಲ್ಲೂಕುಗಳನ್ನು ಬರ ಎಂದು ನೀವು declare ಮಾಡಿದ್ದೀರಿ. ಆದರೆ Deputy Commissioners ಗೆ ಏನು message ಹೋಗಿದೆ ಎಂದರೆ, ಒಂದೊಂದು ತಾಲ್ಲೂಕಿನಲ್ಲಿ ಎರಡೆರಡು ಹೋಬಳಿಗಳನ್ನು ಮಾತ್ರ ಬರ ಎಂದು declare ಮಾಡಬೇಕು, ಅದನ್ನು ಬಿಟ್ಟರೆ ಅದೇ ತಾಲ್ಲೂಕಿನಲ್ಲಿ ಬೇರೆಯದಕ್ಕೆ ಅದು apply ಆಗುವುದಿಲ್ಲ ಎಂಬ message ಹೋಗಿದೆ. ಮೊದಲು ತಾಲ್ಲೂಕನ್ನು ಬರ ಎಂದು declare ಮಾಡತಕ್ಕದ್ದು ಮಾಡುತ್ತಿದ್ದರು. ಈಗ ಹೋಬಳಿವಾರು ಎಂದು ಹೊಸ ಸಂಪ್ರದಾಯ ಆಗಿ ಬಿಟ್ಟಿದೆ. ನಮ್ಮಲ್ಲಿ ನಮ್ಮ ಹೋಬಳಿ ಆಗಿದೆ, ನಮ್ಮ ಹೋಬಳಿ ಆಗಿಲ್ಲ ಎಂದು ದೊಡ್ಡ confusion ಆಗಿದೆ. ಇದು ಏಕೆ ಆಗಿಲ್ಲವೋ ನನಗೆ ಅರ್ಥವಾಗಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಕೇಂದ್ರದಿಂದ ಬಂದಂತಹ ಸಮಿತಿಯನ್ನೂ ಕೂಡ ನಾನು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ. ಹುಲಿಕುಂಟೆ ಹೋಬಳಿ ಎಂಬುದೊಂದು ಇದೆ. ಅಲ್ಲಿ ಮಳೆಯೇ ಇಲ್ಲ, ಬಹಳ ಕಷ್ಟದಲ್ಲಿದ್ದಾರೆ. ಆದರೆ ಮಳೆ ಮಾಪನದಲ್ಲಿ ಮಳೆ ಚೆನ್ನಾಗಿ ಆಗಿದೆ ಎಂದು ಇದೆ ಎಂದಿರುವುದರಿಂದ ಇದನ್ನು ಬಿಟ್ಟಿದ್ದಾರೆ. ಇದನ್ನು ಬಿಟ್ಟು ಎಲ್ಲಿ ಮಳೆ ಚೆನ್ನಾಗಿ ಆಗಿದೆಯೋ, ಅದನ್ನು ಮಾಡಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಯಾವತ್ತೂ ಕೂಡ ನೀವು ಬರೀ ಈ tele metric ಮತ್ತು ಮಾಪನಗಳನ್ನು ಅವಲಂಬಿಸುವುದರ ಮೇಲೆಯೇ ಬರ declare ಮಾಡಬೇಡಿ. ತಹಶೀಲ್ದಾರ್‌ರವರು ಇರುತ್ತಾರೆ, village accountants ಇರುತ್ತಾರೆ. ಅವರಿಂದ ಯಾವ್ಯಾವ ರೀತಿ ಬಿತ್ತನೆಯಾಗಿದೆ? ಯಾವ್ಯಾವ ರೀತಿ ಮಳೆ ಬಂದಿದೇ? ಎಂದು ವರದಿ ಪಡೆದು ಅದನ್ನೂ ಸಹ

ಆಧಾರವಾಗಿಟ್ಟುಕೊಂಡು drought ಎಂದು declare ಮಾಡಬೇಕು. ಬರೀ rain fall data ಒಂದನ್ನೇ ಇಟ್ಟುಕೊಂಡು ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರ ಕೇಳುತ್ತದೆ ಎನ್ನುವಂತಹ ಕಾರಣದಿಂದ ಅದೊಂದನ್ನೇ ಮಾನದಂಡವಾಗಿ ಇಟ್ಟುಕೊಳ್ಳಬಾರದು. ಅದಕ್ಕಾಗಿಯೇ ನಾನು ಮಾನದಂಡಗಳನ್ನು ಆಯಾ ರಾಜ್ಯಕ್ಕೆ ಆಯಾ ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳಿ ಎಂದು insist ಮಾಡಿದ್ದು. ದಯಮಾಡಿ ಆ ಬದಲಾವಣೆ ಮಾಡಿ, ಹೆಚ್ಚು ವ್ಯಾಪಕವಾಗಿ ತಾಲ್ಲೂಕುಗಳಿಗೆ ಇದನ್ನು declare ಆಗುವುದಕ್ಕೆ ಅವಕಾಶ ಮಾಡಿ.

ಶ್ರೀ ಜಿ. ಕರುಣಾಕರರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ಚೀನಾ ಪ್ರವಾಸಕ್ಕೆ ಹೋಗುವ ಮುಂಚೆ ತಮ್ಮನ್ನೆಲ್ಲಾ ಕರೆದು, ಈ ಸಲದ ಅಧಿವೇಶನದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದಿರಿ. ನಾನು ಆ ಬಗ್ಗೆ ಅವತ್ತೇ ತಮಗೆ clear ಮಾಡಿದೆ. ಹೋಬಳಿ ಅಲ್ಲ, ತಾಲ್ಲೂಕು as a unit ಆಗಿಯೇ ಬರ declare ಮಾಡಿದ್ದೇವೆ. ಅದು ಇಡೀ ತಾಲ್ಲೂಕಿಗೇ ಅನ್ವಯವಾಗುತ್ತದೆಂದು ನಾನು ಅವತ್ತು ಹೇಳಿದ್ದೆ. ಅದನ್ನೇ ಇವತ್ತೂ ಹೇಳುತ್ತಿದ್ದೇನೆ. ಅದರ ಬಗ್ಗೆ ಯಾವುದೇ ಗೊಂದಲವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಇಂಥಿಂಥ ಹೋಬಳಿಗಳಲ್ಲಿ ಬರಗಾಲವಿದೆ ಎಂದು ವರದಿ ಹೋಗಿದೆ. ಉದಾಹರಣೆಗೆ ನಮ್ಮ ಶಿರಾ ತಾಲ್ಲೂಕಿನಲ್ಲಿ ಎರಡು ಹೋಬಳಿ ಮಾತ್ರ ಎಂದು ಡಿ.ಸಿ.ಯಿಂದ ಹೋಗಿದೆ. ಅದನ್ನು withdraw ಮಾಡಿಕೊಳ್ಳಬೇಕು.

ಶ್ರೀ ಜಿ. ಕರುಣಾಕರರೆಡ್ಡಿ :– ಆ ರೀತಿ ಹೋಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :–' ಹೋಗಿದೆ.

ಶ್ರೀ ಜಿ. ಕರುಣಾಕರರೆಡ್ಡಿ :– ಆ ರೀತಿ ಏನಾದರೂ ಹೋಗಿದ್ದರೆ ನಾನು ಅದನ್ನು ತಾಲ್ಲೂಕು ಕೇಂದ್ರ ಎಂದು ಸರಿಪಡಿಸುತ್ತೇನೆ. ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುತ್ತಾ, ಗಂಜಿ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ವ್ಯತ್ಯಾಸ ಮಾಡುತ್ತಿದ್ದಾರೆಂದು ಹೇಳಿದರು. ಅವರು ಯಾವ ರೀತಿಯ ಭಾವನೆ ಇಟ್ಟುಕೊಂಡು ಹೇಳಿದರೋ ಗೊತ್ತಿಲ್ಲ. ಕೆಲವು ಗಂಜಿ ಕೇಂದ್ರಗಳಲ್ಲಿ ಸೇರಿಸುವುದಿಲ್ಲ, ಇನ್ನೊಂದು ಗಂಜಿ ಕೇಂದ್ರಗಳಿಗೆ ಹೋಗಿ ಎನ್ನುತ್ತಾರೆ. ಆ ರೀತಿಯ ಭೇದಭಾವ ಮಾಡುತ್ತಿದ್ದಾರೆಂದು ಅವರು

ಹೇಳಿದರು. ನಮ್ಮ ಸರ್ಕಾರಕ್ಕೆ ಆ ರೀತಿಯಲ್ಲಿ ಯಾವುದೇ ಒಂದು ಭೇದಭಾವನೆ ಇಲ್ಲ. ಅಧಿಕಾರಿಗಳು ಆ ರೀತಿ ಮಾಡುವುದಿಲ್ಲ. Particular ಆಗಿ ಏನಾದರೂ ಆಗಿದ್ದರೆ, ಖಂಡಿತವಾಗಿಯೂ ಅವರ ಮೇಲೆ ಕ್ರಮ ಜರುಗಿಸುತ್ತೇನೆ. ನೆರೆಯಿಂದ ತೊಂದರೆಯಾಗಿರುವವರಿಗೆ ಗಂಜಿ ಕೇಂದ್ರಗಳನ್ನು ಏನು ತೆರೆಯಲಾಗುತ್ತದೋ, ಭೇದಭಾವನೆ ಇಲ್ಲದೆ ಅಲ್ಲಿ ಎಲ್ಲರಿಗೂ ಸಮಾನವಾಗಿ ಗಂಜಿ ಅಥವಾ ಊಟ ಸಿಗುವ ಹಾಗೆ ವ್ಯವಸ್ಥೆ ಆಗಬೇಕಾಗುತ್ತದೆ. ಇನ್ನು guidelines ಬದಲಾವಣೆ ಮಾಡಬೇಕು, ಬಹಳಷ್ಟು ಕಡಿಮೆ ಇದೆ ಎಂದು ಸಾಕಷ್ಟು ಮಂದಿ ಸದಸ್ಯರು ಹೇಳಿದ್ದಾರೆ. ಆ ಮಾತನ್ನು ಹಿರಿಯ ಸದಸ್ಯರುಗಳೂ ಕೂಡ ಹೇಳಿದ್ದಾರೆ. ನಾನು ಈ ಮಾತನ್ನು ಹೇಳಿದರೆ, ಅದನ್ನು ರಾಜಕೀಯವೆಂದು ತಿಳಿದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಇವತ್ತು ರೈತರ ಮಗ, ಮಣ್ಣಿನ ಮಗ ಎಂದು ಘೋಷಣೆ ಮಾಡಿಕೊಂಡವರು, ಈ ದೇಶದ ಪ್ರಧಾನಿಯಾಗಿದ್ದರು. ಕನಿಷ್ಟ ಅವರ ಸಮಯದಲ್ಲಾಗಲಿ ಈ ರೈತರ ಬಗ್ಗೆ, ಈ crop pattern ಬಗ್ಗೆ guide linesನಲ್ಲಿ ಸ್ವಲ್ಪ ಬದಲಾವಣೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾನು ಭಾವಿಸುತ್ತೇನೆ.

[ಗೊಂದಲ]

ಶ್ರೀ ಹೆಚ್. ಡಿ. ರೇವಣ್ಣ : ಸಾರ್, ಒಂದು ನಿಮಿಷ ಯೀಲ್ಡ್ ಆಗಿ.

[ಗೊಂದಲ]

ಶ್ರೀ ಜಿ. ಕರುಣಾಕರ ರೆಡ್ಡಿ: ಇದರಿಂದ ಇಡೀ ದೇಶದ ರೈತರಿಗೆ ಅನುಕೂಲವಾಗುತ್ತಿತ್ತು. ದೇಶದ ಜನರಿಗೆ ಅನುಕೂಲವಾಗುತ್ತಿತ್ತು.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ: ಬೇಕಾದರೆ ಅವರ ಕಾಲದಲ್ಲಿ ಏನಾಯಿತು? ಇವರ ಕಾಲದಲ್ಲಿ ಏನಾಗಿದೆ? ಎಂಬ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ.

[ಗೊಂದಲ]

ಶ್ರೀ ಹೆಚ್. ಡಿ. ರೇವಣ್ಣ : NDA governmentನಲ್ಲಿ 5 ವರ್ಷ ಏನು ಮಾಡಿದರು? ಮಾನ್ಯ ದೇವೇಗೌಡರ 10 ತಿಂಗಳಿನಲ್ಲಿ ಏನು ಮಾಡಿದರು ಎಂಬ ಬಗ್ಗೆ ಚರ್ಚೆಯಾಗಲಿ.

[ಗೊಂದಲ]

ಉಪಾಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ಅವರು duplicate ಮಣ್ಣಿನ ಮಗ, ಇವರು original ಎಂಬ ಬಗ್ಗೆ ಆಮೇಲೆ ಚರ್ಚೆ ಮಾಡೋಣ.

[ಗೊಂದಲ]

ಉಪಾಧ್ಯಕ್ಷರು : ಅವರು ಉತ್ತರ ಹೇಳಲಿ. ದಯವಿಟ್ಟು ಕುಳಿತುಕೊಳ್ಳಿ Please.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ದಯವಿಟ್ಟು ಮಾನ್ಯ ಸಚಿವರು ಹೇಳಿರುವುದನ್ನು ಕಡತದಿಂದ ತೆಗೆಸಬೇಕು.

[ಗೊಂದಲ]

ಉಪಾಧ್ಯಕ್ಷರು : ಅವರು ಯಾರ ಹೆಸರನ್ನೂ ಹೇಳಲಿಲ್ಲ.

[ಗೊಂದಲ]

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಯಾರ ಹೆಸರನ್ನೂ ಹೇಳಲಿಲ್ಲ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾಜಿ ಪ್ರಧಾನಿ, ಮಣ್ಣಿನ ಮಗ ಎಂದರೆ ಯಾರು? ಅದು ನೀವೇ?

[ಗೊಂದಲ]

ಉಪಾಧ್ಯಕ್ಷರು : Please, ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಬಚ್ಚೇಗೌಡರು ಯಾರ ಹೆಸರನ್ನೂ ಹೇಳಲಿಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ 'ಮಾಜಿ ಪ್ರಧಾನಿ', 'ಮಣ್ಣಿನ ಮಗ' ಎಂದರೆ ಬಚ್ಚೇಗೌಡರೇ?

[ಗೊಂದಲ]

ಉಪಾಧ್ಯಕ್ಷರು : ಅವರು ಯಾರ ಹೆಸರನ್ನೂ ಹೇಳಲಿಲ್ಲ. ಹಾಗಾಗಿ ಆ ಪ್ರಶ್ನೆ ಉದ್ಭವಿಸುವುದಿಲ್ಲ. ನಿಯಮದ ಪ್ರಕಾರ ಹೆಸರನ್ನು ಹೇಳಿದ್ದರೆ ಖಂಡಿತವಾಗಿ ತೆಗೆಸಬಹುದಾಗಿತ್ತು. ಮಾನ್ಯ ಬಾಲಕೃಷ್ಣರವರೆ, ಅವರು ಯಾರ ಹೆಸರನ್ನೂ ಹೇಳಲಿಲ್ಲ, ದಯವಿಟ್ಟು ನೀವು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ಈ ರೀತಿ ಮಾತನಾಡುವುದು ನಿಮ್ಮ ಘನತೆಗೆ ಶೋಭೆ ತರುವುದಿಲ್ಲ.

[ಗೊಂದಲ]

ಉಪಾಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಅದನ್ನು ಕಡತದಿಂದ ತೆಗೆಸಿ ಹಾಕಿ.

[ಗೊಂದಲ]

ಉಪಾಧ್ಯಕ್ಷರು : ಅವರ ಯಾರ ಹೆಸರನ್ನೂ ಹೇಳಲಿಲ್ಲ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ : ಅವರು ಇಲ್ಲಿ ಉತ್ತರ ಕೊಡುವುದಕ್ಕೆ ಇಲ್ಲ.

[ಗೊಂದಲ]

ಉಪಾಧ್ಯಕ್ಷರು : ಅವರ ಯಾರ ಹೆಸರನ್ನೂ ಹೇಳಲಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯವಿಟ್ಟು ಕಡತದಿಂದ ತೆಗೆಸಿ ಹಾಕಬೇಕು.

ಉಪಾಧ್ಯಕ್ಷರು : ಆಯಿತು, ಆ ಬಗ್ಗೆ ಪರಿಶೀಲನೆ ಮಾಡೋಣ.

[ಗೊಂದಲ]

ಉಪಾಧ್ಯಕ್ಷರು : ಆ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ.

[ಗೊಂದಲ]

ಶ್ರೀ ಜಿ. ಕರುಣಾಕರರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನಾನು ಅವರ ಬಗ್ಗೆ ಹಗುರವಾಗಿ ಮಾತನಾಡಿಲ್ಲ.

[ಗೊಂದಲ]

ಉಪಾಧ್ಯಕ್ಷರು: ಆ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಇವತ್ತು ಒಬ್ಬ ರೈತ ಮೆಕ್ಕೆ ಜೋಳ ಬೆಳೆಯಬೇಕಾದರೆ 6500 ರೂ.ಗಳು ಆಗುತ್ತದೆ, ತೊಗರಿಯಾದರೆ 3450 ರೂ.ಗಳು, Groundnut ಆದರೆ 7500 ರೂ.ಗಳು,

ಸೂರ್ಯಕಾಂತಿಯಾದರೆ 6750 ರೂ.ಗಳು, ಸೋಯಾಬೀನ್ ಆದರೆ 7500 ರೂ.ಗಳಾಗುತ್ತದೆ. ಕೆಲವಕ್ಕೆ ಮಾತ್ರ ಅಂದಾಜು ಮಾಡಿ ನಾನು ಹೇಳಿದ್ದೇನೆ. ಅಂದರೆ ಈ ರೀತಿಯಾಗಿ ಇಷ್ಟೊಂದು ಜಾಸ್ತಿ ವೆಚ್ಚ ರೈತರಿಗೆ ಆಗುತ್ತಿದೆ. ನಾವು ಇನ್ನೇನು crop ತೆಗೆದುಕೊಳ್ಳಬೇಕು ಎನ್ನುವಾಗ ನೆರೆ ಬಂದಾಗ ಆ ಸಂದರ್ಭದಲ್ಲಿ ಅವನಿಗೆ ಇನ್ನೂ ಹೆಚ್ಚು ತೊಂದರೆಯಾಗುತ್ತದೆ. ರೈತ ಬಿತ್ತನೆ ಹಾಕಿರುತ್ತಾನೆ, ಆ stageನಲ್ಲಿ ಬರ ಬಣದಾಗ ರೈತನಿಗೆ ಬಿತ್ತನೆ cost, ಗೊಬ್ಬರ cost, ಕೂಲಿ ಖರ್ಚು ಎಲ್ಲಾ ಸೇರಿ ತೊಂದರೆಯಾಗುತ್ತದೆ. ಈ ತರಹ ಇದ್ದಾಗ ಅದನ್ನು ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನಾನು ಹೇಳಿದೆ. ಒಟ್ಟಾರೆಯಾಗಿ ಇವತ್ತು ಭಾರತ ಸರ್ಕಾರ ನಮ್ಮ ರಾಜ್ಯದ 20 ಜಿಲ್ಲೆಗಳನ್ನೂ ಕೂಡ ಸೇರಿಸಿಕೊಂಡು ದೇಶದ ಸುಮಾರು 278 ಜಿಲ್ಲೆಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದ್ದಾರೆ. ಅನೇಕ ಸದಸ್ಯರು ಸಲಹೆ/ ಸೂಚನೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಒಳ್ಳೆಯದು ಇದ್ದರೆ ಖಂಡಿತವಾಗಿಯೂ ಈ ಸರ್ಕಾರ ಅದನ್ನು ಸ್ವಾಗತ ಮಾಡುತ್ತದೆ.

ಅದರ ಅನುಷ್ಠಾನಕ್ಕೆ ನಿಷ್ಠೆಯಿಂದ ಆ ಉಪ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡುತ್ತೇನೆಂದು ತಮ್ಮ ಮೂಲಕ ಎಲ್ಲರಿಗೂ ತಿಳಿಯಬಯಸುತ್ತೇನೆ. ಮತ್ತೆ ಯಾವುದೇ ಒಂದು ಜಿಲ್ಲೆ ಅಥವಾ ತಾಲ್ಲೂಕಿನಲ್ಲಿ ಮೇವಿನ ಮತ್ತು ಕುಡಿಯುವ ನೀರಿನ ತೊಂದರೆ ಇದೆ ಎಂದು ತಾವು ನಿರ್ದಿಷ್ಟವಾಗಿ ಹೇಳಿದರೆ, ಖಂಡಿತಾ ಅದರ ಬಗ್ಗೆ ಕ್ರಮಜರುಗಿಸುತ್ತೇವೆ. ಯಾವುದೇ ಹಿಂದುಮುಂದೆ ನೋಡದೆ ಈಗಿರುವ ಹಣವನ್ನು ಖರ್ಚು ಮಾಡುತ್ತಾರೆ, ಅದೂ ಸಾಕಾಗುವುದಿಲ್ಲವೆಂದು ಜಿಲ್ಲಾಧಿಕಾರಿಗಳು ನಮ್ಮನ್ನು ಕೇಳಿದರೆ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಏಕೆಂದರೆ, ಮುಖ್ಯಮಂತ್ರಿಗಳು ಮತ್ತು ನಾವು ಮೊನ್ನೆ ವಿಡಿಯೋ ಕಾನ್ಫರೆನ್ಸ್ ಮಾಡಿದಾಗ, ಬಹುತೇಕ ಜಿಲ್ಲೆಗಳಲ್ಲಿ ಮೇವಿನ ಸಮಸ್ಯೆ ಇರುವುದು ಕಾಣಿಸಲಿಲ್ಲ, ಫಾಡರ್ ಬ್ಯಾಂಕ್ ಮಾಡಿದರೆ ಯಾವ ರೈತರು ತೆಗೆದುಕೊಳ್ಳುವುದಕ್ಕೆ ಬರುತ್ತಿಲ್ಲ, ಕೆಲವು ಕಡೆ ಗೋ ಶಾಲೆಗಳನ್ನು ಪ್ರಾರಂಭ ಮಾಡಿದ್ದರು, ಕೆಲವು ರೈತರು ಗೋಗಳನ್ನು ವಾಪಸ್ ತೆಗೆದುಕೊಂಡು ಹೋಗಿದ್ದಾರೆ, ಗೋ ಶಾಲೆಗಳನ್ನು ಮುಚ್ಚಿದ್ದಾರೆ. ತಾವು ಪ್ರವಾಸ ಮಾಡಿದಾಗ ಅವಶ್ಯಕತೆ ಇದೆ ಎಂದು ಕಂಡು ಬಂದು ತಿಳಿಸಿದರೆ ತಕ್ಷಣ ಸೂಚನೆ ಕೊಡುತ್ತೇವೆ. ಸರ್ಕಾರ ಈ ನಿಟ್ಟಿನಲ್ಲಿ ಬದ್ಧವಾಗಿದೆ. ಬಹುಶ: ಮತ್ತೊಮ್ಮೆ ಈ ಸೂಚನೆಯನ್ನು ಜಿಲ್ಲಾಧಿಕಾರಿಗಳಿಗೆ ಕೊಡುತ್ತೇನೆ. ಒಟ್ಟಾರೆ

ಸತತವಾಗಿ ಬರುತ್ತಿರುವ ಈ ನೆರೆ ಮತ್ತು ಬರಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಖಂಡಿತ ಕೆಲಸ ಮಾಡುತ್ತದೆಂದು ತಮ್ಮ ಮೂಲಕ ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ : 76 ತಾಲ್ಲೂಕುಗಳನ್ನು ಡಿಕ್ಲೇರ್ ಮಾಡಲಾಗಿದೆ, ನಮ್ಮ ಕೆಲವು ತಾಲ್ಲೂಕುಗಳು ಕೈಬಿಡಲಾಗಿದೆ, ಅವನ್ನು ಡಿಕ್ಲೇರ್ ಮಾಡುವುದಕ್ಕೆ ಏನು ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಕರಡಿ ಸಂಗಣ್ಣ : ಮಾನ್ಯ ಕಂದಾಯ ಮಂತ್ರಿಗಳು ಮೊದಲು ಬೆಳೆಹಾನಿಗೆ ಪರಿಹಾರವನ್ನು ಘೋಷಣೆ ಮಾಡಬೇಕು.

ಶ್ರೀ ಬಂಡೆಪ್ಪ ಕಾಶಂಪೂರ್ : ಬೆಳೆ ಹಾನಿಯಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾವು ನೋಡಿದ್ದೇವೆ, ಅವರಿಗೆ ಇವತ್ತು ಯಾವುದಾದರು ಒಂದು ಪರಿಹಾರ ಬೇಕಲ್ಲಾ?

ಶ್ರೀ ಜಿ. ಕರುಣಾಕರ ರೆಡ್ಡಿ: ಇವತ್ತು ಎಲ್ಲಾ ರೀತಿಯಲ್ಲಿ ಕೂಲಿ ಕೆಲಸ ಮಾಡುವುದಕ್ಕೆ ಬೆರಗ ಕಾರ್ಯಕ್ರಮವಿದೆ. ಅದಲ್ಲದೆ ಸರ್ಕಾರ ಹಲವಾರು ಕಾರ್ಯಕ್ರಮವಿದ್ದಾವೆ, ಅದರ ಪ್ರಯೋಜನ ಪಡೆಯಬಹುದು.

ಶ್ರೀ ಬಂಡೆಪ್ಪ ಕಾಶಂಪೂರ್ : ಜಮೀನು ಇಟ್ಟುಕೊಂಡಿರುವ ರೈತ ಹೋಗಿ ಕೂಲಿ ಮಾಡುವುದಕ್ಕಾಗುವುದಿಲ್ಲ, ಅವನು ಸಾಲ ಮಾಡಿಕೊಂಡಿದ್ದಾನೆ.

ಅಧ್ಯಕ್ಷರು : ನೀವು ಅವರಿಗೆ ಕೇಳಿದ್ದೀರಿ. ಈಗ ಅವರಿಗೆ ಉತ್ತರ ಹೇಳುವುದಕ್ಕಾದರೂ ಅವಕಾಶ ಮಾಡಿಕೊಡಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಕರುಣಾಕರ ರೆಡ್ಡಿ: ಕೆಲವು ಮಾನ್ಯ ಸದಸ್ಯರೇನು ನಮ್ಮ ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಬೇಕೆಂದು ಕೇಳಿದ್ದಾರೆ. ಆ ಬಗ್ಗೆ ಮುಂದು ನಮ್ಮ ಸಚಿವ ಸಂಪುಟದ ಉಪಸಮಿತಿ ಸೇರಿದಾಗ, ನಾಲ್ಕುವಾರ ಸತತ ಒಣ ಹವೆಯಾಗಿರುಬಹುದು, 20% ಮಳೆ ಕೊರತೆಯಾಗಿರಬಹುದು ಆ ಮಾನದಂಡಗಳಿಗೆ ಒಳಪಟ್ಟು ಬಂದರೆ ಖಂಡಿತ ತಮ್ಮ ತಾಲ್ಲೂಕುಗಳನ್ನು ಘೋಷಣೆ ಮಾಡಲಾಗುವುದು ಎನ್ನುವುದನ್ನು ತಿಳಿಸಬಯಸುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : ಪರಿಹಾರ ಪಡೆಯಲು ಕೇಂದ್ರ ಸರ್ಕಾರ ಸಿಆರ್ಎಫ್ ಗೆ ಕಳುಹಿಸಿಕೊಡಬೇಕು, ರೂ. 800 ಇರುವುದನ್ನು ಕನಿಷ್ಠ ರೂ. 5000 ಕೊಡಬೇಕೆಂದು ಕೇಳಲಾಗಿದೆ, ಅದಕ್ಕೆ ಕ್ಲಾರಿಫಿಕೇಷನ್ ಕಳುಹಿಸಿಲ್ಲ, 55,000 ಹೆಕ್ಟೇರ್‌ನಲ್ಲಿ ಆಲೂಗಡ್ಡೆ ಬೆಳೆ ಹಾಳಾಗಿ ಸುಮಾರು 150 ಕೋಟಿ ನಷ್ಟವಾಗಿದೆ. ಅದಕ್ಕೇನು ಪರಿಹಾರ ಕೊಡುತ್ತೀರೊ ಇಲ್ಲವೊ?

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ರೇವಣ್ಣನವರೇನು ವಿಚಾರಗಳನ್ನು ಹೇಳಿದ್ದಾರೆ, ಆ ಬಗ್ಗೆ ನಮಗೂ ಕೂಡ ಸಾಕಷ್ಟು ಕಾಳಜಿ ಇದೆ. ಬೇಕಾದರೆ ನಾವೆಲ್ಲರೂ ವಿರೋಧಪಕ್ಷದ ನಾಯಕರುಗಳು ಸೇರಿದಂತೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಗೈಡ್ ಲೈನ್ಸ್ ಚೆಂಜ್ ಮಾಡಬೇಕೆನ್ನುವ ಮನವಿಪತ್ರವನ್ನು ಖಂಡಿತಾ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಈಶ್ವರ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಸರ್ಕಾರ, ತಮ್ಮ ಉತ್ತರದಲ್ಲಿ 24 ಲಕ್ಷ ಹೆಕ್ಟೇರ್ ನಾಶವಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿ, ಮತ್ತೆ 13 ಲಕ್ಷ ಹೆಕ್ಟೇರ್‌ನಲ್ಲಿ ಮಳೆ ಬಿದ್ದಿದೆ, ಬಿತ್ತನೆಯಾಗಿದೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮುಂಗಾರು ವೈಫಲ್ಯವಾದ ಮೇಲೆ ಪುನಃ ಬಿತ್ತನೆಯಾದರೆ ಹಿಂಗಾರು ಮಾತ್ರ ಬರುವುದ, ಮುಂಗಾರು ಸಂಪೂರ್ಣವಾಗಿ ನಷ್ಟವಾಗಿದೆ. ಏನು ಸಂಪೂರ್ಣವಾಗಿ ಮುಂಗಾರು ಬೆಳೆ ನಾಶವಾಗಿದೆ ಅದಕ್ಕೇನು ಪರಿಹಾರವೆಂದು ಘೋಷಣೆ ಮಾಡಲಿಲ್ಲ. ಪರಿಹಾರ ಹಣ ಎಷ್ಟು ಕೊಡುತ್ತಿದ್ದಾರೆಂದು ತಕ್ಷಣ ಈ ಸದನದಲ್ಲಿ ಅವರು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಕೆಲವು ರೈತರು ಸಹಕಾರಿ ಬ್ಯಾಂಕ್ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡ 40% ರೈತರು ವಂಚಿತರಾಗಿದ್ದಾರೆ, ಅವರಿಗೆ ಸರಳ ರೀತಿಯಲ್ಲಿ ಸಾಲ ಕೊಡಿಸುವ ವ್ಯವಸ್ಥೆಯ ಬಗ್ಗೆ, ಸುಟ್ಟಂಥ ಟ್ರಾನ್ಸ್ ಫಾರ್ಮರ್‌ಗಳನ್ನು ತಕ್ಷಣ ರಿಪೇರಿ ಮಾಡಿಸಲು ರಿಪೇರಿ ಸೆಂಟರ್ ಪ್ರಾರಂಭ ಮಾಡುವ ಬಗ್ಗೆ, ಈಗೇನು ಮಳೆಯಾಗಿದೆ, ಬಿದ್ದ ನೀರನ್ನು ರೈತರು ಉಪಯೋಗ ಮಾಡಿಕೊಳ್ಳುವ ಅನುಕೂಲ ಮಾಡಿಕೊಡುವ ವ್ಯವಸ್ಥೆಯ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿಲ್ಲ, ಆ ಬಗ್ಗೆ ಹೇಳಬೇಕೆಂದು ನಾನು ಕೋರುತ್ತೇನೆ.

[ಈ ಸಂದರ್ಭದಲ್ಲಿ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, ಒಂದೊ ಎರಡೊ ಕ್ಲಾರಿಫಿಕೇಷನ್ ಇದ್ದರೆ ಕೇಳಿ, ಮಾತನಾಡಿದ್ದಕ್ಕೆ ಅವರು [ಮಂತ್ರಿ] ಈಗ ಉತ್ತರವನ್ನು ಕೊಟ್ಟಿರು, ಕ್ಲಾರಿಫಿಕೇಷನ್ನೆ ಮತ್ತೊಂದು ರೌಂಡ್ ಆಗುವುದು ಬೇಡ.

ಶ್ರೀ ಸಿದ್ದರಾಮಯ್ಯ: ಅವರು ಉತ್ತರವನ್ನೆ ಹೇಳಲಿಲ್ಲ, ನಾವು ಕ್ಲಾರಿಫಿಕೇಷನ್ ಏನು ಕೇಳುವುದು? ನಾವು ಕೇಳಿದ್ದಕ್ಕೆ ಯಾವುದಕ್ಕೂ ಸ್ಪಷ್ಟವಾದ ಉತ್ತರವನ್ನು ಅವರು ಹೇಳಲಿಲ್ಲ. ನಾವು ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ. ಅದಕ್ಕೋಸ್ಕರ ಇಷ್ಟು ಹಣ ಇಟ್ಟುಕೊಂಡಿದ್ದೇವೆ, ಕೇಂದ್ರ ಸರ್ಕಾರದಿಂದ ಇಷ್ಟು ಹಣ ಬಂದಿದೆ, ನಮ್ಮ ಸರ್ಕಾರ ಸಂಪನ್ಮೂಲಗಳಿಂದ ಇಷ್ಟು ಹಣ ಸಂಗ್ರಹ ಮಾಡಿದ್ದೇವೆ ಆ ರೀತಿಯಾಗಿ ಸ್ಪಷ್ಟವಾಗಿ ಯಾವುದನ್ನು ಹೇಳಲಿಲ್ಲ. ಈ ಟೆಲಿಮೆಟ್ರಿಕ್ ರೇನ್ ಗೇಜ್‌ಗಳನ್ನು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಒಂದೊಂದು ಕೊಡುತ್ತೇವೆಂದು ಹೇಳಿದ್ದೀರಿ. ಅವನ್ನು ಯಾವಾಗ ತೆಗೆದುಕೊಳ್ಳು ಪ್ರಾರಂಭ ಮಾಡಿದ್ದೀರಿ, ಎಲ್ಲಾ ಪಂಚಾಯತಿಗಳಿಗೆ ಒದಗಿಸುತ್ತೀರಾ? ಈಗ ತಪ್ಪು ಮಾಹಿತಿ ಇದೆ, ತಪ್ಪು ಮಾಹಿತಿಗಳಿಂದ ಕೆಲವು ಹೋಬಳಿ ಮತ್ತು ತಾಲ್ಲೂಕುಗಳೆಲ್ಲಾ ಬಿಟ್ಟು ಹೋಗಿದ್ದಾವೆ, ಅವನ್ನು ಸೇರಿಸಿಕೊಳ್ಳುತ್ತೇವೆ, ಅವಕ್ಕು ಪರಿಹಾರವನ್ನು ಕೊಡುತ್ತೇವೆ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ತೊಗರಿ ಬಹಳ ಕ್ಯಾಶ್ ಕ್ರಾಪ್, ಉದ್ದು, ಹೆಸರು ಎಲ್ಲಾ ನಷ್ಟವಾಗಿದೆ, ಹಿಂಗಾರಿನಲ್ಲಿ ತೊಗರಿ ಹಾಕುವುದಕ್ಕಾಗುವುದಿಲ್ಲ. ರಬಿ ಕ್ರಾಪ್‌ನಲ್ಲಿ ಈಗ ಸೂರ್ಯಕಾಂತಿ, ಜೋಳ ಮತ್ತು ಕಡಲೆಯನ್ನು ಹಾಕಬಹುದು. ನಾನು ಆಳಂದ ಕ್ಷೇತ್ರಕ್ಕೂ ಹೋಗಿದ್ದೆ, ಅಲ್ಲಿ ಮಳೆಯೇ ಬಿದ್ದಿಲ್ಲ, ಬಿತ್ತನೆಯೇ ಹಾಕಿಲ್ಲ, ಮೇವಿಗೂ ಬಹಳ ತೊಂದರೆ ಇದೆ. ಅದಕ್ಕೆ ನಾನು ಹೇಳುತ್ತೇನೆಂದರೆ, ನಾವು ಮೇವು ಬೆಳೆಯಲು ನಾವು ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳಬೇಕು. ಈಗ ಮುಂಗಾರು ಹೊರಟುಹೋದ ಮೇಲೆ ಮೇವು ಎಲ್ಲಿ ಸಿಗುತ್ತದೆ, ಹಿಂಗಾರಿನಲ್ಲಿ ಅಲ್ಪಸ್ವಲ್ಪ ಮೇವು ಬಂದರೆ ಸಿಗುತ್ತದೆ. ಈ ಸೆಪ್ಟೆಂಬರ್ ತಿಂಗಳಿನಿಂದ ಮುಂದಿನ ಮೇ-ಜೂನ್ ಹೊತ್ತಿಗೆ ಮೇವಿಗೆ ಏನು ಮಾಡುವುದೆಂದು ನಿಮ್ಮಲ್ಲಿ ಒಂದು ಆಕ್ಷನ್ ಪ್ಲಾನ್ ಇರಬೇಕು, ಅದಕ್ಕೆ ಏನು ಮಾಡಿದ್ದೀರಿ? ಈಗಾಗಲೇ ಮೊದಲನೆ ಕಂತಿನ ಹಣ ಸಿಆರ್‌ಎಫ್‌ನಲ್ಲಿ 50

ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆಮೇಲೆ ನಿಮ್ಮದು 17 ಕೋಟಿ 42 ಲಕ್ಷ ರೂಪಾಯಿಗಳು, ಒಟ್ಟು ಅದು 69 ಕೋಟಿ ರೂಪಾಯಿಗಳು. ಎನ್‌ಸಿಸಿಎಫ್‌ನಲ್ಲಿ 73 ಕೋಟಿ ಸೇರಿದಂತೆ ಈಗಾಗಲೆ ನಿಮ್ಮದು 17 ಕೋಟಿ ಸೇರಿ 150 ಕೋಟಿ ರೂಪಾಯಿಗಳು ಬಂದಿವೆ. ಅದು ಬಿಟ್ಟರೆ ಹೋದ ಸಾರಿ 131 ಕೋಟಿ, ಇದು 150 ಕೋಟಿ ಸೇರಿ 281 ಕೋಟಿಯಾಗುತ್ತದೆ. ಇದುವರೆಗೆ ನೀವು 115 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ, ನಿಮ್ಮ ಒಂದು ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ. ಕಳೆದ ವರ್ಷ 321 ಕೋಟಿ ಬಂದಿತ್ತು, 131 ಕೋಟಿ ಡಿಸಿಗಳ ಪಿಡಿ ಅಕೌಂಟ್‌ನಲ್ಲಿದೆ ಖರ್ಚೆ ಮಾಡಿಲ್ಲ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ಈ ಸಾರಿ ತೊಗರಿ, ಹಲಸಂದಿ, ಹೆಸರು, ಉದ್ದು ಸೇರಿದಂತೆ ಬೆಳೆ ಪೂರ್ತಿ ಹೋಗಿದೆ, ಅದನ್ನು ರಬಿ ಕ್ರಾಪ್‌ನಲ್ಲಿ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಆಗುವುದಿಲ್ಲ. ಹಿಂದೆಲ್ಲಾ ತೊಗರಿಬೆಳೆ ನಷ್ಟಕ್ಕೆ ಪರಿಹಾರವನ್ನು ಕೊಟ್ಟಿದ್ದಾರೆ, ಅದಕ್ಕೆ ಏನಾದರೂ ಮಾಡುವ ಬಗ್ಗೆ ನೀವು ಹೇಳಬೇಕು. ಬೆಳೆ ಅಸೆಸ್ ಮಾಡಿ ಎಷ್ಟು ಬೆಳೆ ನಷ್ಟವಾಗಿದೆ, ರೈತರಿಗೆ ಕೊಡಲು ಏನು ಮಾಡಬೇಕೆಂಬುದನ್ನೆಲ್ಲಾ ಹೇಳಬೇಕು ಇದನ್ನೆಲ್ಲಾ ಹೇಳದಿದ್ದರೆ, ಸರ್ಕಾರ ಕೆಲಸ ಮಾಡಬೇಕಲ್ಲ, ಅಧಿಕಾರಿಗಳ ರೀತಿ ಉತ್ತರವನ್ನು ಕೊಟ್ಟರಾಗುವುದಿಲ್ಲ. ಅವರಿಗೆ ಏನು ಮಾಡುತ್ತೀರಿ, ಕೂಲಿ ಕಾರ್ಮಿಕರಿಗೆ ಏನು ಮಾಡುತ್ತೀರಿ ಎಂಬ ಬಗ್ಗೆ ನಮ್ಮದು ಕ್ರಿಯಾ ಯೋಜನೆ ಸ್ಪಷ್ಟವಾಗಿ ಈ ರೀತಿ ಇದೆ ಎಂದು ಮಂತ್ರಿಗಳು ಹೇಳಲಿಲ್ಲ. ಆದುದರಿಂದ ನಿಮ್ಮ ಉತ್ತರದಿಂದ ಬರಗಾಲಕ್ಕೆ ತುತ್ತಾದ ಯಾವ ರೈತನಿಗೂ ಕೂಡ ಅನುಕೂಲವಾಗುವುದಿಲ್ಲ. As a matter of fact, ಎಲ್ಲೂ ಕೂಡ ಕೆಲಸ ಪ್ರಾರಂಭವಾಗಿಲ್ಲ, ಒಂದು ಕಡೆ ಒಂದು ಗೋಶಾಲೆ ಮಾಡಿಲ್ಲ, ಮಳೆ ಬಂತು ಮೇವು ಸಿಕ್ಕಿದೆ ಎಂದು ನೀವು ಇದ್ದುಬಿಟ್ಟಿದ್ದೀರಿ, ಬೀದರ್‌ನಲ್ಲಿ ಎಲ್ಲಿದೆ ಮೇವು? ಆಮೇಲೆ ನಾನು ಕೇಳಿದೆ ಕೆಲವು ಹಳ್ಳಿಗಳು ಪಟ್ಟಣಗಳು ಅಲ್ಲ ಹಳ್ಳಿಗಳೂ ಅಲ್ಲ ಅಲ್ಲಿಗೆ ಏನು ಮಾಡುತ್ತೀರಿ? NREGA ದುಡ್ಡು ಅಪ್ಲೈ ಆಗುವುದಿಲ್ಲ, ಅಲ್ಲಿ ನಿಮ್ಮ ದುಡ್ಡನ್ನು ಖರ್ಚು ಮಾಡಿ ಏನಾದರೂ ಮಾಡಬೇಕು, ನೀವೇನು ಮಾಡಿಲ್ಲ. ಈ ಸರ್ಕಾರ ರೈತರ ಬಗ್ಗೆ ಬರೀ ಮಾತನಾಡುತ್ತದೆಯೇ ಹೊರತು, ಬರಗಾಲವನ್ನು ಎದಿರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ, ರೈತರಿಗೆ ಯಾವುದೇ ರೀತಿಯ ಪರಿಹಾರವನ್ನು ಕೊಟ್ಟಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ [ಮುಖ್ಯಮಂತ್ರಿಗಳು]: ಬರಗಾಲದ ಪರಿಸ್ಥಿತಿಯಿಂದ ಎಲ್ಲಿ ಉದ್ಯೋಗ ಸಿಗುತ್ತಿಲ್ಲ, ಕುಡಿಯುವ ನೀರಿನ ಸಮಸ್ಯೆ ಇದೆ, ಈಗ ನಮ್ಮ ನಾರ್ಮ್ಸ್ ಪ್ರಕಾರ ಮನೆಗಳು ಬಿದ್ದು ಅನಾಹುತಗಳಾಗಿ ಆ ರೀತಿಯ ಪರಿಹಾರವನ್ನು ಕೊಟ್ಟಿಲ್ಲವೆಂದು ತಾವು ಹೇಳುತ್ತೀರಾ? ನೀವೇನು ಬೇಸರ ಮಾಡಿಕೊಳ್ಳದಿದ್ದರೆ, ಒಂದರೆಡು ದಿವಸ ನಾವು ನೀವು ಒಟ್ಟಿಗೆ ಹೋಗೋಣ, ಅಲ್ಲಿಯ ಡಿಸಿ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕಂದಾಯ ಮಂತ್ರಿಗಳ ಜೊತೆ ನಾನು ಬರುತ್ತೇನೆ, ಸ್ಥಳದಲ್ಲೇ ಹಣವನ್ನು ವಿತರಣೆ ಮಾಡಿ ಬರೋಣ. ಈಗಾಗಲೇ ನಾನು ಜಿಲ್ಲಾಧಿಕಾರಿಗಳೊಡನೆ ಈಗಾಗಲೇ ವಿಡಿಯೋ ಕಾನ್ಫರೆನ್ಸ್ ಮಾಡಿ ಮಾಹಿತಿಗಳನ್ನು ತೆಗೆದುಕೊಂಡಿದ್ದೇನೆ, ಇದಾದ ಮೇಲೆ ಭಗವಂತನ ದಯೆಯಿಂದ ಮಳೆಯಾಗಿದೆ. ಸ್ವಲ್ಪ ಬಿತ್ತನೆಗಳಾಗಿಲ್ಲ, ಈಗ ಏನು ಬಿತ್ತನೆ ಮಾಡುವುದಕ್ಕೆ ಸಾಧ್ಯ ಇದೆ ಅದನ್ನು ಬಿತ್ತನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಮ್ಮ ನಾರ್ಮ್ಸ್ ಪ್ರಕಾರ ಕೆಲವು ಪರಿಹಾರ ಕೊಡಬೇಕು, ಅದು ಸಿಕ್ಕಿಲ್ಲವೆಂದು ನೀವು ಹೇಳಿದರೆ ರೆವಿನ್ಯೂ ಮಂತ್ರಿಗಳ ಜೊತೆ ನಾನು ಬರುತ್ತೇನೆ. ಡಿ.ಸಿ. ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಕೂರಿಸಿಕೊಳ್ಳೋಣ ಎರಡೆರಡು ಗಂಟೆ ಒಂದೊಂದು ಕಡೆ ಚೆಕ್ ಮಾಡೋಣ. ಅಲ್ಲಿಯೇ ಸ್ಥಳದಲ್ಲಿ ಹಣವನ್ನು ಬಿಡುಗಡೆ ಮಾಡಿ ಅಧಿಕಾರಿಗಳಿಗೆ ಸರಿಯಾಗಿ ಸೂಚನೆ ಕೊಟ್ಟು ವಾರ್ನ್ ಮಾಡಿ ಬರೋಣ. ನಾವು ನೀವು ಒಟ್ಟಿಗೆ ಮೂರು ನಾಲ್ಕು ಜನ ಒಟ್ಟಿಗೆ ಒಂದು ಹೆಲಿಕಾಪ್ಟರ್ ಮಾಡಿಕೊಂಡೋ ಅಥವಾ ಬೈ ರೋಡೋ ಎಲ್ಲಾ ಕಡೆ ಟ್ರೈನ್ ಇದೆ ಹೋಗೋಣ. ನೀವು ಎಲ್ಲಿ ಹೇಳುತ್ತೀರೋ ನಾನು ಬರುತ್ತೇನೆ. ನಾನು ಹಾಗೂ ರೆವಿನ್ಯೂ ಮಂತ್ರಿಗಳು ಒಟ್ಟಾಗಿ ಬಂದು ಆ ಸಮಸ್ಯೆಯನ್ನು ಸ್ಥಳದಲ್ಲಿಯೇ ಬಗೆಹರಿಸಿ ಕೊಡುತ್ತೇನೆ. ಏಕೆಂದರೆ ಅಧಿಕಾರಿಗಳು over all war foot ನಲ್ಲಿ ಕೆಲಸ ಮಾಡುತ್ತಿರಬೇಕಾದರೆ, ಏನೂ ಆಗಿಲ್ಲ ಎನ್ನುವ ಮೆಸೇಜ್ ಹೋಗುವುದರ ಬದಲಿಗೆ ಪರಿಹಾರ ಹುಡುಕಬೇಕೆಂದು ನಿಮ್ಮ ಕಳಕಳಿ ಇದೆ. ನಾನು ನಿಮ್ಮ ಜೊತೆಗೆ ಬರುತ್ತೇನೆ, ಮಾಡೋಣ. ಸ್ಥಳದಲ್ಲಿಯೇ ಅದಕ್ಕೆ ಪರಿಹಾರ ಹುಡುಕೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, 11 ನೇ ತಾರೀಖು ಆಗಸ್ಟ್ ತಿಂಗಳಲ್ಲಿ ಬರಗಾಲ ಘೋಷಣೆ ಆಗಿದೆ. 11.08.09 ರಲ್ಲಿ ಘೋಷಣೆ ಆಗಿ ಇವತ್ತಿಗೆ ಈಗಾಗಲೇ ಒಂದು ತಿಂಗಳ ಮೇಲಾಯಿತು. ನಾವು ಒಂದು

ತಿಂಗಳಲ್ಲಿ ಏನು ಮಾಡಿದ್ದೇವೆಂದು ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಟೆಲಿ conference ಮಾಡಿರುವುದು ಒಂದು ಬಿಟ್ಟರೆ, ಯಾವ ಜಿಲ್ಲೆಗಳಿಗೆ ಹೋಗಿ ನೀವು ಮೀಟಿಂಗ್‌ಗಳನ್ನು ಮಾಡಿದ್ದೀರಿ, ಏನು ಮಾಹಿತಿ ತೆಗೆದುಕೊಂಡಿದ್ದೀರಿ? ಏನು ಕಾರ್ಯಕ್ರಮ ಮಾಡುವುದಕ್ಕೆ ಹೋಗಿದ್ದೀರಿ? ಅವರು ಎರಡು – ಮೂರು ಜಿಲ್ಲೆಗಳಿಗೆ ಹೋಗಿದ್ದಾರೆ, ನಮ್ಮ ಜಿಲ್ಲೆಗೆ ಬರುತ್ತೇನೆಂದು ಕ್ಯಾನ್ಸಲ್ ಮಾಡಿಬಿಟ್ಟರು. ನಮ್ಮ ಡಿವಿಷನ್‌ನಲ್ಲಿ ಎಲ್ಲಿಯೂ ಹೋಗಿಲ್ಲ. ಮಾಡಿರುವುದು ನಿಜ ಬರಲಿಲ್ಲ ಆ ಮೇಲಾದರೂ ಹೋಗಬಹುದಿತ್ತು. ನೀವು ಮೈಸೂರು ಡಿವಿಷನ್‌ಗೆ ಬರಲೇ ಇಲ್ಲ. ಚಾಮರಾಜನಗರ ನೋಡಿಕೊಳ್ಳುವವರು ಯಾರು? ಮೈಸೂರು ತಾಲ್ಲೂಕಿನಲ್ಲಿ ಬರಗಾಲ, ನಂಜನಗೂಡು ತಾಲ್ಲೂಕಿನಲ್ಲಿ ಬರಗಾಲ, ದೊಡ್ಡಕವಲಂದೆ ಹೋಬಳಿ, ನೀವು ಹೊಸದಾಗಿ ಅಡಿಷನಲ್ಲಾಗಿ ಸೇರಿಸುತ್ತೇನೆಂದು ಹೇಳಿದಿರಿ. ಅದು ಯಾವುದೂ ಹೇಳಲೇ ಇಲ್ಲ. ಏನೂ ಮಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ಜಿಲ್ಲೆಗೂ ಹೋಗಲಿಲ್ಲ. ಎಲ್ಲೂ ಹೋಗಿ ಡಿಸಿಗಳ conference ಮಾಡಲಿಲ್ಲ. ಕಮಿಟಿಗಳು ಮಾಡಲಿಲ್ಲ, ಇವತ್ತೇ ಕಮಿಟಿಗಳನ್ನು ಇಶ್ಯೂ ಮಾಡಿ. draught relief committee ಗಳಿಗೆ ಇವತ್ತೇ ಹೊಸದಾಗಿ ಆರ್ಡರ್ ಇಶ್ಯೂ ಮಾಡಿ. ಜಿಲ್ಲಾವಾರು ಎಷ್ಟೆಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ತಾಲ್ಲೂಕುವೈಸ್ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ಏನೂ ಮಾಡದೆ, ಮಾನ್ಯ ಮುಖ್ಯಮಂತ್ರಿಗಳು ಕರೆಯುತ್ತಾರೆ ಜೊತೆಯಲ್ಲಿ ಹೋಗೋಣ. ನನ್ನದೇನೂ ತಕರಾರು ಇಲ್ಲ. ಅಲ್ಲಿಗೆ ಹೋಗಿ ದುಡ್ಡು ಕೊಡುವುದಕ್ಕಾಗುತ್ತಾ? ಬೆಳೆ ಎಲ್ಲಾ ಅಸೆಸ್ ಮಾಡಿಸಿ. ತೊಗರಿ ಬೆಳೆ ನಷ್ಟ ಆಗಿದೆ. ಹಿಂದೆ ಎಲ್ಲಾ ತೊಗರಿ ಬೆಳೆ ನಷ್ಟ ಆಗಿದ್ದಕ್ಕೆ ಪರಿಹಾರ ಕೊಟ್ಟಿರುವಂತಹ ಉದಾಹರಣೆಗಳು ಇವೆ. ಬೇರೆ ಬೇರೆ ನಷ್ಟಗಳಿಗೆ ಪರಿಹಾರ ಕೊಟ್ಟಿರುವ ಉದಾಹರಣೆಗಳಿವೆ. ಕೊಡಿ. ನಾವು ರಿವೈಸ್ ಮಾಡಿ ಎಂದು ಹೇಳಿದೆವು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅವರಂತೂ ಕೊಡುವುದಿಲ್ಲ. ಕೊನೇ ಪಕ್ಷ ನೀವಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಕೊಡಿಸಿದರೆ ರೈತರಿಗೆ ಅನುಕೂಲವಾಗಲಿ. ಅವರು ಕೊಡುವುದಿಲ್ಲ, ನಾಳೆ ಕೇಳಿದರೆ ನೀವು ಬರಲಿಲ್ಲ, ನಾವು ಕೊಡಲಿಲ್ಲವೆಂದು ಹೇಳುತ್ತಾರೆ.

ನಾಳೆಯಿಂದ ನೀವು ಪ್ರೋಗ್ರಾಂ ಹಾಕಿಕೊಂಡು ಜೊತೆಯಲ್ಲಿ ಕರೆದುಕೊಂಡು ಹೋಗಿ.

ಶ್ರೀ ಸಿದ್ದರಾಮಯ್ಯ: ಅವರ ಜೊತೆ ಹೋದರೆ ಜನ ನಮ್ಮನ್ನೂ ನಂಬುವುದು ಬಿಟ್ಟು ಬಿಡುತ್ತಾರೆ. ಆ ಸರ್ಕಾರ ಬರ ನಿಭಾಯಿಸುವುದರಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ. ಇವತ್ತಿನವರೆಗೆ ಇವರು ಒಂದು ರೂಪಾಯಿ ಖರ್ಚು ಮಾಡಿಲ್ಲ. ಕಳೆದ ವರ್ಷವೂ ಖರ್ಚು ಮಾಡಿಲ್ಲ, ಈ ವರ್ಷವೂ ಖರ್ಚು ಮಾಡಿಲ್ಲ. ಮುಂದೆಯೂ ಖರ್ಚು ಮಾಡುವುದಕ್ಕೆ ಇವರು ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಒಂದು contingency programme ಇಲ್ಲ. ಈಗ ಏನು ಮಾಡಬೇಕೆಂಬ ಕಾರ್ಯಕ್ರಮ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಈ ಸರ್ಕಾರ ಬರೀ ಮಾತುಗಳು ಹೇಳುತ್ತಿದ್ದಾರೆ ಹೊರತು ರೈತರ ಪರವಾಗಿದ್ದೇವೆ, ಬಡವರ ಪರವಾಗಿದ್ದೇವೆ, ಹಳ್ಳಿಗಾಡಿನವರ ಪರವಾಗಿದ್ದೇವೆ, ಹಳ್ಳಿಗಳ ಬಗ್ಗೆಯೇ ನಾವು ಇರುವುದು, ಹಳ್ಳಿಗಳಿಗೋಸ್ಕರವೇ ನಾವು ಇರುವುದು, ರೈತರ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇವೆಂದರೆ, ರೈತರ ಹೊಟ್ಟೆಯೂ ತುಂಬುವುದಿಲ್ಲ, ರೈತರ ಕಷ್ಟವೂ ಪರಿಹಾರವಾಗುವುದಿಲ್ಲ, ನಾವು ಬಹಳ ಗದ್ಗದಿತವಾಗಿ ಮಾತನಾಡಿದರೂ ಅತ್ತು ಬಿಟ್ಟರೂ ಅವರಿಗೇನೂ ಸಿಗುವುದಿಲ್ಲ. ಆ ಕಾರಣದಿಂದ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಸರ್ಕಾರ ರೈತರ ಪರವಾಗಿಲ್ಲ, ಬರಗಾಲ ಎದುರಿಸುವುದರಲ್ಲಿ ಸಂಪೂರ್ಣ ಫೇಲಾಗಿದೆ. ನಾವು ಇಷ್ಟೆಲ್ಲಾ ಒತ್ತಾಯ ಮಾಡಿದರೂ ಕೂಡ, ಇವತ್ತಿಗೂ ಕೂಡ ಸರ್ಕಾರ ಕೆಲಸ ಮಾಡುವುದಕ್ಕೆ ತಯಾರಾಗಿಲ್ಲ. ಈ ಸರ್ಕಾರದ ಬೇಜವಾಬ್ದಾರಿತನವನ್ನು ರೈತ ವಿರೋಧಿ ನೀತಿಯನ್ನು ವಿರೋಧ ಮಾಡಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ವಾಕ್‌ಔಟ್ ಮಾಡಿ ಸದನದಿಂದ ಹೊರನಡೆದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಕೇವಲ ರಾಜಕಾರಣ ಮಾಡುವುದಕ್ಕೋಸ್ಕರ ನಾನು ಅವರಿಗೆ ಏನು ಹೇಳಿದೆ, ನಾನು ಒಬ್ಬ ಮುಖ್ಯಮಂತ್ರಿಯಾಗಿ ತಯಾರಾಗಿದ್ದೇನೆ, ಎಲ್ಲೆಲ್ಲಿ ಸವಲತ್ತುಗಳು ಸಿಕ್ಕಿಲ್ಲ ಹೇಳಿ ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆ, ಸ್ಥಳದಲ್ಲಿಯೇ ಪರಿಹಾರ ಕೊಡುವುದಕ್ಕೆ ನಾನು ಸಿದ್ದನಿದ್ದೇನೆ ಎಂದು ಹೇಳಿದೆ. ಆದರೆ ಕೇಂದ್ರ ಸರ್ಕಾರಕ್ಕೆ ಇದುವರೆಗೆ ಇಷ್ಟು ಮನವಿಗಳನ್ನು ಸಲ್ಲಿಸಿದರೂ ಸಹ study teem

ಬಂದರೂ ಇದುವರೆಗೆ ಒಂದು ರೂಪಾಯಿ ಹಣ ಬಿಡುಗಡೆ ಆಗಲಿಲ್ಲ. ಸಾಂಕೇತಿಕವಾಗಿ 100 ಕೋಟಿ ಚಿಲ್ಲರೆ ಒಂದು installment ಕೊಟ್ಟಿರುವುದು ಬಿಟ್ಟರೆ ನಮ್ಮ ಬೇಡಿಕೆಗಳಿಗೆ ಯಾವುದಕ್ಕೂ ಸ್ಪಂದಿಸಲಿಲ್ಲ. ಹೋದ ವರ್ಷವೂ ನಾವು ಕೇಳಿದೆವು. ಯಾವುದೇ ಹಣ ಬಿಡುಗಡೆ ಮಾಡಲಿಲ್ಲ. ಕೇಂದ್ರ ಸರ್ಕಾರ ಬರಗಾಲ ಹಾಗೂ ಅತಿವೃಷ್ಟಿ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿದೆ, ಹಣ ಬಿಡುಗಡೆ ಮಾಡುತ್ತಿಲ್ಲ, ಒಂದು ನಿಯೋಗ ಹೋಗಿ ಮನವಿ ಮಾಡೋಣ ಬನ್ನಿ ಎಂದರೆ ನಿಯೋಗದಲ್ಲಿ ಬರುವುದಕ್ಕೆ ಸಿದ್ಧರಿಲ್ಲ. ನಾವು ಎಲ್ಲಿಂದ ತರಬೇಕು, ನಮ್ಮ ಹಣಕಾಸಿನ ಇತಿಮಿತಿಯಲ್ಲಿ ಕೇಂದ್ರ ಸರ್ಕಾರ ಈ ಪರಿಹಾರ ಕೊಡುವುದಕ್ಕೋಸ್ಕರ ಏನು ನಿಗಧಿ ಮಾಡಿದೆ, ಇದುವರೆಗೆ ಏನು ನಡೆದುಕೊಂಡು ಬಂದಿದೆ ಅದರಂತೆ ನಾವು ಪರಿಹಾರ ಕೊಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದೇವೆ. ಬೀದರ್, ಗುಲ್ಬರ್ಗ ಹಾಗೂ ರಾಯಚೂರು ಆ ಭಾಗದ ಜಿಲ್ಲಾಧಿಕಾರಿಗಳ ಜೊತೆ ನಾನೇ ಬರದ ಬಗ್ಗೆ ಹಾಗೂ ಅತೀವೃಷ್ಟಿ ಬಗ್ಗೆ ಚರ್ಚೆ ಮಾಡಿದ್ದೇನೆ. ಮೊನ್ನೆ ಕಳೆದ ವಾರ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳ ಜೊತೆ ವೀಡಿಯೋ conference ಮಾಡಿದ್ದೇನೆ. ವಾಸ್ತವಿಕ ಸ್ಥಿತಿ ಏನಿದೆ ಎಂದು ತಿಳಿದುಕೊಂಡಿದ್ದೇನೆ. ಬಹಳ ಕಡೆ ಮಳೆ ಆಗಿದ್ದು ಬಿತ್ತನೆ ಕೆಲಸ ಪ್ರಾರಂಭ ಆಗುತ್ತಿದೆ ಎಂದು ಹೇಳಿದ್ದಾರೆ. ಬಹುತೇಕ ಕೆಲವು ಬೆರಳೆಣಿಸುವಷ್ಟು ಜಾಗ ಬಿಟ್ಟರೆ, ಇನ್ನು ಎಲ್ಲಾ ಕಡೆ ಕೂಲಿ ಕಾರ್ಮಿಕರಿಗೆ ಯಾವುದೇ ಸಮಸ್ಯೆ ಇಲ್ಲ. ಗುಳೆ ಹೋಗುವುದು ತಪ್ಪಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಉತ್ತಮವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳನ್ನು ನಾವು ಕೊಟ್ಟಿದ್ದೇವೆ. ಇಷ್ಟೆಲ್ಲಾ ಮೊದಲಬಾರಿಗೆ ಯಾವುದೇ complaint ಇಲ್ಲದೆ, ಜನ ನೆಮ್ಮದಿಯಿಂದ ಮುಂದೆ ಹೋಗುತ್ತಿರುವುದು, ತತಕ್ಷಣಕ್ಕೆ ಪರಿಹಾರಗಳನ್ನು ಕೊಟ್ಟು ಇಷ್ಟೆಲ್ಲಾ ಆದ ಮೇಲೂ ಸಹ ರಾಜಕಾರಣ ಮಾಡುವುದಕ್ಕೆ ವಾಕ್‌ಔಟ್ ಮಾಡುವುದಾದರೆ, ಯಾವುದೇ ಆರೋಪ ಮಾಡಬೇಕಾದರೆ ಪ್ರಾಮಾಣಿಕತೆ ಬೇಕು. ವಾಸ್ತವಿಕ ಸ್ಥಿತಿ ಏನಿದೆ ಎಂದು ಜನರಿಗೆ ಗೊತ್ತಿದೆ. ನಾನು ಈಗಲೂ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ, ಮಾನ್ಯ ರೇವಣ್ಣನವರಿಗೆ ವಿನಂತಿ ಮಾಡುತ್ತೇನೆ, ನೀವು ಇದರಲ್ಲಾದರೂ ಕಾಂಗ್ರೆಸ್ ಪಕ್ಷದ ಜೊತೆ ಕೈ ಜೋಡಿಸಬೇಡಿ. ಯಾವುದೇ ವಿಷಯ ಇದ್ದರೂ ಅನಗತ್ಯವಾಗಿ ಅವರು ರಾಜಕಾರಣ ಮಾಡುವುದು

ಏನಿದೆ, ಇದು ಯಾರಿಗೂ ಶೋಭೆ ತರುವಂಥದ್ದು ಅಲ್ಲ. ನಾವು ಕಾಂಗ್ರೆಸ್ ಮುಖಂಡರಿಂದ ಇದನ್ನು ನಿರೀಕ್ಷೆಯೂ ಮಾಡಿರಲಿಲ್ಲ. ಆಂಧ್ರದಲ್ಲಿ ಹಾಗಾಗಿದೆ, ತಮಿಳುನಾಡಿನಲ್ಲಿ ಹಾಗಾಗಿದೆ, ಆಂಧ್ರಪ್ರದೇಶ ಹಾಗೂ ತಮಿಳುನಾಡು ಜಿಲ್ಲೆಗಳಿಗೆ ಕೊಡುತ್ತಿರುವ ಸೌಲಭ್ಯ ನಮಗೇಕೆ ಕೊಡುತ್ತಿಲ್ಲ? ನಮಗೇಕೆ ಹಣ ಬರುತ್ತಿಲ್ಲ? ನಾವೇನು ಕೇಳುತ್ತಿಲ್ಲವಾ, ಮನವಿ ಅರ್ಪಿಸುತ್ತಿಲ್ಲವಾ? ಮಾನ್ಯ ಪ್ರಧಾನ ಮಂತ್ರಿಗಳಿಗೆ ಕಂಡಿಲ್ಲವಾ, ಕೇಂದ್ರ ಕೃಷಿ ಸಚಿವರಿಗೆ ಕಂಡಿಲ್ಲವಾ? ನಮ್ಮ ಸಮಸ್ಯೆಗಳನ್ನು ಹೇಳಿಲ್ಲವಾ? ಆದರೆ ಈ ರೀತಿ ಕೇಂದ್ರ ಸರ್ಕಾರ ಇವತ್ತೂ ಸಹ ಬರ ಹಾಗೂ ಅತೀವೃಷ್ಟಿ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿರುವುದರಿಂದ ಈ ಪರಿಸ್ಥಿತಿ ಬಂದಿದೆ. ಆದರೂ ಸಹ ಸರ್ಕಾರದ ಬೊಕ್ಕಸಕ್ಕೆ ಎಷ್ಟೇ ಭಾರ ಬಿದ್ದರೂ ಪರವಾಗಿಲ್ಲ, ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಕಾರ್ಮಿಕರಿಗೆ ಉದ್ಯೋಗವಕಾಶಗಳನ್ನು ಕೊಡುವುದು, ಕುಡಿಯುವ ನೀರಿನ ವ್ಯವಸ್ಥೆ ಮಾಡುವಂಥದ್ದು, ಗಂಜಿ ಕೇಂದ್ರಗಳ ಅಗತ್ಯ ಇರುವಂತಹ ಕಡೆ ಗಂಜಿ ಕೇಂದ್ರಗಳನ್ನು ತೆಗೆಯುವುದಕ್ಕೆ ನಾವು ಬದ್ಧರಾಗಿದ್ದೇವೆ. ಕಂದಾಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟ ಮೇಲೂ ಏನೂ ಉತ್ತರ ಕೊಟ್ಟಿಲ್ಲ, ಇದು ಶೂನ್ಯ ಎಂದು ವಾಕ್ ಔಟ್ ಮಾಡುವುದೇ ಅವರ ಉದ್ದೇಶ ಇದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಅದರೆ ನಾನು ಇವರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಇವರು ಕೇವಲ ರಾಜಕಾರಣ ಮಾಡುವುದಕ್ಕೆ ವಾಕ್ ಔಟ್ ಮಾಡುತ್ತಿದ್ದಾರೆ ಹೊರತು, ರೈತರ ಬಗ್ಗೆ ಇವರಿಗೆ ಕಳಕಳಿ ಇದ್ದಿದ್ದರೆ ಅವರು ಈ ರೀತಿ ವರ್ತನೆ ಮಾಡುತ್ತಿರಲಿಲ್ಲ. ಗುಲ್ಬರ್ಗದಲ್ಲಿ ಸಭೆ ಮಾಡಿದಾಗ 79% ಬರಗಾಲ ಇರುವ ಕಡೆ ಬಿತ್ತನೆ ಬೀಜಕ್ಕೆ ಸಬ್ಸಿಡಿ ಕೊಡುತ್ತಿದ್ದೇವೆ. ಇದನ್ನು ಯಾರು ಮಾಡಿದರು? NREGP ಅಡಿಯಲ್ಲಿ ಎಲ್ಲೆಲ್ಲಿ ಏನೇನು ಸಾಧ್ಯ ಇದೆಯೋ ಆ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಇವತ್ತಿನವರೆಗೆ 500 ಕೋಟಿ ಹಣ ಖರ್ಚು ಮಾಡಿದ್ದೇವೆ. NREGP work ಯಾರಿಗೆ ಆಗುತ್ತಿದೆ, ಬರಗಾಲದಲ್ಲಿ ಸಿಲುಕಿರುವಂತಹ ರೈತರಿಗೆ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುವುದಕ್ಕೋಸ್ಕರ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಹಿಂದೆ ಯಾವಾಗಲೂ, ಯಾವ ವರ್ಷದಲ್ಲಿಯೂ ಇಷ್ಟು ಹಣ ಖರ್ಚಾಗಿರಲಿಲ್ಲ. ಇವರು ನಮ್ಮಿಂದ ಮತ್ತೇನು ನಿರೀಕ್ಷೆ ಮಾಡುತ್ತಾರೆ?

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಬರಗಾಲಕ್ಕೆ ಪರಿಹಾರ ಇಲ್ಲ. ಹೊಸ ಸಾಲ ಮನ್ನ ಮಾಡುತ್ತಾರೆಂದು ನಾವು ಇದ್ದೆವು. ಈ ಸರ್ಕಾರ ಸುಳ್ಳಿನ ಸರ್ಕಾರ ಎಂದು ಹೇಳುತ್ತಿದ್ದೇನೆ.

(ಈ ಹಂತದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಸದಸ್ಯರು ವಾಕ್‌ಔಟ್ ಮಾಡಿ ಸದನದಿಂದ ಹೊರ ನಡೆದರು)

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ನಿಯಮ 191ರ ಪ್ರಕಾರ ನಾನು ತಮಗೆ ಒಂದು ನೋಟಿಸ್ ಕೊಟ್ಟಿದ್ದೇನೆ. ನಿನ್ನೆ ಒಂದು ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದೇನೆ. ನಾನು ಮತ್ತು ಸನ್ಮಾನ್ಯ ಬಚ್ಚೇಗೌಡರು ಇದಕ್ಕೆ ಸಹಿ ಹಾಕಿದ್ದೇವೆ. ಇಡೀ ಸದನಕ್ಕೆ ನಾಯಕರಾಗಿರುವವರ ಬಗ್ಗೆ ಇಡೀ ಸದನಕ್ಕೆ ಗೌರವ ಇದೆ, ಅದೇ ರೀತಿ ವಿರೋಧ ಪಕ್ಷದ ನಾಯಕರ ಬಗ್ಗೆ ನಮಗೂ ಗೌರವ ಇದೆ. ಈ ಸದನದ ಪ್ರತಿಯೊಬ್ಬರಿಗೂ ಅವರದೇ ಆದ ಗೌರವ ಇದೆ. ಈ ಸದನದ ನಾಯಕರ ಬಗ್ಗೆ ಒಂದು ರೀತಿ ಕೀಳು ಮಟ್ಟದ ಪದವನ್ನು ಪತ್ರಿಕಾ ಹೇಳಿಕೆಯಲ್ಲಿ ಉಪಯೋಗಿಸಿದ್ದಾರೆ. ನನ್ನ ಇತಿಹಾಸದಲ್ಲಿ ಆ ತರಹದ ಮಾತುಗಳು ನಮ್ಮ ಬಾಯಿಯಿಂದ ಬಂದಿಲ್ಲ. ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಒಬ್ಬರು ಈ ತರಹದ ಪದವನ್ನು ಬಳಕೆ ಮಾಡಿ ಇಡೀ ರಾಜ್ಯದ ಜನತೆಗೆ ಅಗೌರವ ತಂದಿದ್ದಾರೆ. ಸಂಸದೀಯ ನಡವಳಿಕೆ ಏನಿದೆ, ನಮ್ಮ ಭಾಷೆ ಏನಿದೆ ನಮ್ಮ ಭಾಷೆ ಎಲ್ಲಿಯವರೆಗೆ ಹೋಗುತ್ತದೆ ಎಂದು ನಾವು ಜನಸಾಮಾನ್ಯರಿಗೆ ಬಹಳ ಬುದ್ಧಿ ಹೇಳುತ್ತೇವೆ. ಹಾಗಿರಬೇಕು, ಜನಸಾಮಾನ್ಯರು ಹೀಗಿರಬೆಕು ನಮ್ಮ ಶಿಕ್ಷಣ ವ್ಯವಸ್ಥೆ ಹೀಗಿರಬೇಕು ಎಂದು ನಾವು ಎಲ್ಲರಿಗೂ ಬುದ್ಧಿ ಹೇಳುತ್ತೇವೆ.

(ಈ ಹಂತದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಸದಸ್ಯರು ಪುನ: ಸದಸಕ್ಕೆ ವಾಪಸ್ಸಾದರು)

4.30 PM

ಶ್ರೀ ಹೆಚ್. ಡಿ. ರೇವಣ್ಣ : ಒಂದು ನಿಮಿಷ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಆರ್. ಅಶೋಕ್ : ಈ ಸದನಕ್ಕೆ ಒಂದು ವಿಶೇಷವಾದ ಗೌರವವಿದೆ ಮತ್ತು ಸದನದ ಸಭಾಧ್ಯಕ್ಷರಾದ ತಮಗೆ ಒಂದು ವಿಶೇಷವಾದ ಗೌರವ ಇದೆ.

ಸಭಾನಾಯಕರಾದ ಮುಖ್ಯಮಂತ್ರಿಗಳ ಬಗ್ಗೆ ಒಬ್ಬ ಮಾಜಿ ಮುಖ್ಯಮಂತ್ರಿಗಳು ಬಳಸಿರುವ ಪದಗಳು ಸರಿಯಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅವರು ಕೂಡ ಸದನದ ಹೊರಗೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಿ. ಅದನ್ನು ಬಿಟ್ಟು ಸದನದಲ್ಲಿ ಆ ವಿಷಯ ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ. ಅವರೂ ಬೇಕಾದರೆ ಪ್ರೆಸ್ ಮೀಟ್ ಮಾಡಿ ಈ ಬಗ್ಗೆ ಚರ್ಚೆ ಮಾಡಲಿ. ಅವರಿಗೂ ಮೀಡಿಯಾ ಇರುವುದರಿಂದ ಒಂದು ಪ್ರೆಸ್ ಮೀಟ್ ಕರೆದು ಅವರೂ ಈ ಬಗ್ಗೆ ಹೇಳಿಕೊಳ್ಳಲಿ.

(ಗೊಂದಲ)

ಅಧ್ಯಕ್ಷರು: ನೋಡಿ ಅಶೋಕ್‌ರವರೆ, ಬಚ್ಚೇಗೌಡರೆ ತಾವುಗಳೇನು ಈಗ ಕಜಣುಣುಂಟಿ ಕೊಟ್ಟಿದ್ದೀರಿ. ಅದನ್ನು ನೋಡಿ ಪರಿಶೀಲನೆ ಮಾಡಿ ಈ ಬಗ್ಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯ ಕ್ಷರೆ, ಹೊರಗೆ ಅವರಿಗೂ ಕೂಡ ಮೀಡಿಯಾ ಇರುವುದರಿಂದ ಪ್ರೆಸ್ ಮಿಟ್ ಮಾಡಿ ಈ ಬಗ್ಗೆ ಹೇಳಿಕೊಳ್ಳಲಿ. ಅದಕ್ಕೇನೂ ನಮ್ಮ ತಕರಾರಿಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, * * * *

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಸ್ವಾಮಿ, ಎಲ್ಲಾ ಮಂತ್ರಿಗಳು ಕುಮಾರಸ್ವಾಮಿಯವರ ಬಗ್ಗೆ ಮಾತನಾಡಿರುವುದನ್ನು ನೀವು ನೋಡಿದ್ದೀರಿ. ಎಲ್ಲರೂ ಮಾತನಾಡಿದ್ದಾರೆ. ಅವರೇನೋ ಹೇಳಿರುವುದು ವಿಶೇಷವೇನಲ್ಲ.

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ತಾವೇನು ಪಿಟಿಶನ್ ಕೊಟ್ಟಿದ್ದೀರಿ, ಅದನ್ನು ನೋಡಿ ಅದರ ಬಗ್ಗೆ ನಿರ್ಣಯವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ತಾವೇನು ಪಿಟಿಶನ್ ಕೊಟ್ಟಿದ್ದೀರಿ ಅದನ್ನು ನೋಡಿಕೊಂಡು I will take decision. Decision ತೆಗೆದುಕೊಂಡು ಅದರ ಬಗ್ಗೆ ನಿರ್ಣಯವನ್ನು ನಾನು ಕೊಡುತ್ತೇನೆ. ಈಗ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಅಧ್ಯಕ್ಷರು ಹೇಳಿದರೂ ಕೂಡ ಮತ್ತೆ ಮತ್ತೆ ಎದ್ದು ನಿಂತುಕೊಂಡು ಮಾತನಾಡಬಾರದು ಎಂಬುದು ಅವರು ತಿಳಿದುಕೊಳ್ಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ರೀ, ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ನಮ್ಮ ನಾಯಕರು.

ಶ್ರೀ ಹೆಚ್. ಸಿ. ಬಾಲಕೃಷ್ಣ : ರೀ. ಸ್ವಾಮಿ, ಸದನದಲ್ಲಿ ಇಲ್ಲದೇ ಇರುವವರ ಬಗ್ಗೆ ಮಾತನಾಡುತ್ತಿದ್ದೀರಲ್ಲ. ಅವರಿಗೆ ನೀವು ನೋಟಿಸ್ ಕೊಟ್ಟಿದ್ದೀರ? ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದರೂ ಕೂಡ ಮತ್ತೆ ಮತ್ತೆ ಎದ್ದು ನಿಂತು ಮಾತನಾಡುತ್ತೀದ್ದಾರಲ್ಲ. ಇದು ಸರಿಯೇ?

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, ತಾವು ಕುಳಿತುಕೊಳ್ಳಿ. ನೀವು ಕೊಟ್ಟಿರುವ ಪಿಟಿಶನ್ ಪರಿಶೀಲಿಸಿ I will take decision.

ಶ್ರೀ ಬಿ. ಎನ್. ಬಚ್ಚೇಗೌಡ : ಒಬ್ಬ ಮುಖ್ಯಮಂತ್ರಿ ಬಗ್ಗೆ ಈ ರೀತಿಯ ಅವಹೇಳನಕಾರಿಯಾದ ಮಾತನಾಡಿರುವ ನಿಮ್ಮವರಿಗೆ ನಾಚಿಕೆಯಾಗಬೇಕು.

ಶ್ರೀ ಹೆಚ್. ಸಿ. ಬಾಲಕೃಷ್ಣ: ನಾನು ನಿಮ್ಮದೆಲ್ಲವನ್ನೂ ನೋಡಿದ್ದೇನೆ, ಸುಮ್ಮನೆ ಕುಳಿತುಕೊಳ್ಳಿ. ನಿಮಗೆ ನಾಚಿಕೆಯಾಗಬೇಕು. ನೀವು ಹೊರಗಡೆ ಮಾತನಾಡಿಲ್ಲವೇನ್ರಿ, ನೀವು ಹೊರಗಡೆ ಮಾತನಾಡಿಲ್ಲವಾ? ಎಷ್ಟು ಮಾತನಾಡಿದ್ದೀರಿ ಹೊರಗಡೆ ನೀವು.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಬಚ್ಚೇಗೌಡರೆ, ಪ್ಲೀಸ್, ದಯವಿಟ್ಟು ಕುಳಿತುಕೊಳ್ಳಿ. ತಾವೇನು ಪಿಟಿಶನ್ ಕೊಟ್ಟಿದ್ದೀರಿ, ಅದನ್ನು ನೋಡಿ I will take decision. ನಾನು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ. ಆಮೇಲೆ ಡಿಸ್‌ಕಶನ್ ಮಾಡುವ ಅವಶ್ಯಕತೆ ಕಂಡುಬಂದರೆ ಅದರ ಡಿಸ್‌ಕಶನ್ ಮಾಡಲು ಅವಕಾಶ ಕೊಡುತ್ತೇನೆ. ಏಕೆಂದರೆ ಇವತ್ತು ನೀವು ಪಿಟಿಶನ್ ಕೊಟ್ಟಿದ್ದೀರಿ. I will take decision. ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಸಿದ್ದರಾಮಯ್ಯನವರು ಒಮ್ಮೆ ಹಂದಿಜ್ವರ ಬಂದಿದೆಯೆಂದು ಹೇಳಿದ್ದರೆ ಇವರು ಸಿದ್ದರಾಮಯ್ಯನವರಿಗೇ ಹಂದಿಜ್ವರ ಬರಲಿ ಎಂದು ಹೇಳಿದ್ದಾರೆ. ನೋಡಿ ಇವರೆಲ್ಲರೂ ಸುಸಂಸ್ಕೃತರೆ. ನಾವೇನು ಸುಸಂಸ್ಕೃತರಲ್ಲವೆ. ಇಂಥ ಮಾತು

ಆಡಿರುವ ಇವರು ಮಾತ್ರ ಸುಸಂಸ್ಕೃತರೆ? ಏನು, ಇವರೆಲ್ಲ ಮಾತನಾಡುವುದೆಲ್ಲವೂ ಸಂಸ್ಕೃತದಲ್ಲೇ ಬಿಡಿ. ನಾವೆಲ್ಲ ಇವರಿಗೆ ಸರಿಯಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ನೀವು ಇಂಥ ಪದ ಬಳಸುತ್ತೀರೇನ್ರಿ. ಗೂಂಡಾಗಿರಿ ಮಾಡುತ್ತೀರ.

(ಗೊಂದಲ)

ಅಧ್ಯಕ್ಷರು : ನೋಡಿ, ನನ್ನ ಅನುಮತಿ ಇಲ್ಲದೆ ನೀವು ಈ ರೀತಿ ಪರಸ್ಪರ ಮಾತನಾಡಬಾರದು. ಯಾರಾದರೂ ಮಾತನಾಡುವುದಿದ್ದರೆ ಸಭಾಧ್ಯಕ್ಷರ ಅನುಮತಿಯನ್ನು ಪಡೆದುಕೊಂಡು ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನೀವೇನು ಹೊರಗಡೆ ಮಾತನಾಡಿದ್ದೀರೆಂದು ಅದನ್ನೂ ಕೂಡ ನಾವು ಓದಿದ್ದೇವೆ. ಹೊಸಕೋಟೆಯಲ್ಲಿ ಹೋಗಿ ನೀವು ಕೇಳಿ. ಯಾರದ್ದೂ ಗೂಂಡಾಗಿರಿ ಎಂದು ಹೇಳುತ್ತಾರೆ. ನಮ್ಮದು ಗೂಂಡಾಗಿರಿಯೋ ಅಥವಾ ನಿಮ್ಮದು ಗೂಂಡಾಗಿರಿಯೋ ಎಂದು ಹೊಸಕೋಟೆಯ ಜನರು ಹೇಳುತ್ತಾರೆ. ನೀವು ಹೋಗಿ ಕೇಳಿ. ಮಾನ್ಯ ಅಧ್ಯಕ್ಷರೆ, ಹೊಸಕೋಟೆಯಲ್ಲಿ ಬಚ್ಚೇಗೌಡರು ಮಾಡುವಷ್ಟು ಗೂಂಡಾಗಿರಿಯನ್ನು ಬೇರೆ ಯಾರೂ ಮಾಡುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಗೂಂಡಾಗಿರಿ ಮಾಡುತ್ತಿಲ್ಲ. ಇವರು ಗೂಂಡಾಗಿರಿ ಪ್ರವೃತ್ತಿಯನ್ನು ತೋರಿಸುತ್ತಿದ್ದಾರೆ.

ಅಧ್ಯಕ್ಷರು: ಬಚ್ಚೇಗೌಡರೆ, ಪ್ಲೀಸ್, ಇದನ್ನು ಇಲ್ಲಿಗೇ ಮುಗಿಸಿ. ಮುಂದಿನ ವಿಷಯ ತೆಗೆದುಕೊಳ್ಳೋಣ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಹೊಸಕೋಟೆಯ ಜನ ಹೇಳುತ್ತಾರೆ. ಇವರು ಗೂಂಡಾಗಿರಿ ಮಾಡುತ್ತಾರೆಂದು. ಮರ್ಡರ್‌ಗಳನ್ನು ಮಾಡುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡರೆ: ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು: ಬಚ್ಚೇಗೌಡರೆ, ಆಯಿತು, ಈಗ ಇದನ್ನು ಇಲ್ಲಿಗೇ ನಿಲ್ಲಿಸಿ. ನೀವು ಪಿಟಿಶನ್ ಏನು ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. I will take decision.

ಶ್ರೀ ಬಿ.ಎನ್. ಬಚ್ಚೇಗೌಡ : * * * *

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನೀವು ರೂಲಿಂಗ್ ಕೊಟ್ಟಿದ್ದೀರಿ. ಆದರೂ ಕೂಡ ಇವರು ಮತ್ತೆ ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಏನಿದೆ?

ಶ್ರೀ ಆರ್. ಅಶೋಕ್ : ಮುಖ್ಯಮಂತ್ರಿಗಳ ಬಗ್ಗೆ ಈ ರೀತಿ ಮಾತನಾಡಿರುವುದು ಸರಿಯೆ?

ಶ್ರೀ ಹೆಚ್. ಸಿ. ಬಾಲಕೃಷ್ಣ : ಸ್ವಾಮಿ, ಮಾನ್ಯ ಬಚ್ಚೇಗೌಡರು, ವಿರೋಧ ಪಕ್ಷದ ನಾಯಕರ ಬಗ್ಗೆ ಮೀಡಿಯಾದಲ್ಲಿ ಏನು ಮಾತನಾಡಿದ್ದಾರೆ ಎಂಬುದನ್ನು ತಾವು ತೆಗೆಸಿ ನೋಡಿ.

(**ಗೊಂದಲ**)

ಅಧ್ಯಕ್ಷರು: ನೋಡಿ ಇದು ಸದನ. ಈ ಸದನದ ಗೌರವವನ್ನು ಎಲ್ಲರೂ ಕಾಪಾಡಬೇಕು. ನೀವೇ ಪರಸ್ಪರ ಮಾತನಾಡುವುದಾದರೆ ಸದನ ಏಕೆ ಬೇಕು? ಬಚ್ಚೇಗೌಡರೆ, ಬಾಲಕೃಷ್ಣರವರೆ, ಈ ವಿಷಯವನ್ನು ಇಲ್ಲಿಗೇ ಮುಗಿಸಿ. ಇನ್ನು ಮುಂದುವರೆಸಬೇಡಿ. ಬಚ್ಚೇಗೌಡರೆ, ತಾವೇನು ಪಿಟಿಶನ್ ಕೊಟ್ಟಿದ್ದೀರಿ ಅದರ ಬಗ್ಗೆ I will take decision.

ಶ್ರೀ ಬಿ. ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಒಬ್ಬ ಗೌರವಯುತ ಮುಖ್ಯಮಂತ್ರಿಯ ಬಗ್ಗೆ ಆ ರೀತಿಯಲ್ಲಿ ಮಾತನಾಡಿರುವ ಮಾಜಿ ಮುಖ್ಯಮಂತ್ರಿಯನ್ನು ಸದನಕ್ಕೆ ಕರೆಸಬೇಕು. ಅದಕ್ಕಾಗಿ ನೀವು ಸಮನ್ಸ್ ಜಾರಿ ಮಾಡಬೇಕು. He should appear before the House. ಮಾಜಿ ಮುಖ್ಯಮಂತ್ರಿಗಳು ಅಪೀಯರ್ ಆಗಬೇಕು.

(**ಗೊಂದಲ**)

ಅಧ್ಯಕ್ಷರು: ಅದರ ಬಗ್ಗೆ ಏನು ಮಾಡಬೇಕೆಂದು ಖ ತಿಟ ಣಚಿಞಜ ಜಜಛಿಖಿಂಟಿ.

ಶ್ರೀ ಬಂಡೆಪ್ಪ ಕಾಶ್ಯಂಪುರ್ : ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಕ್ಲಾರಿಫಿಕೇಶನ್ ಕೇಳಿದರೆ ಟೈಂ ಇಲ್ಲವೆನ್ನುತ್ತಾರೆ. ಇದಕ್ಕೆ ಸಾಕಷ್ಟು ಟೈಂ ಇದೆಯೆ?

ಶ್ರೀ ಬಿ.ಎನ್. ಬಚ್ಚೇಗೌಡ : ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಮಾಜಿ ಮುಖ್ಯಮಂತ್ರಿಗಳು ನಮ್ಮ ಮುಖ್ಯಮಂತ್ರಿಯ ಮೇಲೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಇದರ ಬಗ್ಗೆ ನಾನು ಪ್ರಿವಿಲೇಜ್ ಮೋಶನ್ ಮೂವ್ ಮಾಡಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅವರು ಆಚೆ ಹೇಳಿರುವುದು. ಸದನದಲ್ಲಿ ಹೇಳಿಲ್ಲ. ಹೊರಗಡೆ ಆ ರೀತಿ ಮಾತನಾಡಿದ ಮೇಲೆ ತದನಂತರದಲ್ಲಿ ಆ ಬಗ್ಗೆ ವಿಷಾದವನ್ನೂ ಕೂಡ ವ್ಯಕ್ತಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಬಚ್ಚೇಗೌಡರೆ, ನೋಡಿ ನೀವು ಪಿಟಿಶನ್ ಕೊಟ್ಟಿದ್ದೀರಿ. ನಾನು ಅದರ ಬಗ್ಗೆ ಏನು ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯವಿಟು ಎಲ್ಲರೂ ಕುಳಿತುಕೊಳ್ಳಿ. ಈಗ ರೂಲ್ 69ರ ಅಡಿಯಲ್ಲಿ ಚರ್ಚೆ ಮಾಡುವ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಈಗ ಒಳಗೆ ಬಂದೆ. ಇವರು ಏಕೆ ಹೀಗೆ ಜಗಳವಾಡುತ್ತಿದ್ದಾರೆ ಎಂಬುದೇ ನನಗೆ ಅರ್ಥವಾಗಲಿಲ್ಲ. ಗಲಾಟೆಯೊಳಗಡೆ ಬೈಯ್ದಾಡುತ್ತಿದ್ದರು. ಏನು ವಿಷಯ ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಷಯ ಎಂದು ಕೇಳುತ್ತಿದ್ದಾರೆ. ನಾನು ಇನ್ನೊಂದು ಸಾರಿ ವಿಷಯವನ್ನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಏನು ವಿಷಯ ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅದು ಏನೆಂದು ಹೇಳಿ.

ಶ್ರೀ ಬಿ. ಎನ್. ಬಚ್ಚೇಗೌಡ : ಇನ್ನೊಂದು ಬಾರಿ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ, ಹೇಳುತ್ತೇನೆ ಕೇಳಿ. ನಾನು ನೋಟೀಸ್ ಕೊಟ್ಟಿದ್ದೇನೆ, ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ನಿನ್ನೆ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಅವರ ಕಛೇರಿಯಲ್ಲಿ ಒಂದು ಪ್ರೆಸ್ ಮೀಟ್ ಮಾಡಿ ನಮ್ಮ ಮುಖ್ಯಮಂತ್ರಿಗಳಿಗೆ ಅವರು ಮೆಟ್ಟಿನಿಂದ ಹೊಡಿಯುತ್ತಾರೆ ಎಂದು ಒಂದು ಪದ ಬಳಸಿದ್ದಾರೆ.

ಅಧ್ಯಕ್ಷರು: ನಾನು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಎನ್. ಬಚ್ಚೇಗೌಡ: ನಂತರ ಅದನ್ನು ಏನು ಮಾಡಿದ್ದಾರೆಂದರೆ ಪ್ರೆಸ್‌ನವರಿಗೆ ನೀವು ಯಾರೂ ದಯವಿಟ್ಟು ಬರೆಯಬೇಡಿ ಎಂದು ಹೇಳಿ ಅದನ್ನು ವಾಪಸ್ಸು ಪಡೆದು, ನೀವು ಯಾರೂ ಪೇಪರ್‌ನಲ್ಲಿ ಹಾಕಬೇಡಿ ಎಂದು ಹೇಳಿ, ಅಂತಹ defamative statement ನಮ್ಮ ನಾಯಕರಾದ ಈ ರಾಜ್ಯದ ಮುಖ್ಯಮಂತ್ರಿಯವರ ಮೇಲೆ ಯಾರೂ ಯಾವತ್ತೂ ಮಾಡಿಲ್ಲ, ಅಂತಹ ಹೇಳಿಕೆಯನ್ನು ಇವತ್ತು ಅವರ ಮಾಡಿದ್ದಾರೆ. ಈ ಹೌಸ್‌ನಲ್ಲಿ ಯಾರೇ ಮುಖ್ಯಮಂತ್ರಿಯಾಗಲಿ, This is the House under Consitution, ಈ ಹೌಸ್‌ನಲ್ಲಿ ಯಾರೇ ಇರಬಹುದು, it is a continuous process. ಆ ರೀತಿ ತಪ್ಪು ಮಾಡಿರುವುದರಿಂದ........

ಅಧ್ಯಕ್ಷರು: ಬಚ್ಚೇಗೌಡರೇ ನಾನು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ನೀವು ಪದೇ ಪದೇ ಅದರ ಬಗ್ಗೆ ಮಾತನಾಡುತ್ತೀರಿ. ಸಾಕು ಬಿಡಿ.

ಶ್ರೀ ಬಿ. ಎನ್. ಬಚ್ಚೇಗೌಡ : ಇವತ್ತು ಆ ಮಾಜಿ ಮುಖ್ಯಮಂತ್ರಿಯನ್ನು ಈ ಹೌಸ್‌ಗೆ ಸಮನ್ ಮಾಡಿ. There is provision. ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ. Parliament Houseನಲ್ಲಿ, ಅನೇಕ ಬಾರಿ ಕರೆದಿದ್ದಾರೆ. ಅದಕ್ಕೆ ಇಲ್ಲಿ ನಿದರ್ಶನಗಳು ಇವೆ. In the upper House, on a privilege issue the editor of Deccan Herald Pothen Joseph was called and the bar of the House has admonished. Admonish ಮಾಡಿದ್ದಾರೆ.

ಅಧ್ಯಕ್ಷರು: ನಾನು close ಮಾಡಿದ್ದೇನೆಂದು ಹೇಳಿದ್ದೇನಲ್ಲ, ಬಚ್ಚೇಗೌಡರೇ ನಾನು ಇದರ ಬಗ್ಗೆ ನಿರ್ಣಯ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಎಸ್.ಪಿ.ಎಲ್.ಷಾ, ಹೆಚ್. ಮಲ್ಲಾರಾಧ್ಯ, ಆರ್.ಕೆ. ಕಾರಂಜಿಯಾ, editor was called in the House. ಮಾಡಿದ್ದಾರೆ ಸ್ವಾಮಿ. ತಾವು ಮಾಜಿ ಮುಖ್ಯಮಂತ್ರಿಯನ್ನು ಸಮನ್ ಮಾಡಿ ಈ ಹೌಸ್‌ಗೆ ಕರೆದು ಛೀಮಾರಿ ಹಾಕಬೇಕು.

(ಗೊಂದಲ)

ಶ್ರೀ ಬಿ. ಎನ್. ಬಚ್ಚೇಗೌಡ : ನೀವು ಮಾಡಿರುವ ಕೆಲಸಕ್ಕೆ ಛೀಮಾರಿ ಹಾಕಬೇಕು.

(ಗೊಂದಲ)

ಅಧ್ಯಕ್ಷರು : ಸಾಕು ಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಹೌದು ಸ್ವಾಮಿ, ಲಾಟರಿ ಮುಖ್ಯಮಂತ್ರಿ ...

ಶ್ರೀ ಹೆಚ್.ಸಿ. ಬಾಲಕೃಷ್ಣ : ಆಯಿತು, ಕುಳಿತುಕೊಳ್ಳಿ. . . .

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮಾಜಿ ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆದು ಛೀಮಾರಿ ಹಾಕಬೇಕೆಂದು ಕೂಗುತ್ತಾ ತಮ್ಮ ತಮ್ಮ ಸ್ಥಳಗಳಿಂದ ಬಾವಿಗೆ ಬರಲು ಧಾವಿಸಿದರು)

ಅಧ್ಯಕ್ಷರು: ಆಡಳಿತ ಪಕ್ಷದ ಸದಸ್ಯರು ವೆಲ್‌ಗೆ ಬರಬಾರದು. ಅದನ್ನು ಮಂತ್ರಿಗಳು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನೀವು ನಿಮ್ಮ ಸ್ಥಾನಕ್ಕೆ ಹೋಗಿ. ಕಾನೂನು, ನಿಯಮಗಳ ರೀತಿ ಏನಿದೆ ಅದರ ಪ್ರಕಾರ ನಾನು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ. ನಾನು ಈಗಾಗಲೇ ಆ ಪ್ರಕಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್. ಡಿ. ರೇವಣ್ಣ, ಬಂಡೆಪ್ಪ ಕಾಶೆಂಪೂರ್ ಹಾಗೂ ಹೆಚ್. ಸಿ. ಬಾಲಕೃಷ್ಣರವರು ತಮ್ಮ ಸ್ಥಾನದಲ್ಲಿ ನಿಂತುಕೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ಅಧ್ಯಕ್ಷರು : ಅವರಿಗೆ ಏನು ಹೇಳಬೇಕು? ಎಷ್ಟು ಹೇಳಬೇಕು?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಹೇಳಿಕೆ ಬಂದಿದೆ ಎಂದು ಮಾನ್ಯ ಬಚ್ಚೇಗೌಡರು ಮತ್ತು ಅಶೋಕ್‌ರವರು ಸದನದ ಹೊರಗಡೆ ಆಗಿರತಕ್ಕಂಥ statement ಮೇಲೆ ಮಾನ್ಯ ಮುಖ್ಯಮಂತ್ರಿಯವರಿಗೆ breach of privilege ಆಗಿದೆ ಎಂದು ಹೇಳಿದ್ದಾರೆ. ಆ ರೀತಿ ಕುಮಾರಸ್ವಾಮಿಯವರು statement ಮಾಡಿದ್ದಾರೆ, it amounts to defamation. Defamationಗೆ courtಗೆ ಹೋಗಬೇಕೆ ಹೊರತು ಇಲ್ಲಿ privilegeಗೆ ಹಾಕಿದರೆ, he is not the member of this House.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನನಗೆ ತಿಳಿದಿರುವಂತಹ ನಿಯಮಗಳು ಮತ್ತು ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಇರುವಂತಹ ವಿಚಾರಗಳ ಮಾಹಿತಿ ಪ್ರಕಾರ, it may be defamatory, derogatory statement. ಅದಕ್ಕೆ court is the right forum. ನಮಗೆ defamation ಆಗಿದೆ, in the eye of the people ನಮ್ಮ presitgeಗೆ ಕೆಳಗೆ ಹೋಗಿಬಿಟ್ಟಿದೆ. ನಮ್ಮ dignity, decorum ಎಲ್ಲಾ ಕೆಳಗಡೆ ಹೊರಟು ಹೋಗಿದೆ ಎಂದು ಆ ರೀತಿ ಆಗಿದ್ದರೆ, ಅದರಲ್ಲಿ ಯಾರು injured ಇರುತ್ತಾರೆ, aggrived ಇರುತ್ತಾರೆ, they have to approach the court in the defamatory proceedings. ಅದು ಬಿಟ್ಟು ನನಗೆ ಗೊತ್ತಿರುವ ಮಟ್ಟಿಗೆ ನಾನು ಹೇಳಿದೆ. I don't know, but I leave it toe you ಮಾನ್ಯ ಅಧ್ಯಕ್ಷರೇ, ನೀವು examine ಮಾಡಿ. ಅದು ನಿಮ್ಮ ವ್ಯಾಪ್ತಿಯೊಳಗೆ ಬರುತ್ತದೆಯೇ? ಇಲ್ಲವೇ ಎನ್ನುವುದನ್ನು ನೋಡಬೇಕು. As per as I am concerned, I don't think. .., ಇದು privilege ಒಳಗಡೆ ಬರುವುದಿಲ್ಲ. ಅವರು ಹೊರಗಡೆ statement ಕೊಟ್ಟಿರುವುದು. ಬಚ್ಚೇಗೌಡರೇ ನಿವೂ ಕೂಡ ಒಂದು statement issue ಮಾಡಿದ್ದೀರಿ, ನಿಮ್ಮ statement ಕೂಡ ನೋಡಿದೆ, equally befitting ಇದೆ.

ಶ್ರೀ ಬಿ. ಎನ್. ಬಚ್ಚೇಗೌಡ : I have just mentioned what happened. No, it is not like that.

ಶ್ರೀ ಸಿದ್ದರಾಮಯ್ಯ: ನಾನು ಆ ರೀತಿ ಹೇಳಲಿಲ್ಲ, ನಾನು ನಿಮಗೆ ಈಗ defamatory ಎಂದು ಹೇಳಿದ್ದೇನಾ?

ಶ್ರೀ ಬಿ. ಎನ್. ಬಚ್ಚೇಗೌಡ : ನೀವು ಅದೇ ಸಂಬಂಧವಾಗಿ ಕೊಟ್ಟಿದ್ದೀರಿ ಎಂದು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ: Befitting ಎಂದು ಹೇಳಿದೆ. ನಿಮ್ಮ statement ಇಲ್ಲಿ ಇದೆ, ನಾನು ನೋಡಿದೆ, ಈಗ issue ಮಾಡಿದಿರಿ. ನೀವು ಏನೇನು ಪದಗಳನ್ನು ಬಳಸಬೇಕು ಎಲ್ಲಾ ಬಳಸಿದ್ದೀರಿ.

ಶ್ರೀ ಬಿ. ಎನ್. ಬಚ್ಚೇಗೌಡ : ಎಲ್ಲಾ ಗೌಪ್ಯವಾಗಿ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ಗೌಪ್ಯವಾಗಿ ಹೇ? ಏನು ಗೌಪ್ಯವಾಗಿ ಬಂತು. ನೀವು ಇದನ್ನು ಬಹಿರಂಗವಾಗಿ ಕೊಟಿದ್ದೀರಿ.

ಶ್ರೀ ಬಿ. ಎನ್. ಬಚ್ಚೇಗೌಡ : ಏನು ಹೇಳಬೇಕೋ ಅದನ್ನು ಹೇಳಿ.

ಅಧ್ಯಕ್ಷರು: ಆ defamative words ಹೇಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ: 'ದೇವೇಗೌಡರು ಪ್ರಧಾನಿಯಾದಾಗ ಸಂಪಾದಿಸಿದ ಭ್ರಷ್ಟಾಚಾರದ ಹಣದಿಂದ ಚಲನಚಿತ್ರಗಳನ್ನು ನಿರ್ಮಿಸಿ ತಾನು ದೊಡ್ಡ ವ್ಯವಹಾರಸ್ಥರೆಂದು ರಾಜ್ಯದ ಜನತೆಗೆ ಟೋಪಿ ಹಾಕಿರುವುದು ಮಾತ್ರವಲ್ಲವೇ?' ಇದನ್ನು ಏನೆಂದು ಕರೆಯಲಿ? ನೀವು ಈ ರೀತಿ ಹೇಳಿರುವುದಕ್ಕೆ ಅವರು ಇಲ್ಲಿಗೆ ಬಂದು ನಿಮ್ಮ ಮೇಲೆ privilege ಹಾಕುವುದಕ್ಕೆ ಆಗುತ್ತದೆಯೇ? ಮಾನ್ಯ ಅಧ್ಯಕ್ಷರೇ, ಇದನ್ನು Parliamentaryಗೆ ತೆಗೆದುಕೊಂಡು ಹೋಗಿ privilege move ಮಾಡುವುದಕ್ಕೆ ಆಗುತ್ತದೆಯೇ?

He is a member in the Parliament. Can he go and move a privilege motion in the Parliamnent against Mr. Bachchegowda? Like wise, here also, ನನ್ನ ಪ್ರಕಾರ, I don't think the privilege motion would stand.

I leave it to you to look into the provision and take a decision.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೊರಗಡೆ ಮಾಡಿದಂತಹ statement ಅನ್ನು ಇಲ್ಲಿ ತೆಗೆದುಕೊಂಡು ಬಂದು ಪ್ರಸ್ತಾಪ ಮಾಡುತ್ತಿರುವುದು ಸರಿಯಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ನಾನು ಆಗಲ್ಲ ಹೇಳಿದ್ದು, privilege move ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದು.

ಶ್ರೀ ಕೆ. ಎಸ್. ಈಶ್ವರಪ್ಪ : ಬರುವುದಿಲ್ಲವೆಂದು ಹೇಳಿದಿರಿ. ನೀವು ವಿರೋಧ ಪಕ್ಷದ ನಾಯಕರು ಆಗುವುದಕ್ಕಿಂತ ಮೊದಲು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಶ್ರೀಮತಿ ಸೋನಿಯಾ ಗಾಂಧಿಯವರ ಬಗ್ಗೆ ನಮ್ಮ ನಾಯಕಿಯಾದಂತಹ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಇದೇ ಹೌಸ್‌ನಲ್ಲಿ ಅವರನ್ನು ಕರೆಸಿ ಏನೇನು ಹೇಳಬೇಕೆಂದು ಹೇಳಿರುವುದು ರೆಕಾರ್ಡ್‌ನಲ್ಲಿ ಇದೆ. ನಾನು ಈ ಮಾತನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಒಬ್ಬ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಹೊರಗಡೆ ಇರುವಂತಹ ಒಬ್ಬ ಮಾಜಿ ಮುಖ್ಯಮಂತ್ರಿ ಬಳಸಿದಂತಹ ಪದದಿಂದ ಇಡೀ ಸದನಕ್ಕೆ ಆಗುತ್ತಿರುವಂತಹ ನೋವನ್ನು ಸಭಾಧ್ಯಕ್ಷರಿಗೆ...

ಶ್ರೀ ಸಿದ್ದರಾಮಯ್ಯ: ನಾನು ಸರಿ ಎಂದು ಹೇಳಲಿಲ್ಲ, defamation ಆಗುತ್ತದೆಂದು ಹೇಳಿದ್ದು.

ಶ್ರೀ ಕೆ. ಎಸ್. ಈಶ್ವರಪ್ಪ: Defamation ಆಗುತ್ತದೆ, ಅದು ಸರಿಯೋ ತಪ್ಪೋ.. ಒಂದು ನಿಮಿಷ ಮಾನ್ಯ ರೇವಣ್ಣನವರೇ, ನೀವು ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಬಾಲಕೃಷ್ಣರವರೇ ಸ್ವಲ್ಪ ತಡೆಯಿರಿ, ಇಲ್ಲಿ ವಿರೋಧ ಪಕ್ಷದ ನಾಯಕರು .....

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಏನು ಹೇಳಿದರು ಎಂದು ಹೇಳಿ. ಅದೇನು ಹೇಳಿದ್ದಾರೆಂದು ಹೇಳಿ?

ಶ್ರೀ ಕೆ. ಎಸ್. ಈಶ್ವರಪ್ಪ: ಇಲ್ಲಿ ಪ್ರಶ್ನೆ ಬಂದಿರುವುದು ಮಾನ್ಯ ಸಿದ್ದರಾಮಯ್ಯನವರು, ರೇವಣ್ಣನವರು ಇತ್ತೀಚೆಗೆ ಒಂದಾಗುತ್ತಿದ್ದಾರೆ ಎಂಬ ಅಂಶವನ್ನು ನಾವು ಗಮನಿಸುತ್ತಿದ್ದೇವೆ. ಸಂತೋಷ. ಒಂದಾಗಿ. ಆದರೆ, ಅದಲ್ಲ. ಇಲ್ಲಿ ಪ್ರಶ್ನೆ ಬರುತ್ತಿರತಕ್ಕದ್ದು, ಇಡೀ ಸದನದ ಒಬ್ಬ ನಾಯಕರಿಗೆ ಹಿಂದಿನ ಮುಖ್ಯಮಂತ್ರಿಯಾಗಿದ್ದಂಥ ವ್ಯಕ್ತಿ ಬಳಸಿರುವಂಥ ಪದ.

ಶ್ರೀ ಎಚ್.ಸಿ. ಬಾಲಕೃಷ್ಣ : ಏನು ಹೇಳಿದರು ಎಂದು ಹೇಳಿ. ಅದೇನು ಹೇಳಿದ್ದಾರೆಂದು ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ : ಏಕೆ ಅಷ್ಟು ಅರ್ಜೆಂಟ್ ಇದೆ? ಇಡೀ ಕರ್ನಾಟಕ ರಾಜ್ಯದ ಜನರು ವಿಜಯ ಕರ್ನಾಟಕ ಪತ್ರಿಕೆಯನ್ನು ಓದಿದ್ದಾರೆ. ನೀವು ಓದಿಲ್ಲವೇ?

ಶ್ರೀ ಎಚ್.ಸಿ. ಬಾಲಕೃಷ್ಣ : ಅದನ್ನು ನೀವೇ ಹೇಳುತ್ತಿದ್ದೀರಿ. ಮಾಜಿ ಮುಖ್ಯಮಂತ್ರಿಗಳು ಒಂದು ಸಲ ಹೇಳಿದರು. ಇವರು ನೂರು ಸಲ ಹೊಡಿಯುತ್ತಾರೆ ಎಂದು ಹೇಳುತ್ತಿದ್ದಾರೆ. ಅವರು ಎಲ್ಲೋ ಒಂದು ಸಲ ಹೇಳಿ ಅದಕ್ಕೆ ವಿಷಾಧವನ್ನೂ ವ್ಯಕ್ತಪಡಿಸಿದರು. ಇವರು ನೂರು ಸಲ ಅವರು ಮುಖ್ಯಮಂತ್ರಿಗೆ ಹೊಡೆಯುತ್ತಾರೆ, ಹೊಡೆಯುತ್ತಾರೆ ಎಂದು ಹೇಳುತ್ತಾರೆ. ಅವರು ಒಂದು ಸಲ ಹೇಳಿ ವಿಷಾದ ವ್ಯಕ್ತಪಡಿಸಿದರು. ಆದರೆ, ನೀವು ಎಷ್ಟು ಸಲ ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಹೇಳಲು ಹೊರಟಿರುವುದು ಇದನ್ನೇ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಇಡೀ ರಾಜ್ಯದ ಜನರು ಅವರನ್ನು ಮುಖ್ಯಮಂತ್ರಿಯಾಗಿ ಮಾಡಿರುವ ಸಂದರ್ಭದಲ್ಲಿ ಅವರು ಬಳಸಿರುವಂಥ ಪದ ನಮಗೆ ಎಷ್ಟು ನೋವಾಗಿದೆ ಎನ್ನುವುದನ್ನು, ಇವರೇನು ಪದವನ್ನು ಬಳಸಿದ್ದಾರೆ, ಸ್ವಲ್ಪ ತಡೆಯಿರಿ ಹೇಳುತ್ತೇನೆ, ನಿಮಗೆ ಅರ್ಥವಾಗಿಲ್ಲವೇ? ನಿಮ್ಮ ಸಂಸ್ಕೃತಿಯೇ ಅದು, ಅದು ನಿಮಗೆ ಮಾಮೂಲಿ. ನಮ್ಮ ಸಂಸ್ಕೃತಿ ಇದಲ್ಲಾ. ಇದಕ್ಕಿಂತಾ ಕೆಟ್ಟ ಪದಗಳು ನಮಗೆ ಬರುತ್ತದೆ. ಆದರೆ, ನಮ್ಮ ಪಕ್ಷ ನಮಗೆ ಸಂಸ್ಕೃತಿಯನ್ನು ಕಲಿಸಿಕೊಟ್ಟಿದೆ. ಇದಕ್ಕಿಂತಾ ಕೆಟ್ಟಪದಗಳನ್ನು ಬಳಸಲು ನಮಗೆ ಬರುತ್ತದೆ. ಆದರೆ ನಾವು ಬಳಸುತ್ತಿಲ್ಲ. ಏಕೆಂದರೆ ನಮಗೆ ನಮ್ಮ ತಂದೆತಾಯಿಗಳು ಮತ್ತು ನಮ್ಮ ಪಕ್ಷ ಒಂದು ಸಂಸ್ಕೃತಿಯನ್ನು ಹೇಳಿಕೊಟ್ಟಿದೆ. ಒಬ್ಬರು ನಾಯಕರಿಗೆ ಹೇಗೆ ಗೌರವ ಕೊಡಬೇಕು, ಯಾವ ಭಾಷೆಯಲ್ಲಿ ಮಾತನಾಡಬೇಕು ಎಂಬುದನ್ನು ಹೇಳಿಕೊಟ್ಟಿದ್ದಕ್ಕೆಯೇ ಇವತ್ತು ಕರ್ನಾಟಕ ರಾಜ್ಯದ ಜನ ಇಂಥ ನಾಯಕರನ್ನು ನಮಗೆ ಕೊಟ್ಟಿದ್ದಾರೆ ಮತ್ತು ಬಹುಮತವನ್ನೂ ಕೊಟ್ಟಿದ್ದಾರೆ. ನಾನು ನಿಮಗೆ ಹೇಳಲು ಹೊರಟಿರುವುದು ಇಷ್ಟೇ, ಇದನ್ನು ಮಾತನಾಡಿರುವುದು ತಪ್ಪು ಎಂದು ಅವರು ಒಪ್ಪಿಕೊಂಡ ನಂತರ ಇಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ನೋಡುತ್ತಿರುವ ಸಂದರ್ಭದಲ್ಲಿ, ಮಾನ್ಯ ಬಚ್ಚೇಗೌಡರು ಹೊರಗಡೆ ಮಾತನಾಡಿರುವುದಕ್ಕೂ ಸದನದಲ್ಲಿ ಕರೆದು ಛೀಮಾರಿ ಹಾಕಿರುವ ಉದಾಹರಣೆ ಇದೆಯೆಂದು ಹೇಳಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮಾತ್ರವಲ್ಲ ಕರ್ನಾಟಕ ಆರು ಕೋಟಿ ಜನರಿಗೂ ಇದರಿಂದ ನೋವಾಗಿರುವುದಿಂದ ಮಾಜಿ ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರೆದು ಛೀಮಾರಿ ಹಾಕಬೇಕು ಎಂದು ನನ್ನ ಮನವಿ. ಇದು ನಿಮಗೆ ಬಿಟ್ಟಿದ್ದು ಮಾನ್ಯ ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಮಾತನಾಡುತ್ತಾರೋ ಕೇಳೋಣ. ಕೇಳುವ ತಾಳ್ಮೆ ಇರಬೇಕು. ಅವರು ಏನು ಹೇಳುತ್ತಾರೋ ಕೇಳಿ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೇ, ರಾಜಕೀಯದಲ್ಲಿ ನಾವೂ 60 ವರ್ಷದಿಂದ ಈ ರಾಜ್ಯದ ರಾಜಕಾರಣ ಮಾಡಿದಂಥವರು. ವಿರೋಧ ಪಕ್ಷದವರು ಬೈಗಳ ಇವೆಲ್ಲಾ ನಡೆದುಕೊಂಡು ಬಂದಿರುವಂಥದ್ದು. ಹೊರಗಡೆ ಚುನಾವಣಾ ಸಂದರ್ಭದಲ್ಲಿ ಅಥವಾ ರಾಜಕಾರಣ ಮಾಡಬೇಕಾದರೆ ಹೆಚ್ಚುಕಡಿಮೆ ಇನ್ನೊಬ್ಬರನ್ನು ಬೈದುಕೊಂಡೇ ಎಲ್ಲರೂ ಬಂದಿರುವಂಥದ್ದು.

(ಗೊಂದಲ)

ಸ್ವಲ್ಪ ಹೇಳುವವರೆಗೆ ಕೇಳಿ. ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಂದು ಆಗುತ್ತದೆ. ನಿಮಗೆ ಸದನ ನಡೆಸುವುದಕ್ಕೆ ಆಸಕ್ತಿ ಇಲ್ಲ.

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಆದಮೇಲೆ ಬೇಕಾದರೆ ಸಿದ್ದುಸವದಿಯವರೆ ಮಾತನಾಡಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಏನು ನಿಮಗಿಂತಾ ಜಗಳ ಮಾಡಲು ಬಂದಿದ್ದೇವೆಯೇ? ಸಮಾಧಾನವಾಗಿ ಕೇಳಿ. ನಮಗೆ ಊರಿನಲ್ಲಿ ಕೆಲಸ ಇದೆ. ಜನರು ಕಾಯುತ್ತಿದ್ದಾರೆ. ಸದನ ನಡೆಸಲು ಸಾಧ್ಯವಾದರೆ ನಡೆಸಿ.

ಒಬ್ಬ ಮಾನ್ಯ ಸದಸ್ಯರು : ನಾಲಿಗೆ ಕುಲ ಹೇಳುತ್ತದೆ ಎಂದು ಗಾದೆ ಇದೆ. ಪಾಪ ಬಿಟ್ಟುಬಿಡಿ ಹೋಗಲಿ. ನಾಲಿಗೆ ಅವರ ಕುಲ ಏನು ಎಂದು ಹೇಳುತ್ತಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೆ ಕುಳಿತುಕೊಳ್ಳಿ. ಅವರು ಮಾತನಾಡಲಿ. ಅನಂತರ ನಿಮಗೆ ಅವಕಾಶ ಕೊಡುತ್ತೇನೆ. ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಸಿದ್ದುಸವದಿ : ಇವರ ನಾಯಕರೇನು ಹೇಳಿದ್ದಾರೆ, ಅದನ್ನು ರಾಜ್ಯದ ಜನರೇ ಅವರಿಗೆ ಮಾಡಿದ್ದಾರೆ. ಚುನಾವಣೆಯಲ್ಲಿ ಅವರನ್ನು ಹೊಡೆದು ಕಳುಹಿಸಿದ್ದಾರೆ. ಮೊದಲು ಅವರು ಅದನ್ನು ಅರ್ಥ ಮಾಡಿಕೊಳ್ಳಲಿ. ನಾಚಿಕೆಯಾಗುವುದಿಲ್ಲವೇ ನಿಮಗೆ ಮಾತನಾಡಲು?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಒಬ್ಬರೂ ಮಾನ್ಯ ಸದಸ್ಯರು : ಟೀಕೆ ಮಾಡುವುದಕ್ಕೂ ಒಂದು ಮಿತಿ ಇದೆ. ಹೇಗೆ ಬೇಕಾದರೂ ಟೀಕೆ ಮಾಡಬಹುದೇ? ಏನು ಬೇಕಾದರೂ ಟೀಕೆ ಮಾಡಿದರೆ ಜನರು ನಿಮ್ಮನ್ನು ಸಹಿಸುವುದಿಲ್ಲ.

(ಗೊಂದಲ)

ಶ್ರೀ ಸಿದ್ದುಸವದಿ : ಸದನದಲ್ಲಿ ಒಂದು ನಿರ್ಣಯವಾಗಬೇಕು. ಅವರ ಮಾತನ್ನು ಖಂಡಿಸಬೇಕು. ಇದು ಸರಿಯಲ್ಲ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ನಿಮ್ಮಿಂದ ಕಲಿಯಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು : ಯಾರಾದರು ಒಬ್ಬರು ಮಾತನಾಡಿ.

(ಗೊಂದಲ)

ಶ್ರೀ ಎಸ್. ಶಿವಣ್ಣ : ನಿಮ್ಮ ನಾಯಕರು ವಚನಭ್ರಷ್ಟರು. ಅವರ ಹತ್ತಿರ ಏನೂ ಇಲ್ಲ. ಸುಮ್ಮನೆ ಸದನದಲ್ಲಿ ಮಾತನಾಡುತ್ತಾರೆ. ನಿಮಗೆ ನಾಚಿಕೆಯಾಗಬೇಕು. ನೀವು ಒಬ್ಬರೇ ಹರಿಶ್ಚಂದ್ರರು, ಇನ್ನೂ ಯಾರೂ ಹರಿಶ್ಚಂದ್ರರಿಲ್ಲ! ರೇವಣ್ಣ ನೀವು ಒಬ್ಬರೇ ಹರಿಶ್ಚಂದ್ರರು!

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್. ಗೋಪಾಲಕೃಷ್ಣ ಬೇಳೂರು : ಯಾರೇ ಆದರೂ ಆ ರೀತಿ ಕೆಟ್ಟ ಪದವನ್ನು ಮಾತನಾಡಲು ಈ ರಾಜ್ಯದಲ್ಲಿ ಅವಕಾಶ ಇಲ್ಲ. ಅದನ್ನು ಕಡತದಿಂದ ತೆಗೆದುಹಾಕಿಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹೀಗಾದೆ ಆಗುವುದಿಲ್ಲ. ನಾವು ಹೊರಗಡೆ ಹೋಗಬೇಕಾಗುತ್ತದೆ. ಸದನದ ಸಮಯವನ್ನೆಲ್ಲಾ ಹಾಳುಮಾಡುತ್ತಿದ್ದಾರೆ.

ಅಧ್ಯಕ್ಷರು: ಹಾಗಾದರೆ ಸದನವನ್ನು ಮುಂದಕ್ಕೆ ಹಾಕೋಣ. ಈಗ ಸದನವನ್ನು ಹತ್ತು ನಿಮಿಷ ಮುಂದಕ್ಕೆ ಹಾಕಿದ್ದೇನೆ.

(ಸದನವನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಲಾಯಿತು)

(ಸಭೆಯು ಪುನ: 6 ಗಂಟೆ 3 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಆಡಳಿತ ಪಕ್ಷದ ಶಾಸಕರು ಮಾನ್ಯ ಹೆಚ್. ಡಿ. ಕುಮಾರಸ್ವಾಮಿಯವರು ನೀಡಿರುವ ಪತ್ರಿಕಾ ಹೇಳಿಕೆ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)

ಅಧ್ಯಕ್ಷರು : ಈಗ ಮುಂದಿನ subjectನ್ನು ತೆಗೆದುಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು : ಖಂಡನಾ ನಿರ್ಣಯವಾಗಬೇಕು.

ಅಧ್ಯಕ್ಷರು : ಅದರ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ: ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಗೌರವವನ್ನು ತಂದಿದ್ದಾರೆ. ಈ ರೀತಿ ಅವರ ಬಗ್ಗೆ ಮತನಾಡಿರತಕ್ಕಂಥದ್ದು, ಅವರು ಬಹಳ ಪ್ರಭಾವಿಶಾಲಿಗಳು, ಅವರನ್ನು ನಾವು ಗೌರವಾನ್ವಿತರು ಎಂದು ಅಂದುಕೊಂಡಿದ್ದೆವು. ಈ ರೀತಿ ಹೇಳಿಕೆ ನೀಡಿರುವುದರಿಂದ ಅವರು ಕ್ಷಮಾಪಣೆಯನ್ನು ಕೇಳಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರನ್ನು ಸದನಕ್ಕೆ ಕರೆಸಬೇಕು (ಗೊಂದಲ)

ನಿರ್ಣಯ (ಹೇಳಿಕೆಯನ್ನು ಸಾರಿಗೆ ಸಚಿವ ಶ್ರೀ ಆರ್. ಅಶೋಕರವರು ಓದಿದರು)

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡನಾ ನಿರ್ಣಯವನ್ನು ಓದಲಾಯಿತು, ಇದನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ (ಅದರ ಪ್ರತಿಯನ್ನು ಲಗತ್ತಿಸಲಾಗಿದೆ).

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರ ಅಣ್ಣನವರಾದ ಮಾನ್ಯ ರೇಣ್ಣನವರು ಇಲ್ಲಿಯೆ ಇದ್ದಾರೆ, ಈ ತರಹ ಅವರು ಹೇಳಿಕೆ ಕೊಟ್ಟಿರುವ ಬಗ್ಗೆ ಅವರು ಈ ಸದನದಲ್ಲಿ ಕ್ಷಮಾಪಣೆ ಕೋರಬೇಕು ಸ್ವಾಮಿ.

(ಗೊಂದಲ)

ಖಂಡನಾ ನಿರ್ಣಯ

ಇದೇ ದಿನಾಂಕ 15ರಂದು ಬೆಂಗಳೂರಿನ ತಮ್ಮ ಪಕ್ಷದ ಕಛೇರಿಯಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾಜಿ ಮುಖ್ಯಮಂತ್ರಿಯಾದಂತಹ

ಶ್ರೀ ಎಚ್.ಡಿ. ಕುಮಾರಸ್ವಾಮಿಯವರು ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರ ಬಗ್ಗೆ ಟೀಕೆ ಮಾಡುತ್ತ ಅವಹೇಳನಕಾರಿ ಹಾಗೂ ಅಪಮಾನಕಾರಿ ಮಾತುಗಳನ್ನಾಡಿದ್ದಾರೆ.

ಇದರಿಂದ ಈ ಸದನದ ನಾಯಕರ ಹಾಗೂ ಸದನದ ಘನತೆಗೆ ಧಕ್ಕೆ ಬಂದಿರುತ್ತದೆ.

ಕಾರಣ ಶ್ರೀ ಕುಮಾರಸ್ವಾಮಿಯವರ ವರ್ತನೆ ಮತ್ತು ಹೇಳಿಕೆಯನ್ನು ಖಂಡಿಸಿ ಈ ಸದನವು ನಿರ್ಣಯವನ್ನು ಅಂಗೀಕರಿಸುತ್ತದೆ. ದಿನಾಂಕ: 16.09.2009

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಬಚ್ಚೇಗೌಡರೆ, ಒಂದು ನಿಮಿಷ ಕುಳಿತುಕೊಳ್ಳಿ. ಶಾಸಕರುಗಳಿಗೆ ಅವರ ಸ್ಥಾನಕ್ಕೆ ಹೋಗುವುದಕ್ಕೆ ಹೇಳಿ.

ಅಧ್ಯಕ್ಷರು: ದಯವಿಟ್ಟು ಎಲ್ಲರೂ ನಿಮ್ಮ ಸ್ಥಾನಗಳಿಗೆ ಹೋಗಿ.ಇದು ಸರಿಯಲ್ಲ. ಆಡಳಿತ ಪಕ್ಷದ ಶಾಸಕರಾಗಿ ಈ ರೀತಿ ಮಾಡಿದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಯಾರಾದರೂ ಏನಾದರೂ ಮಾತನಾಡುವುದು ಇದ್ದರೆ ನಿಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ನೀವು ಆಡಳಿತ ಪಕ್ಷದ ಶಾಸಕರು, ಇದು ಸರಿಯಾದ ನಡವಳಿಕೆ ಅಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ರೂಲ್ಸ್‌ನಲ್ಲಿ ಎಲ್ಲಿದೆ, ಈ ತರಹ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ, ಅಜೆಂಡಾ ಪ್ರಕಾರ ಇನ್ನು ಎರಡು–ಮೂರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ.

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಶಾಸಕರು ಧಿಕ್ಕಾರವನ್ನು ಕೂಗುತ್ತಿದ್ದರು)

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಮಾನ್ಯ ಪ್ರತಿಪಕ್ಷದ ನಾಯಕರ ಬಗ್ಗೆ ನಮಗೆ ಗೌರವ ಇದೆ. ಆದರೆ ಈ ಸದನದ ಕ್ಷಮೆ ಕೇಳಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ . . . ದಯಮಾಡಿ ಅವರನ್ನು ಅವರ ಸ್ಥಾನಗಳಿಗೆ ಕಳುಹಿಸಿ

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ದಯಮಾಡಿ ಆಡಳಿತ ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಿ, ಇದು ಸರಿಯಲ್ಲ, ಆಡಳಿತ ಪಕ್ಷದ ಸದಸ್ಯರಾಗಿ ನೀವು ಈ ರೀತಿ ನಡೆದುಕೊಂಡರೆ ಸದನಕ್ಕೆ ಗೌರವ ಬರುವುದಿಲ್ಲ. ನಿಮ್ಮ ಸ್ಥಾನಗಳಿಗೆ ಹೋಗಿ, ಯಾರಾದರೂ ಏನಾದರೂ ಮಾತನಾಡುವುದಿದ್ದರೆ ನಿಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ಆಡಳಿತ ಪಕ್ಷದ ಸದಸ್ಯರಾದ ನಿಮಗೆ ಇಧು ಸರಿಯಾದಂಥ ನಡವಳಿಕೆ ಅಲ್ಲ. ನಿಮ್ಮ ಸ್ಥಳಕ್ಕೆ ದಯಮಾಡಿ ಹೋಗಿ. ಪ್ಲೀಸ್,

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ಅಜೆಂಡಾ ಪ್ರಕಾರ ಮುಂದೆ ಇನ್ನು ಎರಡು ಮೂರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ,

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ ಪ್ಲೀಸ್, ನೋಡಿ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ನಿಮ್ಮ ಸ್ಥಾನಗಳಿಗೆ ಹೋಗಿ, ಸದನ ನಡೆಸಲಿಕ್ಕೆ ಸಹಕಾರ ಕೊಡಿ, ನಿಮ್ಮ ಸ್ಥಾನಕ್ಕೆ ಹೋಗಿ, ಈ ರೀತಿ ಆದರೆ ಸದನ ನಡೆಸಲಿಕ್ಕೆ ಆಗುವುದಿಲ್ಲ. ಮತ್ತೆ ಮುಂದೆ ಹಾಕಬೇಕಾಗುತ್ತದೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ವಿರೋಧ ಪಕ್ಷದ ನಾಯಕರು ಮಾತನಾಡುವವರಿದ್ದಾರೆ. ಅವರು ಏನೋ ಹೇಳುವವರಿದ್ದಾರೆ ಕೇಳಿ.

(ಗೊಂದಲ)

ಶ್ರೀ ಎಂ. ಪಿ. ರೇಣುಕಾಚಾರ್ಯ: ಈ ರಾಜ್ಯದ ಜನತೆಗೆ ಉತ್ತಮ ಸಂದೇಶ ಹೋಗಬೇಕೆಂದರೆ ಮೊದಲು ಅವರು ಕ್ಷಮೆ ಕೇಳಬೇಕು, ಲಜ್ಜೆಗೆಟ್ಟ, ಭಂಡ ರಾಜಕಾರಣಿಗಳು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಯಾರನ್ನು ಯಾರು ಕ್ಷಮೆ ಕೇಳಬೇಕು?

(ಗೊಂದಲ)

ಅಧ್ಯಕ್ಷರು: ಸದನದ ನಿಯಮದ ಪ್ರಕಾರ ಯಾರಾದರೂ ಶಾಸಕರು ಮಾತನಾಡಬೇಕಾದರೆ ನಿಮ್ಮ ಸ್ಥಾನದಲ್ಲಿ ನಿಂತು ಮಾತನಾಡಬೇಕು. ಈ ರೀತಿ ನೀವು ಇಲ್ಲಿ ನಿಂತು ಮಾತನಾಡಿದರೆ ಯಾವುದು ದಾಖಲೆಗೆ ಹೋಗುವುದಿಲ್ಲ. ನಿಮ್ಮ ಸ್ಥಾನವನ್ನು ಬಿಟ್ಟು ಬೇರೆ ಕಡೆ ನಿಂತು ನೀವೇನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಇದು ಪ್ರಜಾಪ್ರಭುತ್ವದ ಕಗ್ಗೊಲೆ...

(ಗೊಂದಲ)

ಅಧ್ಯಕ್ಷರು: ದಯಮಾಡಿ ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಸಿದ್ದರಾಮಯ್ಯ : ಇದು ಕರ್ನಾಟಕದ . . . ಶಿವಣ್ಣನವರೇ ನೀವು ಐದನೇ ಸಾರಿ ಎಂ.ಎಲ್.ಎ. ಆಗಿದ್ದೀರಿ, ಬಚ್ಚೇಗೌಡರು ಬಹಳ ವರ್ಷ ಮಂತ್ರಿಯಾಗಿರುವವರು. ಮೂರು ನಾಲ್ಕು ಸಾರಿ ಸಚಿವರಾಗಿರುವವರು.

(ಗೊಂದಲ)

ಅಧ್ಯಕ್ಷರು: ಈಗ ಸದನವನು ಹತ್ತು ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(ಸದನದ ಕಲಾಪವನ್ನು ಸಂಜೆ 6.11 ಗಂಟೆಗೆ ಮುಂದೂಡಿ ಹತ್ತು ನಿಮಿಷಗಳ ನಂತರ ಸೇರುವುದಾಗಿ ನಿರ್ಣಯಿಸಿತು)

(ಸಭೆಯು ಪುನ: ರಾತ್ರಿ 7 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)
ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಹೊರಗಡೆ ನಡೆದಂಥ ಘಟನಾವಳಿಗಳ ಬಗ್ಗೆ ಇಲ್ಲಿ ಸಾಕಷ್ಟು ಕಾಲ ಚರ್ಚೆಯಾಗಿದೆ. ನಾನು ಮಾನನಷ್ಟ ಮೊಕದ್ದಮೆಯನ್ನು ಹಾಕುವುದಕ್ಕೂ ತಯಾರಿಲ್ಲ. ನೋಟೀಸ್ ಕೊಡುವುದಕ್ಕೂ ಸಿದ್ಧನಾಗಿಲ್ಲ. ಆ ಬಗ್ಗೆ ಚರ್ಚೆ ಮಾಡುವುದಕ್ಕೂ ನಾನು ಸಿದ್ಧನಿಲ್ಲ. ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರು ಈ ರೀತಿ ಅಪಮಾನಕರ ಮಾತುಗಳನ್ನು ಒಬ್ಬರು ಮಾಜಿ ಮುಖ್ಯಮಂತ್ರಿಗಳು ಆಡಿದರಲ್ಲಾ ಎಂಬು ನೋವಿನಿಂದ ತಮ್ಮ ಅಭಿಪ್ರಾಯಗಳನ್ನು

ವ್ಯಕ್ತಪಡಿಸಿದ್ದಾರೆ. ಸಹಜವಾಗಿ ನಾನು ನಿರೀಕ್ಷೆ ಮಾಡಿದ್ದೆ. ಹೊರಗಡೆಯವರಾಗಲಿ ಯಾರೇ ಆಗಲಿ, ಒಂದು ರಾಜ್ಯದ ಆರು ಕೋಟಿ ಜನ ಪ್ರತಿನಿಧಿಯೆಂದು ಕರೆಸಿಕೊಳ್ಳುವ ಮುಖ್ಯಮಂತ್ರಿಗೆ ಈ ರೀತಿ ಅಪಮಾನ ಮಾಡುವುದು ಸರಿಯಲ್ಲ, ಇದು ಆಗಬಾರದಿತ್ತು, ಅವರ ಪರವಾಗಿ ನಾನೇ ಕ್ಷಮೆ ಕೇಳುತ್ತೇನೆಂದು ಕೊನೆಯ ಪಕ್ಷ ಮಾನ್ಯ ರೇವಣ್ಣನವರು ಕೇಳುತ್ತಾರೆಂದು ನಾನು ಭಾವಿಸಿದ್ದೆ. ಈಗ ಅವರಿಂದಲೂ ನಾನು ನಿರೀಕ್ಷೆ ಮಾಡುವುದಿಲ್ಲ. ಮುಂದಿನ ಕಾರ್ಯಕಲಾಪಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಸದಸ್ಯರುಗಳು ಇದರ ಬಗ್ಗೆ ದಯಮಾಡಿ ಏನೂ ಮಾತನಾಡಬಾರದೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನದಲ್ಲಿ ಆದಂಥ ಬೆಳವಣಿಗೆ ಬಹುಶ: ಕರ್ನಾಟಕದ ವಿಧಾನ ಸಭೆಯ ಇತಿಹಾಸದಲ್ಲಿ ಎಂದೂ ಆಗಿರಲಿಲ್ಲ. ಇಂಥ ಘಟನೆಗಳು ಯಾವಾಗಲೂ ಆಗಬಾರದು. ಇದು ಪ್ರಜಾಪ್ರಭುತ್ವಕ್ಕೆ, ಸಂಸದೀಯ ವ್ಯವಸ್ಥೆಗೆ ಕ್ಷೋಭೆ ತರತಕ್ಕ ಪದ್ಧತಿಯಲ್ಲ. ನಾನು 1983 ರಿಂದ ಇಲ್ಲಿದ್ದೇನೆ, ಮಾನ್ಯ ಯಡಿಯೂರಪ್ಪನವರೂ 1983ರಿಂದ ಇಲ್ಲಿದ್ದಾರೆ. ಅನೇಕ ಜನ ಸ್ನೇಹಿತರನ್ನು ನಾನು ಕೇಳಿದೆ. ಅದಕ್ಕಿಂತಾ ಹಿಂದೆ ಕೂಡ ಈ ರೀತಿಯ ಘಟನೆಗಳು ಇಲ್ಲಿ ನಡೆದಿಲ್ಲ. ಕುಮಾರಸ್ವಾಮಿಯವರು ಈಗ ಈ ಸದನದ ಸದಸ್ಯರಲ್ಲ. ಅವರು ಹೊರಗಡೆ ಅವಹೇಳನಕಾರಿ ಅಥವಾ ಮುಖ್ಯಮಂತ್ರಿಗೆ ಅಪಮಾನಕರವಾದ statement ಮಾಡಿದ್ದಾರೆ ಅದು ಇಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ಆ ರೀತಿ ಹೇಳಬೇಕೆಂದು ನಾನು ಹೇಳುವುದಿಲ್ಲ. ಆ ರೀತಿ ಹೇಳಬಾರದು. ಯಾರೂ ಕೂಡ ಪರಸ್ಪರ ನಮ್ಮ ಗೌರವವನ್ನು ನಾವೇ ಹಾಳು ಮಾಡಿಕೊಳ್ಳಬಾರದು. ನಾವು ಇಲ್ಲಿ 6 ಕೋಟಿ ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೋಸ್ಕರ ಬಂದಿರತಕ್ಕದ್ದು. ಅದನ್ನು ಬಿಟ್ಟು ನಾವು defamatory and derogatory statementಗಳನ್ನು ಒಬ್ಬರಿಗೊಬ್ಬರು ಮಾಡಿಕೊಳ್ಳುವುದಿದೆಯಲ್ಲಾ ಅದನ್ನು 6 ಕೋಟಿ ಜನರು ಗಮನಿಸುತ್ತಾರೆ. ಅದರ ಮೂಲಕ ನಮ್ಮ ರಾಜಕೀಯ ಸಂಸ್ಕೃತಿಯೇನು ಎಂದು ಜನರು ತೀರ್ಮಾನ ಮಾಡುತ್ತಾರೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ನಾನು ಒಂದು ಬಾರಿ ಹಂದಿ ಜ್ವರ ಬಂದಿದೆ, ಮಂತ್ರಿಗಳು ಯಾವಾಗಲೂ ಇರುವುದಿಲ್ಲವೆಂದು ಹೇಳಿದ್ದಕ್ಕೆ ಜನಾರ್ಧನ ರೆಡ್ಡಿಯವರು ಒಂದು ಪ್ರೆಸ್

ಸ್ಟೇಟ್‌ಮೆಂಟ್ ಮಾಡಿದ್ದರು. ಈಗ ಜನಾರ್ಧನ ರೆಡ್ಡಿ ಸದನಕ್ಕೆ ಇಂದು ಈಗ ಬಂದಿಲ್ಲ. ಅವರು ಸ್ಟೇಟ್‌ಮೆಂಟ್ ಮಾಡಿರುವುದರಲ್ಲಿ ಏನು ಹೇಳಿದ್ದರೆಂದರೆ, ಸಿದ್ದರಾಮಯ್ಯನವರು ಶ್ರೀರಾಮುಲು ಬಗ್ಗೆ ಬೇಕೆಂತಲೇ ಸ್ಟೇಟ್‌ಮೆಂಟ್ ಮಾಡುತ್ತಾರೆ, ಆದುದರಿಂದ ಅವರಿಗೆ ಹಂದಿಜ್ವರ ಬರಲಿ ಎಂದು ಹೇಳಿಬಿಟ್ಟರು. ನಾವು ಅದಕ್ಕೆ ಪ್ರೆಸ್‌ನವರಿಗೆ ಏನು ಹೇಳಿದನೆಂದರೆ, ಅಲ್ಲಪ್ಪಾ ಅವರ ಕಲ್ಚರ್ ಅಷ್ಟು, ನಾನೇನೂ ಮಾಡುವುದಕ್ಕಾಗುವುದಿಲ್ಲ, ನಾನು ಇದರ ಬಗ್ಗೆ ಟೀಕೆ ಮಾಡುವುದಿಲ್ಲ, it is uncivilized statement ಎಂದು ಹೇಳಿ ಅಷ್ಟಕ್ಕೇ ಅದನ್ನು ಬಿಟ್ಟುಬಿಟ್ಟೆ. ಆದುದರಿಂದ ನಾನೇನು ಹೇಳುತ್ತೇನೆಂದರೆ, ಯಾರೂ ಆ ರೀತಿ ಮಾಡಬಾರದು. ಮುಖ್ಯಮಂತ್ರಿಗಳಾದವರು ಈ ರಾಜ್ಯದ ಆರು ಕೋಟಿ ಜನರನ್ನು ಪ್ರತಿನಿಧಿಸುವುದು ನಿಜವಾದ ವಿಷಯ. ಆದರೆ ಇಲ್ಲಿ ಆ ವಿಷಯ ಚರ್ಚೆ ಮಾಡುವ ಅಗತ್ಯವಿರಲಿಲ್ಲ. ಏಕೆಂದರೆ ಅದು ಪ್ರಿವಿಲೇಜ್‌ಗೆ ಬರುವುದೂ ಇಲ್ಲ. ಇದು ಒಂದು ಅಂಶ. ಇನ್ನು ಎರಡನೆಯದಾಗಿ ಆಡಳಿತ ಪಕ್ಷದ ಎಲ್ಲ ಸದಸ್ಯರು ಬಂದು ಗಲಾಟೆ ಮಾಡಬೇಕಾದಂಥ ಅಗತ್ಯವೂ ಇರಲಿಲ್ಲ. ಆಮೇಲೆ ಒಂದು ನಿರ್ಣಯವನ್ನೂ ಕೂಡ ಮಾಡಿದರಲ್ಲ, ಯಾವುದೇ ನಮ್ಮ ನಿಯಮಾವಳಿಗಳಲ್ಲಿ ಅಂಥ ನಿರ್ಣಯವನ್ನು ಮಾಡುವುದಕ್ಕೆ ಬರುವುದಿಲ್ಲ. ರೂಲ್ 146ರಲ್ಲಿ ಏನು ಹೇಳಲಾಗಿದೆಯೆಂದರೆ, ಒಂದು ನಿರ್ಣಯವನ್ನು ಮಾಡಬೇಕಾದರೆ ಅದನ್ನು ಮಂತ್ರಿಗಳು ಮಾಡುವುದಕ್ಕೆ ಬರುವುದಿಲ್ಲ, ಶಾಸಕರುಗಳ್ಯಾರಾದರೂ ಮಾಡಬಹುದು. ಒಂದು ವೇಳೆ ಆ ರೀತಿ ನಿರ್ಣಯ ಮಾಡುವುದಾದರೆ ಏಳು ದಿನಗಳ ಮುಂಚೆಯೇ ಆ ಬಗ್ಗೆ ನೋಟಿಸ್ ಕೊಟ್ಟು, ಯಾವುದಕ್ಕೋಸ್ಕರ ಮಾಡುತ್ತೇವೆ, ಏನು ಮಾಡುತ್ತೇವೆ, ಯಾರ ವಿರುದ್ಧ ಮಾಡುತ್ತೇವೆ, ಏಕೆ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಹೇಳಿ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಣಯವನ್ನು ಮಾಡಬೇಕಾಗುತ್ತದೆ. ಇಲ್ಲಿ ಆ ರೀತಿಯದ್ದೂ ಕೂಡ ಇಲ್ಲ. ಅದಕ್ಕಾಗಿಯೇ ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಿಮ್ಮ ಅನುಮತಿಯನ್ನು ತೆಗೆದುಕೊಳ್ಳದೆಯೆ ಆ ನಿರ್ಣಯವನ್ನು ಸದನದಲ್ಲಿ ಮಂತ್ರಿಗಳು ಓದಿಬಿಟ್ಟಿದ್ದಾರೆ. ಆ ಇಡೀ statement ಏನಿದೆ it should not go into the record. ಆ ರೀತಿ ಏನಾದರೂ ಆ ಸ್ಟೇಟ್‌ಮೆಂಟ್ ರೆಕಾರ್ಡ್‌ಗೆ ಹೋಗಿದ್ದರೆ ದಯಮಡಿ ಓದಿರುವ ಸ್ಟೇಟ್‌ಮೆಂಟ್‌ನ್ನು ಸಂಪೂರ್ಣವಾಗಿ ದಾಖಲೆಯಿಂದ ತೆಗೆದು ಹಾಕಬೇಕು.

ಏಕೆಂದರೆ ಆ ರೀತಿ ನಿರ್ಣಯ ಮಾಡಲು ಬರುವುದಿಲ್ಲ ಮತ್ತು ತಮ್ಮ ಅನುಮತಿಯನ್ನೂ ಕೂಡ ಅವರು ತೆಗೆದುಕೊಂಡಿಲ್ಲ. ಏಕೆಂದರೆ ನಾನು ಇಲ್ಲಿ ಕುಳಿತುಕೊಂಡು ಎಲ್ಲವನ್ನೂ ನೋಡುತ್ತಿದ್ದೆ. ಅನುಮತಿಯನ್ನು ತೆಗೆದುಕೊಂಡಿಲ್ಲದಿರುವುದರಿಂದ ಅದು ದಾಖಲೆಗೆ ಬರುವುದಿಲ್ಲ. ಇದಲ್ಲದೇ 146ರ ನಿಯಮವೇನಿದೆ ಅದನ್ನೂ ಕೂಡ invoke ಮಾಡುವುದಕ್ಕೆ ಬರುವುದಿಲ್ಲ. ಆ ಕಾರಣದಿಂದ ಅದು ರೆಕಾರ್ಡ್‌ಗೆ ಹೋಗಬಾರದು. ಇದರಿಂದ ಏನಾಗುತ್ತದೆಂದರೆ, ನಮ್ಮನ್ನು ನಾವೇ ಚಿಕ್ಕವರನ್ನಾಗಿ ಮಾಡಿಕೊಂಡಂತಾಗುತ್ತದೆ. ಮುಖ್ಯಮಂತ್ರಿಗಳಿಗೆ ಅವಕಾಶವಿದೆ If you fell that it is defamatory, it is derogatory, in the eye of the people ಅವರ ಗೌರವ ಕಡಿಮೆಯಾಯಿತು, ನಿಜ, ಆ ರೀತಿ ಅವರು ಮಾಡನಾಡಬಾರದಿತ್ತು. ನಾನೂ ಸೇರಿದಂತೆ ಯಾರೂ ಕೂಡ ಆ ರೀತಿ ಮಾತನಾಡಬಾರದು. ಆ ರೀತಿ ಮಾತನಾಡಿದ್ದರೆ the proper forum is Court. ಅವರು ಕೋರ್ಟ್‌ನಲ್ಲಿ defamation case ಹಾಕಲಿ. ಈ ಸದನದಲ್ಲಿ ಸಾಕಷ್ಟು ಹೊಸ ಸದಸ್ಯರುಗಳಿದ್ದಾರೆ. ಈಗ ತಾನೆ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದರು. ನಮ್ಮಲ್ಲಿ ಗುಣಮಟ್ಟದ ಚರ್ಚೆ ದಿನೇ ದಿನೇ ಕುಸಿಯುತ್ತಿದೆ ಎಂದು ಹೇಳಿದರು. ಅದಕ್ಕೆ ನಾವೆಲ್ಲರೂ ಸೇರಿಕೊಂಡು contirbute ಮಾಡುವುದು ಬೇಕಾಗಿಲ್ಲ. ಏಕೆಂದರೆ ಆ ರೀತಿ ಚರ್ಚೆಯ ಗುಣಮಟ್ಟ ಕಡಿಮೆಯಾಗಬಾರದು. ಸಾಧ್ಯವಾದಷ್ಟು ಮಟ್ಟಿಗೆ ಚರ್ಚೆಯ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನವನ್ನು ಮಾಡೋಣ. ನಿಯಮಾವಳಿಗಳ ಚೌಕಟ್ಟಿನಲ್ಲಿ ಅಧಿವೇಶನ ನಡೆಯುವುದಕ್ಕೆ ನಾವೆಲ್ಲರೂ ಸಹಕಾರ ನೀಡಬೇಕಾಗಿರುವುದು ಅಗತ್ಯತೆ ಇದೆ. ಈ ಬಗ್ಗೆ ಹೆಚ್ಚಿನ ಜವಾಬ್ದಾರಿ ಆಡಳಿತ ನಡೆಸತಕ್ಕಂಥ ಸರ್ಕಾರಕ್ಕೆ ಇರುತ್ತದೆ. ನಮ್ಮದೂ ಕೂಡ ಜವಾಬ್ದಾರಿ ಇದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಹೆಚ್ಚು ಜವಾಬ್ದಾರಿ ಆಡಳಿತ ಪಕ್ಷದವರ ಮೇಲಿರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಆದ ರೀತಿಯಲ್ಲಿ ಮುಂದೆ ಆಗದಿರಲಿ. ಮುಖ್ಯಮಂತ್ರಿಗಳು ಸೇರಿದಂತೆ ನಾವೆಲ್ಲರೂ ಕೂಡ ಇನ್ನು ಮುಂದೆ ಇಂಥದ್ದಕ್ಕೆ ಅವಕಾಶ ಕೊಡಬಾರದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಯಾವ ವಿಷಯದ ಬಗ್ಗೆ ಚರ್ಚೆಯಾಗಬೇಕೋ ಅದನ್ನು ಮುಂದುವರೆಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಇನ್ನು ಮುಂದೆ ಇಂಥ ಘಟನಾವಳಿಗಳಾಗಬಾರದೆಂದು ಇದೀಗ ತಾನೆ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿ ಹೇಳಿದ್ದಾರೆ. ನಿನ್ನೆ ಆ ಒಂದು ವಿಚಾರ ನಡೆದಂಥ ಸಂದರ್ಭದಲ್ಲಿ ಆ ಪ್ರೆಸ್ ಮೀಟ್‌ನಲ್ಲಿ ನಾನೂ ಕೂಡ ಇದ್ದೆ. ಅವರೇನೂ ಉದ್ದೇಶಪೂರ್ವಕವಾಗಿ ಹೇಳಬೇಕು ಎನ್ನುವ ರೀತಿಯಲ್ಲಿ ಹೇಳಲಿಲ್ಲ. ಮಾತಿನ ಧಾಟಿಯಲ್ಲಿ, ಮಾತಿನ ಬಿಸಿಯಲ್ಲಿ ಆ ಮಾತನ್ನು ಹೇಳಿದರು. ಆ ಕೂಡಲೇ ಅದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದರು ಮತ್ತು ಹೇಳಿದ ಮಾತನ್ನು ವಾಪಸ್ ತೆಗೆದುಕೊಂಡರು. ಮಾಧ್ಯಮದವರಲ್ಲಿ ಮನವಿ ಮಾಡಿ ದಯಮಾಡಿ ಆ ಭಾಷೆಯಲ್ಲಿ ಮಾತನಾಡಿರುವುದನ್ನು ಪ್ರಕಟಿಸಬೇಡಿ, ನಾನು ಆ ರೀತಿ ಹೇಳಿರತಕ್ಕಂಥದ್ದು ತಪ್ಪು, ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿ ಕೂಡಲೇ ತಾವು ಆಡಿದ ಮಾತನ್ನು ವಾಪಸ್ ತೆಗೆದುಕೊಂಡರು. ಆ ರೀತಿ ತೆಗೆದುಕೊಂಡಿದ್ದರೂ ಮಾಧ್ಯಮದಲ್ಲಿ ಎಲ್ಲಾ ಕಡೆ ಬಂದಿದೆ. ನಾವು ಅದನ್ನು ಎಲ್ಲಾ ಪತ್ರಿಕೆಗಳಲ್ಲಿ ಓದ್ದಿದ್ದೇವೆ. ಆದರೂ ಕೂಡ ಬೆಳಿಗ್ಗೆ ಮುಖ್ಯಮಂತ್ರಿಗಳು ಸದನಕ್ಕೆ ಬಂದಾಗ ಇದರ ಬಗ್ಗೆ ಪ್ರಸ್ತಾಪ ಮಾಡಬಹುದಿತ್ತು.

ಶ್ರೀ ಆರ್. ಅಶೋಕ್: ಅವರು ಬೆಳಿಗ್ಗೆ ಈ ಬಗ್ಗೆ ಹೇಳಿದರು.

ಶ್ರೀ ಹೆಚ್. ಸಿ. ಬಾಲಕೃಷ್ಣ : ಪ್ರಸ್ತಾಪ ಮಾಡಿದರು ಎಂದಿದ್ದಾರೆ. ಆಗಲೇ ನಾನು ಏನೂ ಮಾಡುವುದಿಲ್ಲ, ನಾನೂ ಏನೂ ಮಾತನಾಡುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದರು. ಆ ವಿಚಾರವನ್ನು ಅವರಿಗೆ ನಾನು ಬಿಡುತ್ತೇನೆಂದರು. ಆದರೂ ಕೂಡ ಪಾಪ ಬಚ್ಚೇಗೌಡರು ಪತ್ರಿಕಾ ಹೇಳಿಕೆಯನ್ನು ಮುಖ್ಯಮಂತ್ರಿಗಳಿಗೋಸ್ಕರ ಹೇಳಿದ್ದಾರೆ. ಆದರೆ ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಪತ್ರಿಕಾ ಹೇಳಿಕೆ ಕೊಟ್ಟಿರುವುದು. ನನ್ನ ಪರ್ಸನಲ್.....

ಶ್ರೀ ಹೆಚ್.ಸಿ. ಬಾಲಕೃಷ್ಣ : ನೀವು ಕುಳಿತುಕೊಳ್ಳಿ ಸ್ವಾಮಿ, ನಾವು ಮಾತನಾಡುತ್ತಿರುವಾಗ ನೀವೇಕೆ ಮಾತನಾಡುತ್ತೀರಿ. ನೀವು ಆಮೇಲೆ ಮಾತನಾಡಿ. ಪತ್ರಿಕಾ ಹೇಳಿಕೆಯನ್ನು ನೀವು ಏಕೆ ಮಾಡಿದಿರಿ? ಈಗ ಅಶೋಕ್‌ರವರ ಕೈಯಲ್ಲಿ ... ಈಗ ಅವರು ಹೇಳಿದರು, ಪ್ರೈವೇಟ್‌ದ್ದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ವಿರೋಧ ಪಕ್ಷದ ನಾಯಕರು ಹೇಳಿದರು.

ಅದೇ ರೀತಿ ಮಂತ್ರಿಗಳು ಹೇಳತಕ್ಕಂಥದ್ದು, ಅವರೊಂದು ಪತ್ರಿಕಾ ಹೇಳಿಕೆ ಕೊಡತಕ್ಕಂಥದ್ದು, ಇವೆಲ್ಲವನ್ನೂ ಮಾಡಿಸಿದ್ದಾರೆ ಮುಖ್ಯಮಂತ್ರಿಗಳು. ಅದಕ್ಕಾಗಿ ನಮಗೇನೂ ಬೇಸರವಿಲ್ಲ.

(ಗೊಂದಲ)

ಅಧ್ಯಕ್ಷರು: ಬಾಲಕೃಷ್ಣರವರೆ, ಇದೇ ನಿಮ್ಮ ಸಮಸ್ಯೆ.

ಶ್ರೀ ಬಸವರಾಜ ಬೊಮ್ಮಾಯಿ : ಬಾಲಕೃಷ್ಣರವರೆ, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಬಹಳ ಹಗುರವಾಗಿ ಮಾತನಾಡುತ್ತೀರಲ್ಲ.

(ಗೊಂದಲ)

ಅಧ್ಯಕ್ಷರು: ಬಾಲಕೃಷ್ಣರವರೆ, ಇದುವರೆಗೂ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಅವರೇನಾದರೂ ನೀವು ಬಳಸಿದ ಪದವನ್ನು ಎಲ್ಲಾದರೂ ಒಂದು ಕಡೆ ಬಳಸಿದರೆ ಹೇಳಿ. ನೀವೇಕೆ ಈ ರೀತಿ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಗೌರವ ಕೊಟ್ಟು ಗೌರವ ತೆಗೆದುಕೊಳ್ಳುವುದನ್ನು ಕಲಿಯಿರಿ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಏಕೆ ನೀವು ಹಗುರವಾಗಿ ಮಾತನಾಡುತ್ತೀರಿ.

ಅಧ್ಯಕ್ಷರು: ವಿಷಯ ಇಲ್ಲಿಗೇ ಮುಗಿದುಹೋಗಿದ್ದದ್ದನ್ನು ಮತ್ತೆ ನೀವು ಈ ರೀತಿ ಮಾತನಾಡಿ ಮತ್ತೆ ಮುಂದುವರೆಸಬೇಕೆಂದು ವಿಚಾರ ಮಾಡಿದ್ದೀರೇನು? ರೂಲ್ 69 ರದ್ದು ಎರಡ್ಮೂರು ವಿಷಯಗಳ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಾನು ಯೋಚನೆ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳು ಕೂಡ ತಯಾರಾಗಿ ಬಂದಿರುವವರು. ನೋಡಿ, ಬಾಲಕೃಷ್ಣರವರೆ, ಈಗ ವಿರೋಧ ಪಕ್ಷದ ನಾಯಕರು ಯಾವ ರೀತಿ ಮಾತನಾಡಿದರು ಹೇಳಿ ಅವರು ನಿಮ್ಮ ಹಾಗೆ ಏನನ್ನಾದರೂ ಮಾತನಾಡಬಹುದಿತ್ತಲ್ಲ. ಆದರೆ ಅವರು ಆ ರೀತಿ ಮಾತನಾಡಲಿಲ್ಲ. ನೀವು ಏಕೆ ಈ ರೀತಿಯಲ್ಲಿ ಮಾತನಾಡುತ್ತೀರಿ. ತಾವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಅವರು ಕಲ್ಲಿದ್ದಲಿನ ಬಗ್ಗೆ ಮಾತನಾಡಲಿ, ವಾಶ್ ಎಷ್ಟು ಆಗಿದೆ, ವಾಶ್ ಆಗದೇ ಇರುವುದು ಎಷ್ಟು ಎಂಬ ಬಗ್ಗೆ ಚರ್ಚೆ ಮಾಡಲಿ. ಮುಖ್ಯಮಂತ್ರಿಗಳು ಇಂದು ಹೈದ್ರಾಬಾದ್‌ಗೆ

ಹೋಗುವುದನ್ನು ಕ್ಯಾನ್ಸಲ್ ಮಾಡಿ ಸದನಕ್ಕೆ ವಾಪಸ್ ಬಂದಿದ್ದಾರೆ. ಚರ್ಚೆಗೆ ಅವಕಾಶ ಕೊಡಿ, ನಾನೂ ಕೂಡ ಮಾತನಾಡುತ್ತೇನೆಂದು ಹೇಳಿ ಅವರು ವಾಪಸ್ ಸದನಕ್ಕೆ ಬಂದಿದ್ದಾರೆ. ಆದುದರಿಂದ ಈಗ ಕಲ್ಲಿದ್ದಲಿನ ಬಗ್ಗೆ ಮಾನ್ಯ ರೇವಣ್ಣವರು ಮಾತನಾಡಲಿ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಆಯಿತು ಅಧ್ಯಕ್ಷರೆ, ಆ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನೂ ಮಾಡಿಸಿಲ್ಲ. (ಗೊಂದಲ)

ಅಧ್ಯಕ್ಷರು: ಬಾಲಕೃಷ್ಣರವರೆ, ಹೇಗೆ ಮಾತನಾಡಬೇಕು ಎಂಬುದನ್ನು ತಾವೇಕೆ ಅರ್ಥ ಮಾಡಿಕೊಳ್ಳುವುದಿಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಈ ವಿಚಾರವನ್ನು ಸದನದಲ್ಲಿ ಮೊದಲೇ ಮಾನ್ಯ ಮುಖ್ಯಮಂತ್ರಿಗಳು ಅವರಿದ್ದಾಗ ಹೇಳಿಬಿಟ್ಟಿದ್ದರೆ ಇಂಥದ್ದಕ್ಕೆಲ್ಲಾ ಅವಕಾಶವೇ ಆಗುತ್ತಿರಲಿಲ್ಲ. ಹಗರಣದ ಬಗ್ಗೆ ಚರ್ಚೆ ಶುರುವಾಗುತ್ತಿತ್ತು. ಆದುದರಿಂದ ದಯಮಡಿ ಅವರೆಲ್ಲರೂ ಹಿರಿಯರಿದ್ದಾರೆ. ಅವರೆಲ್ಲರೂ ನಮಗೆ ಮಾರ್ಗದರ್ಶಕರಾಗಬೇಕು. ಮುಂದೆ ಇಂಥದ್ದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದೆಂದು ತಮ್ಮ ಮೂಲಕ ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿರೂಪಾಕ್ಷಪ್ಪ: ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಮಾಡಿರುವುದನ್ನು ನೋಡಿದರೆ ಇವರು ಪೂರ್ವನಿಯೋಜಿತವಾಗಿ ಸಿದ್ಧತೆಯನ್ನು ಮಾಡಿಕೊಂಡು ಬಂದು ಮುಖ್ಯಮಂತ್ರಿಗಳಿಗೆ ಕೆಟ್ಟ ಹೆಸರನ್ನು ತರಬೇಕೆನ್ನುವ ದೃಷ್ಟಿಯಿಂದ ಹೀಗೆಲ್ಲಾ ಮಾಡುತ್ತಿದ್ದಾರೆಂದು ಗೊತ್ತಾಗುತ್ತಿದೆ.

(ಗೊಂದಲ)

ಶ್ರೀ ವಿರೋಪಾಕ್ಷಪ್ಪ : ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿ ಹಾಲಿ ಮುಖ್ಯಮಂತ್ರಿ ಬಗ್ಗೆ ಇಂಥ ಪದವನ್ನು ಬಳಸಿದ್ದಾರೆಂದರೆ ನಮ್ಮ ಭಾವನೆಗಳಿಗೆ ಆಗಿರತಕ್ಕಂಥ ನೋವನ್ನು ನಾವು ಯಾವ ರೀತಿ ವ್ಯಕ್ತಪಡಿಸಬೇಕು?

ಶ್ರೀ ಕೆ. ಎಂ. ವಿರೂಪಾಕ್ಷಪ್ಪ : ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿ ಆ ರೀತಿಯಾದಂತಹ ಶಬ್ದಗಳನ್ನು ಬಳಸಿದ್ದಾರೆಂದರೆ ನಮ್ಮ ಭಾವನೆಗಳಿಗೆ ಆಗಿರುವಂತಹ ನೋವನ್ನು ನಾವು ಯಾವ ರೀತಿ ವ್ಯಕ್ತಪಡಿಸಬೇಕು? ನಾವು ಈ ಸದನದಲ್ಲಿ ವ್ಯಕ್ತಪಡಿಸದೇ ಎಲ್ಲಿ ವ್ಯಕ್ತಪಡಿಸಬೇಕು? ಅವರು ಈ ರೀತಿ ವರ್ತನೆ ಮಾಡಿದ್ದಾರೆ, ದಯಮಡಿ

ಅವರು ಈ ರೀತಿಯಾದಂತಹ ಪದಗಳನ್ನು ಬಳಸಬಾರದು. ಅವರು ಈ ರೀತಿ ಶಬ್ದಗಳನ್ನು ಬಳಸಿರುವುದನ್ನು ನಾವು ಖಂಡಿಸುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಈ ವಿಧಾನಮಂಡಲ ದೇವಸ್ಥಾನಕ್ಕಿಂತಲೂ ಕೂಡ ಪವಿತ್ರ ಎಂದು ಭಾವಿಸಿರುವಂತಹ ಜನ ನಾವು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರಾಮನ ಹೆಸರಿನಲ್ಲಿ ಇರುವಂತಹ ಪಾವಿತ್ರ್ಯತೆ ರಾವಣನಿಗೆ ಗೊತ್ತಾಗುವುದಿಲ್ಲ. ನಾನು ಹೇಳಿದ್ದು ಬೇರೆ. ಇವತ್ತು ಆಗುತ್ತಿರುವಂತಹ ಪ್ರಸ್ತಾಪ, ಈ ರಾಜ್ಯದಲ್ಲಿರುವಂತಹ ಸಾಮಾನ್ಯ ಜನರಿಗೆ ಇರಬಹುದು, ನಮ್ಮ ಪಕ್ಷದ ಕಾರ್ಯಕರ್ತರಿಗೆ ಇರಬಹುದು, ಇವರಿಗೆಲ್ಲ ಆಗಿರುವಂತಹ ನೋವನ್ನು ಯಾವರೀತಿ ಜಥಿಡಿಝ ಮಾಡಬೇಕೆಂದು ಸತ್ಯವಾಗಲೂ ನಮಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಿದ್ದರಾಮಯ್ಯನವರೇ, ಇದನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ. ಏಕೆಂದರೆ ಕರ್ನಾಟಕ ರಾಜ್ಯದ ವಿಧಾನಸಭೆಯ ಒಳಗೆ ಹೋಗಿ ಕಾಲಿಡುತ್ತೇವೆ ಎನ್ನುವ ನಂಬಿಕೆ ನಮಗೆ ಯಾರಿಗೂ ಇರಲಿಲ್ಲ. ಈ ರಾಜ್ಯದ ಹಳ್ಳಿಯಲ್ಲಿರುವಂತಹ ರೈತರ ಸಮಸ್ಯೆ ನಮಗೆ ಯಾರಿಗೂ ಗೊತ್ತಿರಲಿಲ್ಲ. ಕಾಶ್ಮೀರ ಸಮಸ್ಯೆ, ಗೋಹತ್ಯೆ ವಿಚಾರ, ರಾಮಮಂದಿರದ ವಿಚಾರದ ಬಗ್ಗೆ ಹೋರಾಟ ಮಾಡಿಕೊಂಡು ನಾವು ಬಂದವರು. ಇಡೀ ರಾಜ್ಯದಲ್ಲಿ ರೈತರ ಪರವಾಗಿ ಹಳ್ಳಿ ಹಳ್ಳಿಯಲ್ಲಿ ತೆಗೆದುಕೊಂಡು ಹೋಗಿ ಭಾರತೀಯ ಜನತಾ ಪಕ್ಷವನ್ನು ಕಟ್ಟಿ, ಈ ರಾಜ್ಯದ ರೈತರಿಗೆ ಅನುಕೂಲವಾಗಬೇಕೆಂದು ಹೇಳಿ ಹೋರಾಟ ಮಾಡಿಕೊಂಡು ಬಂದಿರುವಂತಹ ಒಬ್ಬ ವ್ಯಕ್ತಿ ಮುಖ್ಯಮಂತ್ರಿ ಆಗಿರುವಂತಹ ಸಂದರ್ಭದಲ್ಲಿ ಈ ರಾಜ್ಯದ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದು ಒಂದೂವರೆ ವರ್ಷಗಳಿಂದ ಸಾಕಷ್ಟು ಶ್ರಮ ಹಾಕುತ್ತಿದ್ದಾರೆ. ಅದನ್ನು ಕೆಲವರು ಒಪ್ಪಬಹುದು, ಒಪ್ಪದಿರಬಹುದು. ನಾನು ಇವತ್ತು ನಿಮಗೆ ಹೇಳುವುದಕ್ಕೆ ಹೊರಟಿರುವುದು ಏನೆಂದರೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದಂತಹ ಅನೇಕ ಅಂಶಗಳನ್ನು ನಾನು ಒಪ್ಪುತ್ತೇನೆ. ಯಾರಿಗೆ ಮೈ ಚುಚ್ಚುತ್ತದೆ ಅವರಿಗೆ ಮಾತ್ರ ನೋವು ಗೊತ್ತಾಗುವುದು. ಚುಚ್ಚಿದರೆ ಏಕೆ ಹೀಗೆ ಮಾಡುತ್ತೀಯಾ? ನಿನಗೆ ಏನಾಗುತ್ತದೆ? ನಿನಗೆ ಒದ್ದರೆ ಏನಾಗುತ್ತದೆ? ಅದೇನು ಮಹಾ,

ಸುಧಾರಿಸಿಕೋ ಎಂದರೆ ಸ್ವತ: ಯಾರಿಗೆ ಅನುಭವವಾಗಿರುತ್ತದೆ, ಅವರಿಗೆ ಅರ್ಥವಾಗುತ್ತದೆ. ಇವತ್ತು ನಾನು ಹೇಳುವುದಕ್ಕೆ ಹೊರಟಿರುವುದು ಖಂಡಿತಾ ಈ ಸದನವನ್ನು ರಾಜಕೀಯಕ್ಕೆ ದುರ್ಬಳಕ್ಕೆ ಮಾಡಿಕೊಡುವುದಕ್ಕೆ ನಾವು ತಯಾರಿಲ್ಲ. ಕರ್ನಾಟಕ ರಾಜ್ಯದಲ್ಲಿ ಈ ಸದನದ ಹೊರಗಡೆ ಹೋರಾಟ ಮಾಡಿಕೊಂಡು ಬಂದಿರುವುದಕ್ಕೋಸ್ಕರವೇ ಇವತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಕುಳಿತ್ತಿದ್ದೇವೆ, ಅವರು ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಹೇಳುವುದಕ್ಕೆ ಹೊರಟಿರುವುದು ಏನೆಂದರೆ, ನಿಜ, ಕಾನೂನುಗಳು ಬಹಳ ಜನಕ್ಕೆ ಗೊತ್ತಿಲ್ಲ. ಇವರು ಈಗ ಮೂವ್ ಮಾಡಿದರಲ್ಲ, ಅದನ್ನು ಅವರು ಮೇಲೆ ಎತ್ತಿ ಹಿಡಿಯುತ್ತಾರೋ, ಬಿಡುತ್ತಾರೋ, ಅದು ಅವರಿಗೆ ಸಂಬಂಧಪಟ್ಟಿದ್ದು. ಆದರೆ ಪ್ರಶ್ನೆ ಏನೆಂದರೆ ನಾನು ಕಳೆದ ವಿಧಾನಸಭೆಯಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿದಾಗ ವಿರೋಧ ಪಕ್ಷದ ನಾಯಕರಾದಂತಹ ಮಲ್ಲಿಕಾರ್ಜುನ ಖರ್ಗೆಯವರಿಗೆ ನೋವಾಯಿತು. ಅದು ಸ್ವಾಭಾವಿಕ. ಶ್ರೀಮತಿ ಸೋನಿಯಾ ಗಾಂಧೀಯವರ ಬಗ್ಗೆ ಶ್ರೀಮತಿ ಸುಷ್ಮಾ ಸ್ವರಾಜ್‌ಯವರು ಬಹಳ ಹಗುರವಾಗಿ ಹೊರಗಡೆ ಮಾತನಾಡಿದರು. ಮಾತನಾಡಿದ್ದು ಸರಿಯೇ ತಪ್ಪೇ ಎನ್ನುವುದರ ಬಗ್ಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನೀವು ಹೌದು ಎಂದು ತೀರ್ಮಾನ ಮಾಡಿದಿರಿ. ಹೊರಗಡೆ ಯಾರೋ ಮಾತನಾಡಿದರು, ಇಲ್ಲಿ ಅದನ್ನು ಏಕೆ ಪ್ರಸ್ತಾಪ ಮಾಡಿದರು, ಬಿಟ್ಟರು ಎನ್ನುವುದು ಗೊತ್ತಿಲ್ಲ. ಆದರೆ ಅಂದು ಅವರು ಮಾತನಾಡಿದಂತಹ ಸಂದರ್ಭದಲ್ಲಿ ಸುಷ್ಮಾ ಸ್ವರಾಜ್ ಬಗ್ಗೆ ಅನೇಕ ಭಾಷೆಗಳನ್ನು ಬಳಸಿದಾಗ ನಮಗೆ ನೋವಾಯಿತು. ನಿಲುವಳಿ ವಿಚಾರದಲ್ಲಿ ಹೊರಗಡೆ ಯಾರೋ ಮಾತನಾಡಿದ್ದನ್ನು ಇಲ್ಲಿ ಏಕೆ ತರುತ್ತೀರಿ ಎಂದು ನಾವು ಅಂದು ಪ್ರಸ್ತಾಪ ಮಾಡಿದೆವು. ಆದರೆ ಇಲ್ಲಿ ಇವತ್ತು ಪ್ರಶ್ನೆ ಬಂದಿರುವುದು, ನಾನು ಅದನ್ನು ಹೇಳಲಿಲ್ಲ. ಕಾನೂನು ವಿಚಾರವಾಗಿ ಯಾವುದು ಹೌದು, ಯಾವುದು ಅಲ್ಲ ಎನ್ನುವುದು ಅಲ್ಲ. ಈ 20 ತಿಂಗಳು ಮಾನ್ಯ ಯಡಿಯೂರಪ್ಪನವರು ಏನು ಎನ್ನುವುದನ್ನು ದಿನ ದಿನ, ನಿಮಿಷ ನಿಮಿಷ, ಗಂಟೆ ಗಂಟೆ ಅವರ ಜೊತೆಗೆ ಕಳೆದಂತಹ ಕುಮಾರಸ್ವಾಮಿಯವರ ಬಾಯಿಯಲ್ಲಿ ಬಂದಂತಹ ಮಾತಿನಿಂದ ಮಾನ್ಯ ಯಡಿಯೂರಪ್ಪನವರಿಗೆ ಮಾತ್ರ ನೋವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರಿಗೆ ನೋವಾಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಮಗೆ ಮಾತ್ರ ಸತ್ಯವಾಗಿ ಹೇಳುತ್ತೇನೆ, ಪ್ರಾಣ ಕಳೆದುಕೊಂಡಷ್ಟು

ನೋವಾಗಿದೆ. ಇದನ್ನು ಹೇಗೆ ಹೇಳಬೇಕು? ಎಲ್ಲಿ ಹೇಳಬೇಕು? ನೀವು ವಿರೋಧ ಪಕ್ಷದ ನಾಯಕರಾಗಿ ಪ್ರಕಾರ ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳಲೇಬೇಕು, ಹೇಳಿ. ಆದರೆ ಅವರೆಲ್ಲರ ಭಾವನೆ ಇದೆಯಲ್ಲ, ಪ್ರತಿಯೊಬ್ಬ ವ್ಯಕ್ತಿ ಮೂಲೆಯಲ್ಲಿ ಬಿದ್ದಂತಹವರನ್ನು ಈ ಪಕ್ಷ, ಈ ಸಂಘಟನೆ, ಈ ನಾಯಕರು ಕರೆದುಕೊಂಡು ಬಂದು ವಿಧಾನಸಭೆಯಲ್ಲಿ ಕೂರಿಸಿದ್ದಾರೆ, ನಿಮಗೆ ವೈಯಕ್ತಿಕವಾಗಿ ಈ ಮಾತನ್ನು ಹೇಳಿದ್ದರೆ, ಏಕೆಂದರೆ ಆ ಮಾತನ್ನು ಬಳಸಿದಾಗ ನಮ್ಮ ಸಂಸ್ಕೃತಿ ಪ್ರಕಾರ ವಾಪಸ್ಸು ಹೋಗಿ ಹೊಡೆಯುವುದಾಗಲಿ, ಆ ಭಾಷೆ ಬಳಸುವುದಾಗಲಿ ನಮ್ಮ ಜೀವನದಲ್ಲಿ ಗೊತ್ತಿಲ್ಲ. ನಾವು ಕುಡಿದಂತಹ ತಾಯಿ ಮೊಲೆ ಹಾಲು ಬಹಳ ಪವಿತ್ರವಾದುದು. ನಮಗೆ ಸಂಘಟನೆ ಕೊಟ್ಟಿರುವಂತಹ ಸಂಸ್ಕೃತಿ ಇದೆಯಲ್ಲ ಬಹಳ ವಿಶೇಷವಾಗಿ ಇದೆ. ನೋವನ್ನು ಈ ರೀತಿ ತೋಡಿಕೊಳ್ಳುತ್ತಿರುವುದು ತಪ್ಪು ಎಂದು ಸಮಾಜದಲ್ಲಿ ಜನ ಹೇಳಿದರೆ ತಪ್ಪೇ, ನಾನು ತಪ್ಪಲ್ಲವೆಂದು ಹೇಳುವುದಿಲ್ಲ. ಈ ಘಟನೆ ಆದಂತಹ ಸಂದರ್ಭದಲ್ಲಿ ನಿನ್ನೆಯಿಂದ ಇವತ್ತಿನವರೆಗೂ ಕೂಡ ಇದರ ಬಗ್ಗೆ ನಾವು ಯಾರೂ ಕೂಡ ಬಾಯಿ ಬಿಟ್ಟಿಲ್ಲ. ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಪ್ರಸ್ತಾಪ ಮಾಡಿದರು ಎಂದು ನೋಡಿದಿರಿ. ಇಲ್ಲಿ ಪ್ರಶ್ನೆ ಬಂದಿದ್ದು, ಸಿಟ್ಟಿನಿಂದ ಕೆಲವು ಯುವ ಶಾಸಕರು ಕ್ಷಮೆ ಕೇಳಬೇಕೆಂದು ಕೇಳಿದ್ದು ತಪ್ಪು ಎಂದು ನೀವು ಹೇಳುವುದಾದರೆ ಅದು ತಪ್ಪೇ. ಅದರ ತೀರ್ಮಾನ ನೀವು ಮಾಡಿ. ಅವರನ್ನು ಇಲ್ಲಿಗೆ ಕರೆಸಿ ಛೀಮಾರಿ ಹಾಕುವಂತಹ ವ್ಯವಸ್ಥೆ ಇಲ್ಲವೆಂದು ನೀವು ಹೇಳಿದಿರಿ. ಅದಕ್ಕೆ ನಾನು ಹೇಳಿದೆನಲ್ಲ, ಬಹಳ ವರ್ಷಗಳಲ್ಲಿ ನಮಗೆ ಈ ಸಂಸದೀಯ ನಡವಳಿಕೆಗಳಲ್ಲಿ ಕಾನೂನು ವಿಚಾರದಲ್ಲಿ ನನಗೆ ಅಷ್ಟು ಗೊತ್ತಿಲ್ಲ. ಆದರೆ ಇಲ್ಲಿ ಒಂದೆರಡು ಘಟನೆಗಳ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಕರೆದು ಛೀಮಾರಿ ಹಾಕುವಂತಹ ವ್ಯವಸ್ಥೆಗಳಲ್ಲಿ ಮಿಸ್ಟರ್ ಪೋತನ್ ಜೋಸೆಫ್, ಆರ್.ಕೆ. ಕರಂಬಿಯಾ. . .

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ನೀವು ಈ ರೀತಿ ಸುಮ್ಮನೆ ಕುಳಿತುಕೊಂಡು,

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನೋಡಿ ನಾನು ಅದಕ್ಕೆ ಹೇಳಿದೆ, ನಾನು ಮುಕ್ತಾಯ ಮಾಡುವುದಿಲ್ಲವೆಂದು ಅಲ್ಲ, ಮುಕ್ತಾಯ ಮಾಡುತ್ತೇನೆ. ನಾನು ಹೇಳುತ್ತಿರುವುದು ಬೇರೆ. ದಯವಿಟ್ಟು ತಡೆಯಿರಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿಯ ಯುವ ಶಾಸಕರ ಆಕ್ರೋಶ ಇಲ್ಲಿಗೆ ಸೀಮಿತವೆಂದು ತಿಳಿದುಕೊಳ್ಳಬೇಡಿ. ಇದು ಕರ್ನಾಟಕ ರಾಜ್ಯದಲ್ಲಿರುವ ಲಕ್ಷಾಂತರ ಕಾರ್ಯಕರ್ತರ ಆಕ್ರೋಶ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಆಯಿತು, ಅದರ ಬಗ್ಗೆ ಆಚೆ ತೀರ್ಮಾನ ಮಾಡಲಿ ಬಿಡಿ. ಅದರ ಬಗ್ಗೆ ಹೇಳಿದ್ದೇವೆ, ಅವರು ಆ ಕ್ಷಣದಲ್ಲಿ ಕ್ಷಮೆ ಹೇಳಿದರು. ಆದರೆ ಅದನ್ನು ಪುನ: ಪುನ: ತಿರುವಿ ಹಾಕಿಕೊಂಡು, ಮುಗುಚಿ ಹಾಕಿಕೊಂಡು ಹೋದರೆ ಏನಿದು? ಅವರು ಕ್ಷಮೆ ಕೇಳದಿದ್ದರೆ ಆಗ ಅದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಅವರು ಮಾಧ್ಯಮದ ಮುಂದೆ ಕ್ಷಮೆ ಕೇಳಿದರು. ನಾವು ಅದನ್ನು ಹೇಳಿದೆವು. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಸುಮ್ಮನೆ ಅದನ್ನೇ ತಿರುವಿ ಹಾಕಿಕೊಂಡು

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆ ಟಿ.ವಿ.ನಲ್ಲಿ . . .

ಶ್ರೀ ಹೆಚ್. ಸಿ. ಬಾಲಕೃಷ್ಣ : ನೀವು ನೋಡುತ್ತಿರುವಂತಹ ಪತ್ರಿಕೆಯಲ್ಲೇ ಕ್ಷಮೆ ಕೇಳಿದರು ಎಂದು ಬಂದಿದೆ. ಪುನ: ಚರ್ಚೆ ಮಾಡುವಂತಹ ಅವಶ್ಯಕತೆ ಏನಿತ್ತು?

ಶ್ರೀ ಹೆಚ್.ಡಿ. ರೇವಣ್ಣ: ಇವರು ಹಗರಣ ಮುಚ್ಚಿ ಹಾಕುವುದಕ್ಕೆ

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ನಿಮ್ಮ ಹಗರಣ ಹೊರಗಡೆ ಬರುತ್ತದೆ ತಡೆಯಿರಿ. ನಿಮ್ಮ ಹಗರಣ ಹೊರಗಡೆ ಬರುತ್ತದಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಬರಲಿ,

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಇವತ್ತು ಕರ್ನಾಟಕ ರಾಜ್ಯದ ಜನ ಮಾತ್ರ ಟಿ.ವಿ ನೋಡಿಲ್ಲ. ಭಾರತ ದೇಶದ ಜನ ಮಾತ್ರ ಟಿ.ವಿ ನೋಡಿಲ್ಲ. ಪ್ರಪಂಚದ ಎಲ್ಲಾ ಜನರು ಕೂಡ ಒಬ್ಬ ಮಹಾಪುರುಷ ಯಾವ್ಯಾವ ರೀತಿ ಮಾತನಾಡಿದರು, ಕ್ಷಮೆ ಏನು ಕೇಳಿದರು ಎಂದು ಇಡೀ ಪ್ರಪಂಚ ನೋಡಿಯಾಯಿತು. ಅದನ್ನು ಯಾರ ಬಗ್ಗೆ ಮಾತನಾಡಿರುವುದು. ನಾಲಿಗೆ ವ್ಯಕ್ತಿಯ ಕುಲವನ್ನು ಹೇಳುತ್ತದೆಂದು ಹೇಳುತ್ತಾರೆ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ ಮುಖ್ಯಮಂತ್ರಿಗಳಾಗಿದ್ದಂತಹವರ, ಪ್ರಧಾನ

ಮಂತ್ರಿಗಳಾಗಿದ್ದಂತಹವರ ಜೀವನ ಬೇರೆ ಯುವ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿರಬೇಕು. ನಾನು ರೇವಣ್ಣನವರಿಗೆ ಬಾಯಿಗೆ ಬಂದ ಹಾಗೆ ಬಯ್ಯುವುದು, ಆಮೇಲೆ ಕ್ಷಮೆ ಕೇಳುವುದು.

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೇ, ದಯಮಾಡಿ ಸಬ್ಜೆಕ್ಟ್‌ಗೆ ಬರುವುದಾದರೆ ಬನ್ನಿ. ನಮಗೆ ಹಳ್ಳಿಯಲ್ಲಿ ಜನ ಕರೆಯುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ: ದಯಮಾಡಿ ನೀವು ಏನು ವಿಚಾರ ಮಾಡಿ, ನಮಗೂ ಕಥೆ ಹೇಳುವುದು ಗೊತ್ತಾಗುತ್ತದೆ. ನಮ್ಮ ಹತ್ತಿರ ಅಡುಗಲಜ್ಜಿ ಕಥೆ ಹೇಳಿಸಬೇಡಿ, ಇಲ್ಲಿ ಈಶ್ವರಪ್ಪನವರ ಅಡುಗಲಜ್ಜಿ ಕಥೆ ಹೇಳುವುದಕ್ಕೆ ಬಂದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಇದು ಯಾವ ಸಂಸ್ಕೃತಿ. ಇದನ್ನು ಓದಲೇ? ನಮ್ಮವರೆಲ್ಲ ಸತ್ಯಹರಿಶ್ಚಂದ್ರರು, ಅವರೆಲ್ಲ ಕಳ್ಳರು ಎಂದು ಹೇಳುತ್ತಾರಲ್ಲ, ಇದನ್ನು ಮಾಡಿರುವುದನ್ನು ಓದಲೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಚುನಾವಣೆಯ ಸಮಯದಲ್ಲಿ ರಸ್ತೆಯ ಹಿಡಿದುಕೊಂಡು ಗೂಂಡಾಗಿರಿ ಮಾಡಿದವರು ಯಾರು ಸ್ವಾಮಿ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಸಂಜೆ 6 ಗಂಟೆಯ ಮೇಲೆ ಏಕೆ ಇದ್ದರು?

(ಗೊಂದಲ)

ಶ್ರೀ ಆರ್. ಅಶೋಕ್: ಅದಕ್ಕೆ ಕಾನೂನು ಇಲ್ಲವೇ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಚುನಾವಣಾ ವಿಚಾರ ಚರ್ಚೆ ಮಾಡೋಣವೆಂದರೆ ನಾವೂ ಮಾಡುತ್ತೇವೆ. ನಾವೂ ಏನಾಯಿತು ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಗೂಂಡಾಗಿರಿ ಮಾಡಿ ಬೇರೆಯವರಿಗೆ ಹೇಳುತ್ತೀರಲ್ಲಾ?

(ಗೊಂದಲ)

ಶ್ರೀ ಎಸ್.ಆರ್. ಶ್ರೀನಿವಾಸ್: ನೀವು ಗೂಂಡಾಗಳು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನೀವೆಲ್ಲಾ ಗೂಂಡಾಗಳು. ಬೇರೆಯವರಿಗೆ ಮಾತನಾಡುತ್ತೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾರೂ ಗೂಂಡಾಗಳು? ಒಬ್ಬರು ಸಚಿವರಾಗಿ ಹೇಗೆ ಮಾತನಾಡುವುದೆಂದು ಗೊತ್ತಿದೆಯೇ? ಅವರೇನು ಹೇಳುವುದು?

(ಗೊಂದಲ)

ಅಧ್ಯಕ್ಷರು: ಈ ರೀತಿಯಾದರೆ ಸದನವನ್ನು ನಡೆಸುವುದಕ್ಕೆ ನನ್ನಿಂದ ಆಗುವುದಿಲ್ಲ. ಈಗ ಸದನವನ್ನು ನಾನು ಅನಿರ್ದಿಷ್ಟ ಅವಧಿಯವರೆಗೆ ಮುಂದಕ್ಕೆ ಹಾಕುತ್ತಿದ್ದೇನೆ.

(ಸದನವನ್ನು ರಾತ್ರಿ 7 ಗಂಟೆ 55 ನಿಮಿಷಕ್ಕೆ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು)

ಅನುಬಂಧ–1

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2009

(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 39)

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು, (1957ರ ಕರ್ನಾಟಕ ಅಧಿನಿಯಮ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;